# brown book

THE BOOK WAS DRENCHED

TEXT LITE WITHIN THE BOOK ONLY

UNIVERSAL
LIBRARY
OU_202259
UNIVERSAL
LIBRARY

|| ಶ್ರೀರಸ್ತು ||

# ವೇಣೀಸಂಹಾರ ನಾಟಕಂ

ವ್ಯಾಕರಣ ವಿದ್ವಾನ್

ಎಂ. ಕೆ. ಶ್ರೀನಿವಾಸರಾಘವಾಚಾರ್ಯರಿಂದ

ಕನ್ನಡಿಸಲ್ಪಟ್ಟು

ಎಂ. ವೆಂಕಟಕೃಷ್ಣಯ್ಯನವರಿಂದ

ಪ್ರಚುರಪಡಿಸಲ್ಪಟ್ಟಿತು.

(All Rights Reserved)

MYSORE:

PRINTED AT THE K. V. V. PRESS,

1921

Price as. 8,

# ಉಪೋದ್ಘಾತ.

ವೇಣೀಸಂಹಾರವೆಂದರೆ ಹೆರಳನ್ನು ಸಂಸ್ಕರಿಸುವುದೆಂದರ್ಥ. ಪಾಂಡವರು ದ್ಯೂತದಲ್ಲಿ ಪರಾಜಿತರಾದ ಸಮಯದಲ್ಲಿ ದುರ್ಯೋಧನನ ಅಪ್ಪಣೆಯಿಂದ ದುರ್ವೃತ್ತನಾದ ದುಶ್ಶಾಸನನು ಪತಿವ್ರತಾಶಿರೋಮಣಿಯಾದ ದ್ರೌಪದಿಗೆ ಮಾನಭಂಗ ಮಾಡಲೆಣಿಸಿ, ಅವಳ ಹೆರಳನ್ನು ಹಿಡಿದು, ಸಭಾಮಂಟಪಕ್ಕೆ ಎಳೆತಂದನು. ಅವನ ಕರಸ್ಪರ್ಶದಿಂದ ಹೆರಳು ಕೆದರಿತು. ಆ ಸಾಧ್ವೀಮಣಿಯು ಈ ಕೇಶಪಾಶವನ್ನು ಆ ದುಶ್ಶಾಸನನ ರಕ್ತದಿಂದ ಬಾಚಿದ ಹೊರತು, ಕಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದಳು. ಅವಳ ಪತಿಗಳಲ್ಲೊಬ್ಬನಾದ ಭೀಮಸೇನನು ದುಶ್ಶಾಸನನನ್ನು ವಧಿಸುವುದರಲ್ಲಿ ಸಮರ್ಥನಾಗಿದ್ದಾಗ್ಯೂ, ಧರ್ಮಕ್ಕೆ ಕಟ್ಟುಬಿದ್ದು, ಧರ್ಮರಾಜನ ಆಜ್ಞಾನುಸಾರವಾಗಿ ಹದಿಮೂರು ವರ್ಷಗಳ ವರೆಗೂ ತನ್ನ ಕೋಪವನ್ನಡಗಿಸಿಕೊಂಡಿದ್ದು, ಅನಂತರದಲ್ಲಿ ದುಶ್ಶಾಸನನ್ನು ಸಂಹರಿಸಿ, ದ್ರೌಪದಿಯ ಹೆರಳನ್ನು ಸಂಸ್ಕರಿಸಿದನು. ಈ ಕಥೆಯು ಮಹಾಭಾರತದಲ್ಲಿ ಇರುವುದು. ಅದರಲ್ಲಿ ಉದ್ಯೋಗಪರ್ವವನ್ನಾರಂಭಿಸಿ, ಧರ್ಮರಾಯನ ಪಟ್ಟಾಭಿಷೇಕದವರೆಗೂ ಇರುವ ಕಥೆಯನ್ನು ಬಹು ಸುಂದರವಾದ ರೀತಿಯಿಂದ ಸಂಗ್ರಹಿಸಿ, ಭಟ್ಟನಾರಾಯಣನೆಂಬ ಮಹಾಕವಿಯು ನಾಟಕ ರೂಪದಲ್ಲಿ ರಚಿಸಿರುವನು.

ಈ ಮಹಾಕವಿಯ ಶ್ಲೋಕಗಳನ್ನು ಶಾರ್ಙ್ಗಧರ ಪದ್ಧತಿಯೆಂಬ ಗ್ರಂಥದಲ್ಲಿಯೂ, ಕಾವ್ಯಪ್ರಕಾಶದಲ್ಲಿಯೂ, ಗಣರತ್ನ ಮಹೋದಧಿಯಲ್ಲಿಯೂ, ಸರಸ್ವತಿ ಕಂಠಾಭರಣದಲ್ಲಯೂ, ಅಲಂಕಾರಸೂತ್ರವೃತ್ತಿಯಲ್ಲಿಯೂ ಉದಹರಿಸಿರುವರು. ಆದುದರಿಂದ ಆಯಾಯ ಗ್ರಂಥಕರ್ತರುಗಳಾದ ಮಮ್ಮಟ, ಭೋಜದೇವ, ವಾಮನ ಮೊದಲಾದವರುಗಳಿಗಿಂತಲೂ ಈ ಕವಿಯು ಪ್ರಾಚೀನನೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಒಂದು ಸಾವಿರ ವರ್ಷಗಳ ಹಿಂದೆ ಈ ಭಟ್ಟನಾರಾಯಣ ಕವಿಯು ಇದ್ದನೆಂದು ತಿಳಿದುಬರುವುದು.

ಮುಖ್ಯವಾಗಿ ' ಶ್ಲೋಕ॥ ಹಸದ್ಭಿಃಕ್ರಿಯತೇಕರ್ಮ ರುದದ್ಭಿರನುಭೂಯತೇ ' ಎಂಬ ನ್ಯಾಯಾನುಸಾರವಾಗಿ ನಗುತ ನಗುತ ಮಾಡಿದ ದುಷ್ಕರ್ಮದ ಫಲವನ್ನು

ಅಳುತಳುತ ಅನುಭವಿಸುವರೆಂಬ ಸಂಗತಿಗೆ ಈ ನಾಟಕದ ದುಶ್ಶಾಸನಾದಿಗಳ ದುಷ್ಕರ್ಮದ ಪರಿಣಾಮಗಳು ಬಹು ಶಿಕ್ಷಾಪ್ರದಗಳಾಗಿರುವುವು. ಧರ್ಮವಿಮುಖರಾದವರಿಗೆ ಎಷ್ಟು ಸಹಾಯಸಂಪತ್ತುಗಳಿದ್ದಾಗ್ಯೂ, ಧರ್ಮಿಷ್ಠರಿಗೆ ಯಾವ ಸಹಾಯವಿಲ್ಲದಿದ್ದರೂ, ಧರ್ಮಪರಾಯಣರೇ ಜಯವನ್ನು ಹೊಂದುವರು. ಏಕೆಂದರೆ ಭಗವಂತನು ಧರ್ಮಪಕ್ಷದಲ್ಲಿರುವನು. ಈ ವಿಷಯವೆಲ್ಲವೂ ಈ ನಾಟಕದಲ್ಲಿ ಬಹು ಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿರುವುದು. ಈ ನಾಟಕವು ವೀರರಸಪ್ರಧಾನವಾಗಿರುವುದರಿಂದ, ಓದುವುದಕ್ಕೂ, ಕೇಳುವುದಕ್ಕೂ ಬಹಳ ಕುತೂಹಲವನ್ನುಂಟುಮಾಡುವುದಲ್ಲದೆ, ಆರಂಭಿಸಿದ ಬಳಿಕ ಕೊನೆಮುಟ್ಟುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಇಂತಹ ಉತ್ತಮವಾದ ನಾಟಕವನ್ನು ಕನ್ನಡದಲ್ಲಿ ಪರಿವರ್ತಿಸಿ, ಸಂಸ್ಕೃತ ಪರಿಚಯವಿಲ್ಲದವರಿಗೂ ಈ ನಾಟಕದ ರಸಾನುಭವವನ್ನು ಉಂಟುಮಾಡಬೇಕೆಂಬ ಅಭಿಲಾಷೆಯಿಂದ ವ್ಯಾಕರಣ ವಿದ್ವಾನ್ ಎಂ. ಕೆ. ಶ್ರೀನಿವಾಸರಾಘವಾಚಾರ್ಯರವರಿಂದ ಬರೆಸಿ ಮುದ್ರಿಸಲಾಯಿತು. ಇದರಲ್ಲಿ ಖರ್ಚು ಕಳೆದು ಉಳಿದ ಮೊಬಲಗಿನಲ್ಲಿ ಅರ್ಧ ಭಾಗವನ್ನು ಅನಾಥಾಲಯಕ್ಕೆ ವಿನಿಯೋಗಿಸಬೇಕೆಂದು ನಿಶ್ಚಯಿಸಿರುತ್ತೆ. ಧರ್ಮಾಭಿಮಾನಿಗಳು ಈ ಸಮಯವನ್ನು ವ್ಯರ್ಥಗೊಳಿಸದೆ, ಪುಸ್ತಕವನ್ನು ಓದಿ ಆನಂದಿಸುವುದರ ಮೂಲಕ ಅನಾಥಾಲಯಕ್ಕೆ ಸಹಾಯ ಮಾಡುವುದರಲ್ಲಿ ಪರಾಙ್ಮುಖರಾಗಲಾರರೆಂದು ನಂಬಿದ್ದೇನೆ.

ಎಂ. ವೆಂಕಟಕೃಷ್ಣಯ್ಯ.

॥ ಶ್ರೀಃ ॥

# ವೇಣೀಸಂಹಾರ ನಾಟಕ

## ಪ್ರಥಮಾಂಕ

(ಸೂತ್ರಧಾರನ ಪ್ರವೇಶ)

ಸೂತ್ರಧಾರ. ನಾಭೀಕಮಲದಲ್ಲಿ ಹುಟ್ಟಿದ ಬ್ರಹ್ಮನಿಂದ ಜಗತ್ಸೃಷ್ಟಿಯನ್ನು ಮಾಡಿಸುತ್ತಾ, ಸೃಷ್ಟವಾದ ಜಗತ್ತನ್ನು ಸಂರಕ್ಷಿಸುವ ಭಾರವನ್ನು ವಹಿಸಿ, ಅಂತ್ಯಕಾಲದಲ್ಲಿ ಉಪಸಂಹರಿಸಿ, ಸಮಸ್ತ ಪ್ರಪಂಚವನ್ನೂ ತನ್ನ ಉದರದಲ್ಲಿ ಸೇರಿಸಿಕೊಳ್ಳುವ ಸಮುದ್ರದಲ್ಲಿ ಶೇಷಪರ್ಯಂಕದಲ್ಲಿ ಮಹಾಲಕ್ಷ್ಮಿಯೊಡನೆ ವಿನೋದಸಮಯವನ್ನು ಹೊಂದಿರುವ ಶ್ರೀ ಕೃಷ್ಣನ ಚರಣಾರವಿಂದದಲ್ಲಿ ಪುಷ್ಪಾಂಜಲಿಯನ್ನು ಎರಚುವೆನು. ಆ ಪರಮಾತ್ಮನು ಧರ್ಮಸಂರಕ್ಷಣಾರ್ಥವಾಗಿ ಭೂಮಿಯಲ್ಲಿ ಕೃಷ್ಣನಾಗಿ ಅವತರಿಸಿ, ಕಾಳಿಂದೀ ನದಿಯ ತೀರದಲ್ಲಿ ರಾಧೆಯೊಂದಿಗೆ ಸರಸವಾಡುತ್ತಾ, ಆ ಸರಸ ವಿನೋದದಲ್ಲಿ ಪ್ರಣಯ ಕಲಹ ಕುಪಿತೆಯಾಗಿ ವಿನೋದವನ್ನು ಬಿಟ್ಟು ಹೊರಟು ಹೋಗುತ್ತಲಿರುವ ರಾಧೆಯು ಮರಳುಗಳಲ್ಲಿ ತನ್ನ ಹೆಜ್ಜೆಯನ್ನು ಊರಲು, ಆ ಹೆಜ್ಜೆಯ ಮೇಲೆ ತನ್ನ ಹೆಜ್ಜೆಯನ್ನಿಟ್ಟುಕೊಂಡು ಅದರಿಂದಲೇ ಒಂದು ಸಂತೋಷವನ್ನು ಭಾವಿಸುತ್ತಲಿರುವ ಕೃಷ್ಣನನ್ನು ನೋಡಿ ಅವನಿಗೆ ತನ್ನಲ್ಲಿರುವ ಪ್ರೀತಿಗೆ ಮೆಚ್ಚಿ, ಕೋಪವನ್ನು ಬಿಟ್ಟು ರಾಧೆಯು ಹಿಂತಿರುಗಲು, ಆ ರಾಧೆಯೊಂದಿಗೆ ಸಫಲವಾದ ಅನುನಯವುಳ್ಳವನಾಗಿ ವಿನೋದದಿಂದಿರುವ ಕೃಷ್ಣನು ಕಾಪಾಡಲಿ.

ತ್ರಿಪುರ ಸಂಹಾರವನ್ನು ಮಾಡಿ, ಪ್ರಪಂಚವನ್ನು ಕಾಪಾಡಿದ ಈಶ್ವರನು ನಮೆಲ್ಲರನ್ನೂ ರಕ್ಷಿಸಲಿ. ಆ ತ್ರಿಪುರ ಸಂಹಾರಕ್ಕೋಸ್ಕರ ಉದ್ಯುಕ್ತನಾದ ಈಶ್ವರನನ್ನು ಆ ಸಮಯದಲ್ಲಿ "ನನ್ನ ಪತಿಯು ತ್ರಿಪುರವನ್ನು ಸುಡುವನು, ಅವನಿಗೆ ವಲ್ಲಭೆಯಾದ ನಾನೇ ಧನ್ಯಳು" ಎಂದು ಪ್ರೀತಿಯಿಂದ ಪಾರ್ವತಿಯು ನೋಡುತ್ತಿದ್ದಳು. ರಾಕ್ಷಸ ಸ್ತ್ರೀಯರುಗಳು ಭಯದಿಂದ ನೋಡುತ್ತಿದ್ದರು. ಶಾಂತಾಂತಃಕರಣರಾದ ಋಷಿಗಳು ಕರುಣೆಯಿಂದ ನೋಡುತ್ತಿದ್ದರು. ವಿಷ್ಣುವು ಮಂದಹಾಸದಿಂದ ನೋಡುತ್ತಿದ್ದನು. ರಾಕ್ಷಸರುಗಳು ಗರ್ವದಿಂದ ನೋಡುತ್ತಿದ್ದರು. ದೇವತೆಗಳು ರಾಕ್ಷಸರ ನಾಶದಿಂದ ಲೋಕವೆಲ್ಲವೂ ಭಯದಿಂದ ಮುಕ್ತವಾಯಿತೆಂದು ಸಂತೋಷದಿಂದ ನೋಡುತ್ತಿದ್ದರು. ಹೀಗೆ ನಾನಾ ವಿಧವಾದ ಭಾವಗಳಿಂದ ನೋಡಲ್ಪಟ್ಟ ಈಶ್ವರನು ಎಲ್ಲರನ್ನೂ ಕಾಪಾಡಲಿ.

ರಜಸ್ತಮೋಗುಣಗಳನ್ನಳಿದು ಶುದ್ಧ ಸತ್ವಪ್ರಧಾನನಾಗಿ ಭಾರತವೆಂಬ ಅಮೃತವನ್ನು ನಿರ್ಮಿಸಿದ ವ್ಯಾಸ ಮಹಾಋಷಿಗಳನ್ನು ನಮಸ್ಕರಿಸಿ, ಸಭಾಸದರಲ್ಲಿ ವಿಜ್ಞಾಪಿಸುವೆನು. ಎಲೈ ಸಭಾಸದರೆ, ನಿಮ್ಮಗಳಲ್ಲಿ ಕಾವ್ಯಬಂಧರೂಪವಾದ ಪುಷ್ಪಾಂಜಲಿಯನ್ನರ್ಪಿಸುವೆನು.

ಭ್ರಮರಗಳು ಪುಷ್ಪಗಳಲ್ಲಿ ಮಕರಂದಗಳನ್ನು ಮಾತ್ರ ಪರಿಗ್ರಹಿಸುವಂತೆ ಈ ಕಾವ್ಯಬಂಧದಲ್ಲಿ ಅತ್ಯಲ್ಪವಾಗಿ ಕಾಣುವ ಗುಣಗಳನ್ನು ಮಾತ್ರ ಪರಿಗ್ರಹಿಸಬೇಕು. ಕವಿಸಿಂಹನಾದ ಭಟ್ಟ ನಾರಾಯಣನಿಂದ ನಿರ್ಮಿಸಲ್ಪಟ್ಟ ವೇಣೀಸಂಹಾರವೆಂಬ ನಾಟಕವನ್ನು ಅಭಿನಯಿಸುವುದಕ್ಕೆ ಉದ್ಯುಕ್ತರಾಗಿದ್ದೇವೆ. ಆದಕಾರಣ ಕವಿಯ ಪರಿಶ್ರಮದಿಂದಲಾಗಲೀ, ಹೊಸದಾದ ನಾಟಕವನ್ನು ನೋಡುವ ಕುತೂಹಲದಿಂದಲಾಗಲೀ, ಔದಾರ್ಯಗುಣವುಳ್ಳ ಕಥಾನಾಯಕನ ಗೌರವದಿಂದಲಾಗಲೀ, ನೀವು ಈ ನಾಟಕವನ್ನ ನೋಡುವುವರಲ್ಲಿ ಸಾವಧಾನರಾಗಬೇಕೆಂದು ಪ್ರಾರ್ಥಿಸುತ್ತೇನೆ.

(ತೆರೆಯಲ್ಲಿ)

ಎಲೈ ವಿದ್ವಾಂಸನೇ, ಜಾಗ್ರತೆ ಮಾಡು ! ಜಾಗ್ರತೆ ಮಾಡು !! ವಿದುರನ ಅಪ್ಪಣೆಯಿಂದ ಇವರುಗಳೆಲ್ಲರೂ ಹೀಗೆ ಹೇಳುವರು —

ವ್ಯಾಸ, ನಾರದ, ಪರಶುರಾಮ, ತುಂಬುರರೇ ಮೊದಲಾದ ಋಷಿ ಶ್ರೇಷ್ಠರುಗಳಿಂದ ಕೂಡಿ, ಚಕ್ರಪಾಣಿಯಾದ ದೇವಕೀನಂದನನು ಭರತ ಕುಲಕ್ಕೆ ಹಿತವನ್ನು ಬಯಸಿ, ತಾನೇ ದೂತಭಾವವನ್ನು ವಹಿಸಿ, ಮಹಾ ರಾಜ ದುರ್ಯೋಧನನ ಶಿಬಿರಕ್ಕೆ ಪ್ರವೇಶ ಮಾಡುವ ಕಾಲವಾದ್ದರಿಂದ ಮಂಗಳ ವಾದ್ಯಗಳೆಲ್ಲವನ್ನೂ ಸಿದ್ಧಪಡಿಸಿಕೊಳ್ಳಿರಿ.

ಸೂತ್ರಧಾರ :—(ಕಿವಿಗೊಟ್ಟು ಕೇಳಿ) (ಸಂತೋಷದಿಂದ) ಜಗತ್ತಿನ ಸೃಷ್ಟಿ, ಸ್ಥಿತಿ ಪ್ರಳಯಗಳಿಗೆ ಕಾರಣನಾದ ವಿಷ್ಣುವಿನಿಂದ ಈ ಭರತ ಕುಲವೂ, ಸಮಸ್ತ ರಾಜಮಂಡಲವೂ ಸಹ ಅನುಗೃಹೀತವಾಯಿತು. ಏಕೆಂದರೆ ಈ ಕುರು ಪಾಂಡವರುಗಳಿಗೆ ಪ್ರಳಯಕಾಲದ ಬೆಂಕಿಯಂತೆ ಒದಗಿರುವ ಯುದ್ಧ ವನ್ನು ಶಾಂತಿಗೊಳಿಸುವುದಕ್ಕಾಗಿ, ಸಂಧಿಗೋಸ್ಕರ ಕಂಸಾರಿಯು ತಾನೇ ದೂತನಾಗಿ ಇರುವನು. ಎಲೈ ಪಾರಿಪಾರ್ಶ್ವಕನೇ, ಏಕೆ ಇನ್ನೂ ಸಂಗೀತ ವನ್ನು ಆರಂಭಿಸಲಿಲ್ಲ.

ಪಾರಿಪಾರ್ಶ್ವಕ :—(ಪ್ರವೇಶಿಸಿ) ಯಾವ ಋತುವನ್ನುದ್ದೇಶಿಸಿ.

ಸೂತ್ರಧಾರ :—ಬೆಳದಿಂಗಳುಗಳಿಂದಲೂ, ನಕ್ಷತ್ರಗಳಿಂದಲೂ, ಕ್ರೌಂಚ ಪಕ್ಷಿಗ ಳಿಂದಲೂ, ಹಂಸ ಸಮೂಹಗಳಿಂದಲೂ, ಕಾಶಪುಷ್ಪಗಳಿಂದಲೂ, ಬಿಳೀ ನೈದಿಲೆಗಳಿಂದಲೂ, ದಿಕ್ಕು, ಆಕಾಶ ಇವುಗಳನ್ನೆಲ್ಲವನ್ನೂ ಬೆಳ್ಳಗೆ ಮಾಡು ತ್ತಲಿರುವ ಮಧುರವಾದ ನೀರಿನಿಂದ ಕೂಡಿದ ಕೊಳಗಳುಳ್ಳ ಈ ಶರತ್ಕಾಲ ವನ್ನೇ ಆಶ್ರಯಿಸಿ ಗಾನಮಾಡಬಹುದು. ಈ ಶರತ್ಕಾಲದಲ್ಲಿ [1]ಸತ್ಪಕ್ಷ ರಾಗಿಯೂ, [2]ಮಧುರಭಾಷಣವುಳ್ಳವರಾಗಿಯೂ, [3]ಪ್ರಸಾಧಿತಾ ಶರಾಗಿಯೂ, [4]ಮದೋದ್ಧತಾರಂಭರಾಗಿಯೂ, ಇರುವ ಧಾರ್ತ

---

1 ಸುಂದರವಾದ ಗರಿಗಳುಳ್ಳ, ಸೈನ್ಯ ಸಹಾಯವುಳ್ಳ.

2 ರಮ್ಯವಾದ ಶಬ್ದವುಳ್ಳ, ಮಧುರವಾದ ಮಾತುಳ್ಳ

3 ಅಲಂಕೃತವಾದ ದಿಗ್ಭಾಗಗಳುಳ್ಳ, ಪ್ರಸನ್ನರಾಗಿ ಮಾಡಿಕೊಳ್ಳಲ್ಪಟ್ಟ ದಿಕ್ಕು ದಿಕ್ಕಿನಲ್ಲಿ ರುವ ಜಗಗಳುಳ್ಳ.

4 ಸಂತೋಷದಿಂದ ಹೆಚ್ಚಿದ ಆನಂದವುಳ್ಳ, ಅಹಂಕಾರದಿಂದ ಸ್ವೇಚ್ಛಾವ್ಯಾಪಾರವುಳ್ಳ.

ರಾಷ್ಟ್ರ[1] ರುಗಳು ಕಾಲವಶ[2]ದಿಂದ ಭೂಮಿಯಲ್ಲಿ ನಿಪತಿತರಾಗುವರು.[3]

ಪಾರಿಪಾರ್ಶ್ವಕ:—(ಗಾಬರಿಯಿಂದ ಕಿವಿಯನ್ನು ಮುಚ್ಚಿಕೊಂಡು) ಪಾಪವು ಶಾಂತವಾಗಲಿ. ಅಮಂಗಳವು ಹೋಗಲಿ.

ಸೂತ್ರಧಾರ:—(ಸ್ವಲ್ಪ ನಕ್ಕು) ಪಾರಿಪಾರ್ಶ್ವಕನೇ, ಶರತ್ಸಮಯವನ್ನು ವರ್ಣಿಸುವ ಕಾಲದಲ್ಲಿ ಧಾರ್ತರಾಷ್ಟ್ರ ಪದಕ್ಕೆ ಹಂಸನೆಂದರ್ಥವು. "ಪಾಪವು ಶಾಂತವಾಗಲಿ. ಅಮಂಗಳವು ಪ್ರತಿಹತವಾಗಲಿ" ಎಂದು ಏಕೆ ಹೇಳಿದೆ?

ಪಾರಿಪಾರ್ಶ್ವಕ:—ನನಗೆ ತಿಳಿಯದೇ ಇಲ್ಲ. ಆದರೆ ನಿಮ್ಮ ಮಾತಿನಲ್ಲಿ ಅಮಂಗಳದ ಸಂದೇಹವುಂಟಾದ್ದರಿಂದ ನಿಜವಾಗಿಯೂ ನನ್ನ ಹೃದಯವು ನಡುಗಿದಂತಾಯಿತು.

ಸೂತ್ರಧಾರ:—ಆರ್ಯನೇ, ಈಗ ಕೃಷ್ಣನು ಸಂಧಿಗೋಸ್ಕರ ದೂತನಾಗಿರುವುದರಿಂದ ಅಮಂಗಳವೆಲ್ಲವೂ ಪ್ರತಿಹತವಾಯಿತು. ಪಾಂಡವರು ಶತ್ರುಗಳು ಶಾಂತರಾಗುವುದರಿಂದ ವೈರವೆಂಬ ಬೆಂಕಿಯು ಆರಿಹೋಗಿ ಕೃಷ್ಣನೊಂದಿಗೆ ಸಂತೋಷದಿಂದಿರಲಿ. ಕೌರವರು ರಕ್ತಪ್ರಸಾಧಿತ ಲೋಕವುಳ್ಳವರಾಗಿಯೂ,[4] ಕ್ಷತವಿಗ್ರಹವುಳ್ಳವರಾಗಿಯೂ[5], ಭೃತ್ಯರೊಂದಿಗೆ ಸ್ವಸ್ಥರಾಗಲಿ[6].

(ತೆರೆಯಲ್ಲಿ)

(ಆಕ್ಷೇಪದೊಡನೆ) ಎಲೈ ದುರಾತ್ಮನೇ, ನಟಾಧಮನೇ! ವೃಥಾ ಮಂಗಳ ಪಾಠಕನೇ, ನಾನು ಬದುಕಿರುವಾಗ ಧಾರ್ತರಾಷ್ಟ್ರರು ಹೇಗೆ ಸ್ವಸ್ಥರಾ

---

1 ಧೃತರಾಷ್ಟ್ರನ ಮಕ್ಕಳುಗಳು, ಹಂಸಗಳು.

2 ಶರತ್ಕಾಲದಿಂದ, ಸಮಯ ವಿಶೇಷದಿಂದ.

3 ಬೀಳುವರು, ಸಂಚರಿಸುವರು.

4 ಪ್ರೀತಿಯಿಂದ ಪ್ರಸನ್ನರಾಗಿ ಮಾಡಲ್ಪಟ್ಟ ಜನಗಳುಳ್ಳವರಾಗಿ, ರಕ್ತದಿಂದ ಅಲಂಕರಿಸಲ್ಪಟ್ಟ ಭೂಮಿಯುಳ್ಳವರಾಗಿ.

5 ನಷ್ಟವಾದ ಯುದ್ಧವುಳ್ಳವರಾಗಿ, ಘಾಯಪಟ್ಟ ಶರೀರವುಳ್ಳವರಾಗಿ.

6 ಸುಖವುಳ್ಳವರಾಗಲಿ. ಸ್ವರ್ಗಸ್ಥರಾಗಲಿ.

ಗುತ್ತಾರೆ? ಅರಗಿನ ಮನೆಯಲ್ಲಿ ಬೆಂಕಿಯನ್ನು ಹಾಕಿ, ವಿಷದ ಅನ್ನವನ್ನು ತಿನ್ನಿಸಿ, ಜೂಜಿಗೋಸ್ಕರ ಸಭೆಗೆ ಪ್ರವೇಶಮಾಡಿಸಿ, ಪ್ರಾಣಗಳಿಗೂ, ದ್ರವ್ಯಗಳಿಗೂ ತೊಂದರೆಯನ್ನುಂಟುಮಾಡಿ ಪಾಂಡವ ಪತ್ನಿಯ ವಸ್ತ್ರ, ಕೇಶಗಳನ್ನು ಎಳೆದ ಧಾರ್ತರಾಷ್ಟ್ರರು ನಾನು ಬದುಕಿರುವಾಗ ಸ್ವಸ್ಥರಾಗುತ್ತಾರೆಯೇ?

ಪಾರಿಪಾರ್ಶ್ವಕ :—ಅಯ್ಯಾ! ಇದು ಏನು ?

ಸೂತ್ರಧಾರ :—ಹಿಂದೆ ತಿರುಗಿ ನೋಡಿ, ಅಯ್ಯೋ, ಇವನು ಭೀಮಸೇನನು. ಇವನು ಸಂಧಿಗೋಸ್ಕರ ವಾಸುದೇವನು ಪ್ರಯಾಣ ಮಾಡಿದ್ದಕ್ಕೋಸ್ಕರ ಕುರುಗಳೊಂದಿಗೆ ಸಂಧಿಯನ್ನು ಸಹಿಸದೆ ವಿಶಾಲವಾದ ಹಣೆಯಲ್ಲಿ ತ್ರಿಶೂಲದಂತೆ ಭಯಂಕರವಾದ ಹುಬ್ಬು ಗಂಟಿಕ್ಕಿದವನಾಗಿ ನೋಟದಿಂದ ನಮ್ಮೆಲ್ಲರನ್ನೂ ಕುಡಿಯುವಂತೆ ಕಾಣುತ್ತಾನೆ. ಇವನ ಜೊತೆಯಲ್ಲಿ ಸಹದೇವನೂ ಬರುತ್ತಿರುವನು. ನಾವು ಕೋಪಗೊಂಡಿರುವ ಇವನ ಮುಂದೆ ನಿಲ್ಲುವುದು ಸರಿಯಲ್ಲ. ಆದ್ದರಿಂದ ಎಲ್ಲಿಯಾದರೂ ಹೋಗೋಣ (ಎಂದು ಹೊರಟು ಹೋಗುವರು.)

ಇತಿ ಪ್ರಸ್ತಾವನೆ.

---

(ಸಹದೇವನೂ, ಕುಪಿತನಾದ ಭೀಮಸೇನನೂ ಪ್ರವೇಶಿಸುವರು.)

ಭೀಮ :—ಎಲೈ ದುರಾತ್ಮನೇ, ಎಂದು ಹಿಂದೆ ಹೇಳಿದ್ದನ್ನೇ ಹೇಳುವನು.

ಸಹದೇವ :—(ಸಮಾಧಾನ ಪಡಿಸುತ್ತ) ಅಣ್ಣನೇ, ಸೈರಿಸು. ಸೈರಿಸು. ಭರತಪುತ್ರನ ಮಾತು ನಮ್ಮ ಅಭಿಪ್ರಾಯಕ್ಕೆ ತಕ್ಕಂತೆಯೇ ಇರುವುದು. ರಕ್ತಪ್ರಸಾಧಿತಭೂಮಿಯುಳ್ಳವರಾಗಿಯೂ, ಕ್ಷತವಿಗ್ರಹರಾಗಿಯೂ, ಸ್ವಸ್ಥರಾಗಲಿ ಎಂದಲ್ಲವೇ ಹೇಳಿದನು. ರಕ್ತದಿಂದ ಅಲಂಕರಿಸಲ್ಪಟ್ಟ ಭೂಮಿಯುಳ್ಳವರಾಗಿಯೂ, ಗಾಯಪಟ್ಟ ಶರೀರವುಳ್ಳವರಾಗಿಯೂ ಸ್ವರ್ಗಸ್ಥರಾಗಲೀ ಎಂದಭಿಪ್ರಾಯವಾಗುವುದಿಲ್ಲವೇ ?

ಭೀಮ :—(ತಿರಸ್ಕಾರದೊಡನೆ) ಕೌರವರುಗಳಿಗೆ ಅಮಂಗಳವನ್ನು ನೀವುಗಳು ಚಿಂತಿಸುವುದುಂಟೆ ! ತಮ್ಮಂದಿರುಗಳು ನಿಮ್ಮುಗಳಿಗೆ ಸಂಧಿಮಾಡಿಕೊಳ್ಳುವುದಕ್ಕೆ ಯೋಗ್ಯರಾಗಿರಾರೆ !

ಸಹದೇವ:—(ಕೋಪದಿಂದ) ಅಡಿಗಡಿಗೂ ನಮ್ಮಲ್ಲಿ ವೈರವನ್ನು ಆಚರಿಸುತ್ತಿರುವ ಆ ಧೃತರಾಷ್ಟ್ರನ ಮಕ್ಕಳುಗಳನ್ನು ರಾಜನು ಮಾತ್ರ ಕ್ಷಮೆಯಿಂದ ಇದ್ದರೆ ನಿನ್ನ ಯಾವ ತಮ್ಮನು ತಾನೆ ಸಹಿಸುವನು ?

ಭೀಮ:—(ಕೋಪದಿಂದ) ಆದ್ದರಿಂದಲೇ ಇಂದು ಮೊದಲು ನೀನೇ ಬೇರೆ. ನಾನೇ ಬೇರೆ. ನೋಡು. ಬಾಲ್ಯಮೊದಲುಗೊಂಡು ನನಗೂ ಅವರಿಗೂ ಬೆಳೆದಿರುವ ವೈರಕ್ಕೆ ಆರ್ಯನಾದ ಧರ್ಮರಾಯನು ಕಾರಣನಲ್ಲ. ನೀವುಗಳೂ ಕಾರಣರಲ್ಲ. ಜರಾಸಂಧನ ಸಂಧಿಬಂಧವನ್ನು ಭೀಮನು ವಿಘಟನ ಮಾಡಿದಂತೆ ಈ ಸಂಧಿಯನ್ನು ವಿಘಟನ ಮಾಡುವನು. ನೀವು ನೋಡಿರಿ.

ಸಹದೇವ:—ಆರ್ಯನೇ, ತಾವು ಇಷ್ಟು ಕೋಪಿಸಿಕೊಂಡರೆ ಗುರುವಾದ ಧರ್ಮರಾಯನು ಒಂದು ವೇಳೆ ಖೇದಗೊಳ್ಳುವನು.

ಭೀಮ:—(ಹಾಸ್ಯಮಾಡುತ್ತ) ಗುರುವಾದ ಧರ್ಮರಾಯನು ನನ್ನಲ್ಲಿ ಖೇದಗೊಳ್ಳುವನೇ ! ವತ್ಸನೇ, ಗುರುವಿಗೆ ಖೇದವು ತಿಳಿದಿದೆಯೇ ? ನೋಡು, ರಾಜಸಭೆಯಲ್ಲಿ ದ್ರೌಪದಿಯನ್ನು ಆ ಸ್ಥಿತಿಯಲ್ಲಿ ನೋಡಿದ್ದು ಆಯಿತು. ಕಾಡಿನಲ್ಲಿ ನಾರುಮಡಿಯನ್ನುಟ್ಟು ಕಿರಾತರೊಡನೆ ಬಹುಕಾಲ ವಾಸಮಾಡಿದ್ದಾಯಿತು. ವಿರಾಟನ ಮನೆಯಲ್ಲಿ ಅನುಚಿತ ಕೆಲಸಗಳನ್ನು ಮಾಡಿಕೊಂಡು ರಹಸ್ಯವಾಗಿ ಇದ್ದುದ್ದಾಯಿತು. ಇಷ್ಟಾದಾಗ್ಯೂ ಈಗಲೂ ಕುರುಗಳಲ್ಲಿ ಖೇದವನ್ನು ವಹಿಸದಿರುವ ಗುರುವು ನಾನು ಖೇದಗೊಂಡರೆ ಖೇದಗೊಳ್ಳುತ್ತಾನೆ ! ಆದ್ದರಿಂದ ಸಹದೇವನೇ, ನೀನು ಹೋಗು. ಕುಪಿತನಾದ ಭೀಮಸೇನನ ಮಾತನ್ನು ರಾಜನಲ್ಲಿ ವಿಜ್ಞಾಪಿಸು.

ಸಹದೇವ:—ಆರ್ಯನೇ, ಹಾಗೆಂದು.

ಭೀಮ:—ನಿಮ್ಮ ಅಪ್ಪಣೆಯನ್ನು ಮೀರಿದ ದೋಷದಲ್ಲಿ ನಾನು ಮುಳುಗಿದೆನು. ಜ್ಯೇಷ್ಠನನ್ನು ಅನುಸರಿಸಿರುವ ಮರ್ಯಾದೆಯನ್ನು ಅತಿಕ್ರಮಿಸಿದೆನು. ತಮ್ಮಂದಿರುಗಳಲ್ಲಿ ನಾನು ದೂಷಣೆಯನ್ನು ಹೊಂದಿದರೂ ಚಿಂತೆಯಿಲ್ಲ. ಕೋಪದಿಂದ ಕೂಡಿ ರಕ್ತಗಳನ್ನು ಕುಡಿದು ಕೆಂಪಾಗಿರುವ ಗದೆಯಿಂದ ಕೌರವನ ತೊಡೆಯನ್ನು ಭೇದಿಸುವ ನನಗೆ ಈ ಒಂದು ದಿವಸದ ಮಟ್ಟಿಗೆ ನೀನು

ಗುರುಭಕ್ತಿ ಇಲ್ಲ. ನಾನು ವಿಧೇಯನೂ ಅಲ್ಲ. (ಎಂದು ಹೊರಡುವನು.)

ಸಹದೇವ:—(ಅವನನ್ನೇ ಅನುಸರಿಸಿ, ತನ್ನಲ್ಲಿ ತಾನು) ಇದು ಏನು? ಅಣ್ಣನು ದ್ರೌಪದಿಯ ಚತುಶ್ಶಾಲಕ್ಕೆ ಪ್ರವೇಶಿಸುವನು, ಇರಲಿ. ನಾನು ಇಲ್ಲಿಯೇ ನಿಲ್ಲುವೆನು.

ಭೀಮ:—(ಹಿಂತಿರುಗಿ ನೋಡಿ) ಸಹದೇವನೇ, ನೀನು ಹೋಗು. ಗುರುಜನರನ್ನು ಅನುಸರಿಸು. ನಾನು ಆಯುಧಶಾಲೆಗೆ ಹೋಗಿ ಆಯುಧವನ್ನು ತೆಗೆದುಕೊಳ್ಳುವೆನು.

ಸಹದೇವ:—ಅಣ್ಣನೇ, ಇದು ಆಯುಧಶಾಲೆಯಲ್ಲ. ದ್ರೌಪದಿಯ ಚತುಶ್ಶಾಲವು.

ಭೀಮ:—ಏನು? ಇದು ಆಯುಧಶಾಲೆಯಲ್ಲವೆ? ದ್ರೌಪದಿಯ ಚತುಶ್ಶಾಲವೋ? (ಯೋಚಿಸಿ) ದ್ರೌಪದಿಯನ್ನು ನೋಡಬೇಕಾಗಿತ್ತು. (ಸಹದೇವನನ್ನು ಕೈಯಲ್ಲಿ ಹಿಡಿದುಕೊಂಡು) ಸಹದೇವನೇ, ಆರ್ಯನಾದ ಧರ್ಮರಾಯನು ಕೌರವರೊಂದಿಗೆ ಸಂಧಿಯನ್ನು ಬಯಸಿ, ನಮ್ಮನ್ನು ತೊಂದರೆಪಡಿಸುತ್ತಾ ಇದ್ದಾನೆ. ನೀನೇ ನೋಡು ಬಾ. (ಎಂದು ಇಬ್ಬರೂ ಪ್ರವೇಶಿಸುವರು)

ಸಹದೇವ:—ಆರ್ಯನೇ, ಇಲ್ಲಿ ಆಸನವು ಸಿದ್ಧವಾಗಿರುವುದು. ಇದರಲ್ಲಿ ಕುಳಿತುಕೊಂಡು * ಕೃಷ್ಣಾಗಮನವನ್ನು ನಿರೀಕ್ಷಿಸಬಹುದು. (ಇಬ್ಬರೂ ಕುಳಿತುಕೊಳ್ಳುವರು.)

ಭೀಮ:—ವತ್ಸನೇ, ಕೃಷ್ಣಾಗಮನವೆಂದು ಹೇಳಿದ್ದರಿಂದ ಜ್ಞಾಪಕಕ್ಕೆ ಬಂದಿತು. ಭಗವಂತನಾದ ಕೃಷ್ಣನು ಯಾವ ರೀತಿಯಿಂದ ಸಂಧಿಯನ್ನು ಮಾಡಿಕೊಳ್ಳುವುದಕ್ಕೆ ದುರ್ಯೋಧನನ ಸಮೀಪಕ್ಕೆ ಹೋಗಿರುವನು.

ಸಹದೇವ:—ಆರ್ಯನೇ, ಐದು ಗ್ರಾಮಗಳಿಂದ.

ಭೀಮ:—(ಕಿವಿಯನ್ನು ಮುಚ್ಚಿ) ಕಷ್ಟ! ಕಷ್ಟ! ಅಜಾತಶತ್ರುವಾದ ಧರ್ಮರಾಯನಿಗೆ ಪರಾಕ್ರಮದ ಹೀನತೆಯು ಹೀಗಾದದ್ದಕ್ಕೆ ನನ್ನ ಹೃದಯವು ನಡು

* ದ್ರೌಪದಿ.

ಗುವಂತಿದೆ. ವತ್ಸನೇ, ನೀನು ಹೇಳಲೂ ಬೇಡ. ನಾನು ಕೇಳುವುದೂ ಇಲ್ಲ. ಧರ್ಮರಾಯನ ಉಗ್ರವಾದ ಕ್ಷಾತ್ರತೇಜಸ್ಸು ಪಗಡೆಯಾಡುವ ಕಾಲದಲ್ಲಿ ಎಷ್ಟು ಉಳಿದಿದ್ದಿತೋ ಈವಾಗ ಅದೂ ಹೋಯಿತು.

(ತೆರೆಯಲ್ಲಿ)

ರಾಣಿಯೇ, ಸಮಾಧಾನವನ್ನು ಹೊಂದು.

ಸಹದೇವ:—(ಕಿವಿಗೊಟ್ಟು ಕೇಳಿ, ತೆರೆಯ ಕಡೆ ತಿರುಗಿ ನೋಡಿ) ದ್ರೌಪದಿಯು ಕಣ್ಣಿನಲ್ಲಿ ನೀರು ತುಂಬಿಕೊಂಡು ಅಣ್ಣನ ಸಮೀಪಕ್ಕೆ ಬರುತ್ತಿದ್ದಾಳೆ. ಬಹಳ ಕಷ್ಟವು ಒದಗಿತು. ಮೊದಲೇ ಅಣ್ಣನು ಕೋಪಗೊಂಡಿದ್ದಾನೆ. ಉರಿಯಂತಿರುವ ಈ ಕೋಪವನ್ನು ವರ್ಷಾಕಾಲದಂತೆ ಈ ದ್ರೌಪದಿಯು ನಿಜವಾಗಿ ಇನ್ನೂ ಹೆಚ್ಚಿಸುವಳು.

(ದ್ರೌಪದಿಯು ಚೇಟಿಯೊಡನೆ ಪ್ರವೇಶಿಸುವಳು.)

ಚೇಟಿ:—ಸಂತೈಸಿಕೊ, ಕೌರವರಲ್ಲಿ ಬದ್ಧವೈರನಾದ ಕುಮಾರ ಭೀಮಸೇನನು ನಿನ್ನ ದುಃಖವನ್ನು ಹೋಗಲಾಡಿಸುವನು.

ದ್ರೌಪದಿ:—(ನಿಟ್ಟುಸಿರು ಬಿಡುತ್ತಾ) ಸಖೀ, ರಾಜನಿಗೆ ಪ್ರತಿಕೂಲನಾದರ ಹೀಗಾಗುವುದು.

ಚೇಟಿ:—(ನೋಡಿ) ಇಲ್ಲಿಯೇ ಕುಮಾರ ಭೀಮಸೇನನು ಕುಳಿತಿರುವನು. (ಎಂದು ಸಮೀಪಕ್ಕೆ ಬಂದು) ಕುಮಾರ ಭೀಮಸೇನನಿಗೆ ಜಯವಾಗಲಿ.

ಭೀಮ:—(ಕಿವಿಗೆ ಹಾಕಿಕೊಳ್ಳದೇನೇ) ಧರ್ಮರಾಯನ ಕ್ಷಾತ್ರ ತೇಜಸ್ಸು ಪಗಡೆಯಾಟದ ಕಾಲದಲ್ಲಿ ಉಳಿದಿದ್ದದ್ದೂ ಕೂಡ ಈಗ ಹೋಯಿತು. (ಎಂದು ಹೇಳುವನು.)

ಚೇಟಿ:—ದೇವಿಯೇ, ಕುಮಾರನು ಕುಪಿತನಾಗಿರುವಂತೆ ಕಾಣುತ್ತೆ.

ದ್ರೌಪದಿ:—ಸಖೀ, ಹಾಗಾದರೆ, ಈ ತಿರಸ್ಕಾರವು ನನಗೆ ಪುರಸ್ಕಾರವೇ. ಇಲ್ಲಿಯೇ ಕುಳಿತು ಇವನ ಉದ್ದೇಶವನ್ನು ಕೇಳುತ್ತೇನೆ.

ಭೀಮ:—(ಕೋಪದಿಂದ) ವತ್ಸನೇ, ಏನು ಗ್ರಾಮಗಳಿಂದ ಸಂಧಿಯೇ? ಆ ನೂರು ಕೌರವರನ್ನೂ ಯುದ್ಧದಲ್ಲಿ ನಾನು ಸಂಹರಿಸುವುದಿಲ್ಲ? ದುಶ್ಶಾಸನನ ರಕ್ತವನ್ನು ಎದೆಯಿಂದ ಬಸಿದು ಕುಡಿಯುವುದಿಲ್ಲ? ದುರ್ಯೋ

ಧರ್ಮರಾಯನನ್ನು ಗದೆಯಿಂದ ಪ್ರತಿಬಂಧಿಸುವುದಿಲ್ಲ, ನಿಮ್ಮ ದೊರೆಯು ಸಂಧಿಮಾಡಿಕೊಳ್ಳಲಿ.

ದ್ರೌಪದಿ:—(ಸಂತೋಷದಿಂದ ತನ್ನಲ್ಲಿ ತಾನು) ನಾಥನೇ, ಇಂತಹ ಪ್ರಿಯವಚನವನ್ನು ಹಿಂದೆ ಯಾವಾಗಲೂ ಕೇಳಿದುದೇ ಇಲ್ಲ. ಇನ್ನೊಂದಾವರ್ತಿ ಹೇಳು.

ಭೀಮ:—ವತ್ಸ, ಸಹದೇವ, ನೋಡು. (ಎಂದು ಅದನ್ನೇ ಪುನಃ ಹೇಳುವನು.)

ಸಹದೇವ:—ಆರ್ಯನೇ, ಮಹಾರಾಜನು ಹೇಳಿಕಳುಹಿಸಿರುವ ಅಭಿಪ್ರಾಯವನ್ನು ನೀನು ಸರಿಯಾಗಿ ಗ್ರಹಿಸಲಿಲ್ಲವೆಂದು ತೋರುತ್ತೆ.

ಭೀಮ:—ಇದರಲ್ಲಿ ಗ್ರಹಿಸುವುದೇನು ?

ಸಹದೇವ:—ಧರ್ಮರಾಜನು ಇಂದ್ರಪ್ರಸ್ಥ, ವೃಕಪ್ರಸ್ಥ, ಜಯಂತ, ವಾರಣಾವತ ಈ ನಾಲ್ಕು ಗ್ರಾಮಗಳನ್ನು ಕೊಡು, ಐದನೆಯದು ಯಾವುದನ್ನಾದರೂ ನೀನು ಕೊಡು ಎಂದು ದುರ್ಯೋಧನನಿಗೆ ಹೇಳಿಕಳುಹಿಸಿರುವನು. ಹೀಗೆ ನಾಲ್ಕು ಗ್ರಾಮಗಳ ಹೆಸರನ್ನು ಹೇಳಿ ಐದನೆಯದರ ಹೆಸರನ್ನು ಹೇಳದಿರುವುದರಿಂದ ಆಯಾಯ ಗ್ರಾಮಗಳಲ್ಲಿ ಅವರು ನಡೆಸಿದ ಪಟ್ಟಣವನ್ನು ಬಿಟ್ಟು ಹೊರಡಿಸಿದ್ದು, ವಿಷವನ್ನು ತಿನ್ನಿಸಿದ್ದು, ಅರಗಿನ ಮನೆಯಲ್ಲಿ ನಮ್ಮಗಳ ನಾಶಕ್ಕೆ ಯೋಚಿಸಿದ್ದುದನ್ನು, ಜೂಜಾಡಿದ್ದು, ಈ ದುಷ್ಕೃತ್ಯಗಳನ್ನೆಲ್ಲವನ್ನೂ ಜ್ಞಾಪಕ ಮಾಡಿರುವನು.

ಭೀಮ:—ಹಾಗೆ ಮಾಡಿದ್ದರಿಂದ ಏನಾಯಿತು ?

ಸಹದೇವ:—ಆರ್ಯನೇ, ದುಷ್ಕೃತಿಗಳನ್ನು ಜ್ಞಾಪಕಮಾಡುವುದಕ್ಕೋಸ್ಕರ ಇವರ ಹೃದಯದ ದುಷ್ಟಸ್ವಭಾವವು ಜನಗಳಲ್ಲಿ ಹೊರಪಡುತ್ತದೆ. ಕುರುರಾಜನು ಸಂಧಿಗೆ ಯೋಗ್ಯನಲ್ಲವೆಂಬ ಅಂಶವು ವ್ಯಕ್ತವಾಗುತ್ತದೆ.

ಭೀಮ:—ಇವೆಲ್ಲಾ ನಿರರ್ಥಕಗಳು. ಕುರುರಾಜನಲ್ಲಿ ಸಂಧಿ ಮಾಡಬಾರದೆಂಬುದು ನಾನು ಕಾಡಿಗೆ ಹೋಗುವಾಗ ಕುರುಕುಲ ಸಂಹಾರವನ್ನು ಪ್ರತಿಜ್ಞೆಮಾಡಿದ್ದಂದಲೇ ತೀರಿಸಿದ್ದಾಗಿದೆ. ಧಾರ್ತರಾಷ್ಟ್ರ ಕುಲಕ್ಷಯವು ರೋಷದಲ್ಲಿ ಪ್ರತಿಷ್ಠಿತವೇ.

ಸಹದೇವ:—(ನಾಚಿಕೆಯಿಂದ ತಲೆಯನ್ನು ಬಗ್ಗಿಸುವನು.)

ಭೀಮ ;—ನಿಮಗೆ ನಾಚಿಕೆಯೆಲ್ಲಿರುವುದು ? ಮೂಢನೇ, ಕೋಪದಿಂದ ಶತ್ರುಗಳನ್ನು ನಾಶಮಾಡುವುದು ನಿನಗೆ ನಾಚಿಕೆಯನ್ನುಂಟುಮಾಡುತ್ತದೆ. ನಿಮ್ಮ ಹೆಂಡತಿಯರನ್ನು ಸಭೆಗೆ ತಂದು ಮಾಡಿದ ಕೇಶಕರ್ಷಣವು ನಿಮಗೆ ನಾಚಿಕೆಯನ್ನುಂಟುಮಾಡುವುದಿಲ್ಲ !

ದ್ರೌಪದಿ :—ನಾಥನೇ, ಇವರಿಗೆ ನಾಚಿಕೆಯಿಲ್ಲ. ನೀನಾದರೂ ಮರೆಯದೇ ಇರು.

ಭೀಮ :—ವತ್ಸ, ದ್ರೌಪದಿಯೇಕೆ ನಾವಕಾಶ ಮಾಡುವಳು ?

ಸಹದೇವ :—ಆರ್ಯನೇ, ಅವಳು ಬಂದು ಎಷ್ಟೋ ಹೊತ್ತಾಯಿತು. ಆದರೆ ಕೋಪಕ್ಕೆ ವಶನಾದ ನೀನು ಅವಳನ್ನು ನೋಡಲಿಲ್ಲ.

ಭೀಮ :—(ನೋಡಿ ವಿಶ್ವಾಸದಿಂದ) ದೇವಿಯೇ, ಕೋಪಗೊಂಡ ನನಗೆ ನೀನು ಬಂದದ್ದೇ ತಿಳಿಯಲಿಲ್ಲ. ಇದಕ್ಕಾಗಿ ನೀನು ಕೋಪಮಾಡಬೇಡ.

ದ್ರೌಪದಿ :—ನಾಥನೇ, ನೀವು ಉದಾಸೀನರಾಗಿದ್ದರೆ ನನಗೆ ಕೋಪವೇ ಹೊರತು, ಕುಪಿತರಾದರೆ ಇಲ್ಲ.

ಭೀಮ :—ಹಾಗಾದರೆ, ತಿರಸ್ಕಾರ ಮಾಡಲಿಲ್ಲವೆಂದು ತಿಳಿದುಕೋ.

ದ್ರೌಪದಿ :—(ದುಃಖದಿಂದ ನಿಟ್ಟುಸುರು ಬಿಡುವಳು.)

ಭೀಮ :—(ಕೈಹಿಡಿದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಮುಖವನ್ನು ನೋಡಿ) ನೀನು ಈಗ ಬಹಳ ದುಃಖಿತಳಾಗಿ ಕಾಣುವಿ.

ದ್ರೌಪದಿ :—ನೀವು ಸನ್ನಿಹಿತರಾಗಿರುವಾಗ ನನಗೆ ದುಃಖವೇನೂ ಇಲ್ಲವು.

ಭೀಮ :—ಏಕೆ ಹೇಳುವುದಿಲ್ಲ ? (ಹಾಗೆ ಕೇಶವನ್ನು ನೋಡಿ) ಅಥವಾ ಹೇಳುವುದೇನು ? ಪಾಂಡವರು ಬದುಕಿದ್ದು ಸಮೀಪದಲ್ಲಿಯೇ ಇದ್ದಾಗ್ಯೂ, ಪಾಂಚಾಲ ರಾಜಪುತ್ರಿಯು ಈ ಅವಸ್ಥೆಯನ್ನನುಭವಿಸುತ್ತಿರುವಳು.

ದ್ರೌಪದಿ :—ಸಖೀ, ಬುದ್ಧಿಮತಿಕೆ, ನಾಥನಿಗೆ ಸಂಗತಿಯನ್ನು ತಿಳಿಸು. ನನ್ನ ಪರಿಭವಕ್ಕೆ ಇನ್ನಾರು ತಾನೆ ದುಃಖಪಡುವರು.

ಚೇಟಿ :—ಅಪ್ಪಣೆ. (ಎಂದು ಭೀಮನಿಗೆ ಕೈಮುಗಿದು) ಕುಮಾರನೇ, ಇದಕ್ಕಿಂತಲೂ ಹೆಚ್ಚಾದ ದುಃಖಕಾರಣವು ದೇವಿಗೆ ಒದಗಿರುವುದು.

ಭೀಮ :—ಇದಕ್ಕಿಂತಲೂ ಹೆಚ್ಚಾದದ್ದು ಅದು ಯಾವುದು ? ಕಪ್ಪಾದ ಧೂಮ ಶಿಖೆಯಂತೆ ಮುಕ್ತವೇಣಿಯಾದ ದ್ರೌಪದಿಯನ್ನು ಸ್ಪರ್ಶಮಾಡಿ ಕೌರವ ವಂಶಕ್ಕೆ ಕಾಡುಕಿಚ್ಚಾಗಿರುವ ನನ್ನಲ್ಲಿ ಶಲಭನಾಗುವನು.

ಚೇಟಿ :—ಕುಮಾರನೇ, ಈ ದಿವಸ ತಾಯಿಯೊಂದಿಗೆ ಸುಭದ್ರೆಯೇ ಮೊದಲಾದವರೊಡನೆ ಸೇರಿ, ಗಾಂಧಾರಿಯ ಪಾದವಂದನಕ್ಕಾಗಿ ದೇವಿಯು ಹೋಗಿದ್ದಳು.

ಭೀಮ :—ನ್ಯಾಯವಾದದ್ದು. ಗುರುಗಳಿಗೆ ನಮಸ್ಕರಿಸತಕ್ಕದ್ದೇ. ಆಮೇಲೆ.

ಚೇಟಿ :—ಅನಂತರದಲ್ಲಿ ಪಾದವಂದನವನ್ನು ಮಾಡಿ, ಹಿಂತಿರುಗಿ ಬರುತ್ತಿರುವ ದೇವಿಯನ್ನು ಭಾನುಮತಿಯು ನೋಡಿದಳು.

ಭೀಮ :—(ಕೋಪದಿಂದ) ಏನು ? ನಮ್ಮ ಶತ್ರುವಿನ ಹೆಂಡತಿಯು ನೋಡಿದಳೇ ? ಇದು ಕೋಪಕ್ಕೆ ಸ್ಥಾನವೇ ಸರಿ. ಆಮೇಲೆ.

ಚೇಟಿ :—ಅನಂತರದಲ್ಲಿ ಭಾನುಮತಿಯು ದೇವಿಯನ್ನು ನೋಡಿ ತನ್ನ ಸಖಿಯರನ್ನು ನೋಡುತ್ತಾ ಗರ್ವದಿಂದ ಸ್ವಲ್ಪ ನಕ್ಕು ಹೇಳಿದಳು.

ಭೀಮ :—ನೋಡಿದ್ದು ಮಾತ್ರವೇ ಅಲ್ಲದೆ ಹೇಳಿಯೂ ಹೇಳಿದಳೋ ? ಅದೇನು ಹೇಳಿದ್ದು ?

ಚೇಟಿ :—ಎಲೈ ಯಾಜ್ಞಸೇನಿಯೇ, ನಿನ್ನ ಪತಿಗಳು ಐದು ಗ್ರಾಮಗಳನ್ನು ಬೇಡುತ್ತಿದ್ದಾರೆ. 'ಬಿಚ್ಚಿದ ಕೇಶಗಳನ್ನು ಇನ್ನೂ ಏಕೆ ಕಟ್ಟಿಕೊಳ್ಳಲಿಲ್ಲ' ಎಂದು ಹೇಳಿದಳು.

ಭೀಮ :—ಸಹದೇವನೇ, ಕೇಳಿದೆಯೋ ?

ಸಹದೇವ :—ಆರ್ಯನೇ, ಅವಳಿಗದು ತಕ್ಕದ್ದಾಗಿದೆ. ಅವಳು ದುರ್ಯೋಧನನ ಹೆಂಡತಿಯಲ್ಲವೆ ? ಹೆಂಗಸರ ಮನಸ್ಸು ಸಹವಾಸದೋಷದಿಂದ ಪತಿಯ ಮನಸ್ಸಿನಂತೆಯೇ ಆಗುತ್ತದೆ. ಬಳ್ಳಿಯು ಮಧುರವಾಗಿದ್ದಾಗ್ಯೂ, ವಿಷವೃಕ್ಷಕ್ಕೆ ಹಬ್ಬಿದರೆ ಅದು ಮೂರ್ಛೆಯನ್ನೇ ಉಂಟುಮಾಡುವುದು.

ಭೀಮ :—ಬುದ್ಧಿಮತಿಕೇ, ಅದಕ್ಕೆ ದೇವಿ ಏನು ಹೇಳಿದಳು ?

ಚೇಟಿ :—ಕುಮಾರನೇ, ಪರಿಜನರು ಪಕ್ಕದಲ್ಲಿಲ್ಲದಿದ್ದರಲ್ಲವೇ ದೇವಿಯು ಹೇಳಬೇಕು ?

ಭೀಮ :—ನೀನೇನು ಹೇಳಿದೆ?

ಚೇಟಿ :—ಎಲೌ ಭಾನುಮತಿಯೇ, ನಿಮ್ಮ ಕೇಶಗಳು ಬಿಚ್ಚಿಹೋಗದೇ ಇರುವಾಗ ನಮ್ಮ ದೇವಿಯು ಏಕೆ ಕಟ್ಟುವಳು ? ಎಂದು ಹೇಳಿದೆನು.

ಭೀಮ :—(ಬಹುಸಂತೋಷದಿಂದ) ಬುದ್ಧಿಮತಿಕೇ, ನಮ್ಮ ಪರಿಜನರು ಆಡುವುದಕ್ಕೆ ಯೋಗ್ಯವಾದ ಮಾತನ್ನೇ ಆಡಿದೆ. (ಎಂದು ತನ್ನ ಆಭರಣವನ್ನು ಬುದ್ಧಿಮತಿಕೆಗೆ ಕೊಡುವನು.) ಪಾಂಚಾಲರಾಜಪುತ್ರಿಯೇ, ಬಹು ಶೀಘ್ರವಾಗಿಯೇ ಈ ಕೈಗಳಿಂದ ಪ್ರಚಂಡವಾದ ಗದೆಯನ್ನು ತಿರುಗಿಸುತ್ತ ದುರ್ಯೋಧನನ ತೊಡೆಗಳನ್ನು ಪುಡಿಪುಡಿ ಮಾಡಿ, ಘಟ್ಟಿಯಾದ ರಕ್ತದಿಂದ ಕೆಂಪಾದ ಕೈಯುಳ್ಳವನಾಗಿ, ಈ ಭೀಮನು ನಿನ್ನ ಕೇಶಪಾಶಗಳನ್ನು ಕಟ್ಟುವನು.

ದ್ರೌಪದಿ :—ನಾಥ, ನೀನು ಕೋಪಗೊಂಡರೆ ಯಾವುದು ತಾನೆ ಅಸಾಧ್ಯವು? ನಿನ್ನ ಈ ವ್ಯವಸಾಯವನ್ನು ನಿನ್ನ ಅಣ್ಣತಮ್ಮಂದಿರು ಸಮ್ಮತಿಸಬೇಕು.

ಸಹದೇವ :—ಇದು ನಮಗೆ ಸಮ್ಮತವೇ.

(ತೆರೆಯಲ್ಲಿ ಕಲಕಲಧ್ವನಿಯಾಗುವುದು. ಎಲ್ಲರೂ ಆಶ್ಚರ್ಯದಿಂದ ಕಿವಿಗೊಟ್ಟು ಕೇಳುವರು.)

ಭೀಮ :—(ಸಂತೋಷದಿಂದ) ಸಮುದ್ರವನ್ನು ಕಡೆಯುವಾಗ ಸಮುದ್ರದ ನೀರುಗಳೆಲ್ಲವೂ ಮಂದರ ಗುಹೆಗಳಿಗೆ ಪ್ರವೇಶಿಸಿ ಧ್ವನಿಮಾಡುವಂತೆ ಗಂಭೀರವಾಗಿಯೂ, ಪ್ರಳಯಕಾಲದ ಗುಡುಗಿನಂತೆ ಘೋರವಾಗಿಯೂ, ಕೌರವರುಗಳ ಮರಣಕ್ಕೆ ಉತ್ಪಾತ ಸೂಚಕವಾದ ಸಿಡಿಲಿನಂತೆಯೂ, ನನ್ನ ಸಿಂಹನಾದದಂತೆಯೂ, ಧ್ವನಿಮಾಡುವ ದುಂದುಭಿಯನ್ನು ಯಾರು ಹೊಡೆಯುವರು ?

(ಸಡಗರದಿಂದ ಕಂಚುಕಿಯು ಪ್ರವೇಶಿಸುವನು.)

ಕಂಚುಕಿ :—ಕುಮಾರನೇ, ಪಾಂಡವರಲ್ಲಿ ಪಕ್ಷಪಾತದಿಂದ ಕುಪಿತನಾದ ಕುರುರಾಜನು ಭಗವಂತನಾದ ವಾಸುದೇವನನ್ನು ಕಟ್ಟುವುದಕ್ಕಾರಂಭಿಸಿದನು.

(ಎಲ್ಲರೂ ಆಶ್ಚರ್ಯಪಡುವರು.)

ಭೀಮ :—ಕಟ್ಟಿದನೋ ?

ಕಂಚುಕಿ :—ಇಲ್ಲ, ಇಲ್ಲ. ಕಟ್ಟುವುದಕ್ಕಾರಂಭಿಸಿದನು.

ಭೀಮ :—ಅನಂತರದಲ್ಲಿ ಭಗವಂತನೇನು ಮಾಡಿದನು ?

ಕಂಚುಕಿ :—ಅನಂತರದಲ್ಲಿ ಆ ಮಹಾತ್ಮನಾದ ಕೃಷ್ಣನು ವಿಶ್ವರೂಪವನ್ನು ತೋರಿಸಿ, ಎಲ್ಲರನ್ನೂ ಮೂರ್ಛೆಗೊಳಿಸಿ, ಕುರುಬಲವನ್ನು ಕೊಡಹಿ, ನಮ್ಮ ಶಿಬಿರಕ್ಕೆ ಬಂದನು. ಆದ್ದರಿಂದ ಜಾಗ್ರತೆಯಾಗಿಯೇ ಭಗವಂತನು ನಿನ್ನನ್ನು ನೋಡಲಪೇಕ್ಷಿಸುತ್ತಾನೆ.

ಭೀಮ :—(ನಗುತ್ತ) ದುರಾತ್ಮನು ಭಗವಂತನಾದ ವಾಸುದೇವನನ್ನು ಕಟ್ಟುವುದಕ್ಕಾರಂಭಿಸಿದನಲ್ಲ ! ಎಲೈ ದುರಾತ್ಮನೇ, ಕುರುಕುಲಕ್ಕೆ ಅಪಖ್ಯಾತಿಯನ್ನು ತರತಕ್ಕವನೇ ? ಹೀಗೆ ನೀನು ಮರ್ಯಾದೆ ತಪ್ಪಿ ನಡೆಯುವಾಗ ಪಾಂಡವರ ಕೋಪವು ನಿನ್ನ ವಿಷಯದಲ್ಲಿ ನಿಮಿತ್ತಮಾತ್ರವು.

ಸಹದೇವ :—ಆ ದುರಾತ್ಮನಾದ ದುರ್ಯೋಧನನು ಭಗವಂತನಾದ ವಾಸುದೇವನ ಸ್ವರೂಪವನ್ನರಿಯನೆ ?

ಭೀಮ :—ವತ್ಸ, ಆ ದುರಾತ್ಮನು ಶುದ್ಧ ಮೂರ್ಖನು. ಹೇಗೆ ತಿಳಿಯುವನು ? ನೋಡು, ಆತ್ಮಾರಾಮರಾಗಿರುವ ಋಷಿಗಳು ಜ್ಞಾನಾಧಿಕ್ಯದಿಂದ ರಜಸ್ತಮೋಗುಣಗಳನ್ನಳಿದು, ಶುದ್ಧ ಸತ್ವರಾಗಿ ಅಸಂಪ್ರಜ್ಞಾತಸಮಾಧಿಯಲ್ಲಿ ತ್ರಿಗುಣಾತೀತಸ್ಥಾನದಲ್ಲಿ ಪ್ರಕಾಶಿಸುವ ಯಾವ ಮಹಾತ್ಮನನ್ನು ನೋಡುತ್ತಾರೆಯೋ ಅಂತಹ ಪುರಾಣಪುರುಷನನ್ನು ಮೋಹಾಂಧನಾದ ಇವನು ಹೇಗೆತಾನೇ ತಿಳಿಯುವನು ? ಆರ್ಯನೇ, ಮೈತ್ರೇಯನೇ, ಗುರುವಾದ ಧರ್ಮರಾಯನು ಈಗ ಏನು ಮಾಡಬೇಕೆಂದಿಧಾನೆ ?

ಕಂಚುಕಿ :—ಕುಮಾರನೇ, ಮಹಾರಾಜನ ಅಧ್ಯವಸಾಯವನ್ನು ನೀನೇ ಹೋಗಿ ತಿಳಿಯಬಹುದು. (ಎಂದು ಹೊರಟು ಹೋಗುವನು.)

(ತೆರೆಯಲ್ಲಿ) ದ್ರುಪದ, ವಿರಾಟ, ವೃಷ್ಣ್ಯಂಧಕ, ಸಹದೇವರೇ ಮೊದಲಾದ ಎಲೈ ನಮ್ಮ ದಳಪತಿಗಳಿರಾ, ನೀವುಗಳೂ, ಕೌರವ ಸೈನ್ಯ ಪ್ರಧಾನಯೋಧರುಗಳೂ ಸಹ ಇದನ್ನು ಕೇಳತಕ್ಕದ್ದು. ಏನೆಂದರೆ ಸತ್ಯವ್ರತಕೆ

ಭಂಗಬರುವುದೆಂಬ ಭಯದಿಂದ ಪ್ರಯತ್ನಪಟ್ಟು ಕಡನೆ ಮಾಡಿಕೊಂಡಿದ್ದಿದ್ದಲ್ಲದೆ, ವಂಶಕ್ಕೆ ಶಾಂತಿಯನ್ನಪೇಕ್ಷಿಸಿ, ವೈರಣೆಯುಳ್ಳ ಧರ್ಮರಾಯನು ಕೊನೆಗೆ ಮರೆತುಬಿಡುವುದಕ್ಕೂ ಕೂಡ ಅಪೇಕ್ಷಿಸಿಕೊಂಡಿದ್ದ, ದ್ಯೂತದಲ್ಲಿ ಹುಟ್ಟಿದ ದ್ರೌಪದೀ ಕೇಶಾಂಬರಾಕರ್ಷಣಗಳಿಂದ ಬೆಳೆದ ಧರ್ಮರಾಯನ ಕ್ರೋಧಾಗ್ನಿಯು ಕುರುವನದಲ್ಲಿ ದೊಡ್ಡದಾಗಿ ಹಬ್ಬುತ್ತಲಿದೆ.

ಭೀಮ :—(ಕೇಳಿ ಸಂತೋಷದಿಂದಲೂ, ಕೋಪದಿಂದಲೂ) ಹಬ್ಬಲಿ! ಹಬ್ಬಲಿ! ಈಗ ಆರ್ಯನ ಕ್ರೋಧವು ಅಪ್ರತಿಹತವಾಗಿರುವುದು.

(ತೆರೆಯಲ್ಲಿ ಪುನಃ ಕಲಕಲವಾಗುವುದು.)

ದ್ರೌಪದಿ :—ನಾಥನೇ, ಪ್ರಳಯಕಾಲದ ಮೇಘದ ಗುಡುಗಿನಂತೆ ಈಗ ರಣದುಂದುಭಿಯು ಅಡಿಗಡಿಗೂ, ಏಕೆ ಹೊಡೆಯಲ್ಪಡುತ್ತಲಿದೆ ?

ಭೀಮ :—ಬೇರೆ ಏನು ? ಒಂದು ಯಜ್ಞವು ಪ್ರಾರಂಭವಾಗುವುದು.

ದ್ರೌಪದಿ :—ಯಾವ ಯಜ್ಞ ?

ಭೀಮ :—ರಣಯಜ್ಞವು. ಇದರಲ್ಲಿ ನಾವು ನಾಲ್ಕು ಜನಗಳು ಋತ್ವಿಕ್ಕುಗಳು. ಭಗವಂತನಾದ ಕೃಷ್ಣನೇ ಕರ್ಮೋಪದೇಶಕನು. ಧರ್ಮರಾಯನೇ ದೀಕ್ಷಿತನು. ಅವನ ಪತ್ನಿಯಾದ ನೀನು ವ್ರತವನ್ನು ಗ್ರಹಿಸಿರುವೆ. ಕೌರವರೇ ಪಶುಗಳು. ಪತ್ನಿಯ ಅವಮಾನದಿಂದುಂಟಾದ ಕ್ಲೇಶದ ಉಪಶಾಂತಿಯೇ ಫಲ. ರಾಜರುಗಳನ್ನು ಕರೆಯುವುದಕ್ಕೋಸ್ಕರ ದುಂದುಭಿ ವಾದ್ಯವು ಧ್ವನಿಮಾಡುತ್ತಲಿದೆ.

ಸಹದೇವ :—ಆರ್ಯನೇ, ಗುರುಜನರ ಅಪ್ಪಣೆಯನ್ನು ತೆಗೆದುಕೊಂಡು, ನಮ್ಮ ಪರಾಕ್ರಮಕ್ಕೆ ತಕ್ಕಂತೆ ಕೆಲಸ ಮಾಡುವುದಕ್ಕೋಸ್ಕರ ಈಗ ನಾವು ಹೋಗೋಣ.

ಭೀಮ :—ಆರ್ಯನ ಅಪ್ಪಣೆಯಂತೆ ನಡೆಯಲು ಸಿದ್ಧನಾಗಿಯೇ ಇರುವೆನು. (ಎದ್ದು) ದೇವಿಯೇ, ಕುರುಕುಲ ಕ್ಷಯಕ್ಕೋಸ್ಕರ ಇನ್ನು ಹೋಗೋಣ.

ದ್ರೌಪದಿ :—(ಬಾಷ್ಪವನ್ನು ಬಿಗಿಹಿಡಿದು) ನಾಥನೇ, ರಾಕ್ಷಸರೊಂದಿಗೆ ಯುದ್ಧ ಮಾಡುವುದಕ್ಕೆ ಹೊರಟ ನಾರಾಯಣನಿಗೆ ಆದ ಮಂಗಳವು ನಿನಗೆ ಆಗಲಿ.

ಚೇಟಿ :—ದೇವಿಯು ಇನ್ನೂ ಒಂದು ಹೇಳುತ್ತಾಳೆ. ನಾಥನೇ, ನೀವು ಯುದ್ಧದಿಂದ ಹಿಂತಿರುಗಿ ಬಂದು ನನ್ನನ್ನು ಸಮಾಧಾನ ಪಡಿಸಬೇಕು.

ಭೀಮ :—ಬರೀ ಸಮಾಧಾನದಿಂದೇನು? ಪುನಃ ತಿರಸ್ಕಾರದಿಂದ ಕೂಡಿ ಬಾಡಿ ಲಜ್ಜಿತವಾದ ಮುಖದಿಂದ ಕೂಡಿದ ಮತ್ತು ಕೌರವರನ್ನು ನಿಶ್ಶೇಷರನ್ನಾಗಿ ಮಾಡದ ಭೀಮನನ್ನು ನೀನು ಪುನಃ ನೋಡುವುದಿಲ್ಲ.

ದ್ರೌಪದಿ :—ನಾಥ, ನನಗೆ ಉಂಟಾದ ಕ್ಲೇಶಕ್ಕಾಗಿ ಹೆಚ್ಚಿದ ಕೋಪಕ್ಕೆ ಮನಗೊಟ್ಟು ಶರೀರವನ್ನು ನೋಡದೆ ಯುದ್ಧದಲ್ಲಿ ಸಂಚರಿಸಬಾರದು. ಶತ್ರುಸೈನ್ಯದಲ್ಲಿ ಬಹು ಜಾಗರೂಕರಾಗಿರಬೇಕು.

ಭೀಮ :—ಭೀಮಸೇನನಾದ ನಾನು ಜಾಗರೂಕನಾಗಿರಬೇಕೋ! ಎಲೌ ಸುಕ್ಷತ್ರಿಯಳೇ, ಪರಸ್ಪರ ಪೆಟ್ಟುಗಳಿಂದ ಮುರಿದು ಬಿದ್ದಿರುವ ಆನೆಗಳ ರಕ್ತಮಾಂಸಗಳಿಂದ ಕೆಸರಾಗಿ, ಆ ಕೆಸರಿನಲ್ಲಿ ಮುಳುಗಿದ ರಥಗಳ ಮೇಲೆ ಹೆಜ್ಜೆಯನ್ನಿಟ್ಟುಕೊಂಡು, ಪರಾಕ್ರಮವನ್ನು ತೋರುವ ಪದಾತಿಗಳುಳ್ಳದಾಗಿಯೂ, ರಕ್ತಗಳನ್ನು ಹೆಚ್ಚಾಗಿ ಕುಡಿದು ಕೂಗುವ ನರಿಗಳ ಕೂಗನ್ನನುಸರಿಸಿ ಕುಣಿಯುವ ಕಬಂಧಗಳುಳ್ಳದ್ದಾಗಿಯೂ ಇರುವ ಯುದ್ಧರಂಗದಲ್ಲಿ ಸಂಚರಿಸುವುದಕ್ಕೆ ಪಾಂಡವರು ಪಂಡಿತರು. (ಎಂದು ಹೊರಟುಹೋಗುವರು.)

ಇತಿ ಪ್ರಥಮಾಂಕ.

---

# ದ್ವಿತೀಯಾಂಕ

---

(ಕಂಚುಕಿಯು ಪ್ರವೇಶಿಸುವನು.)

ಕಂಚುಕಿ :—ತಾಯಿಯ ಪಾದವಂದನವನ್ನಾಚರಿಸಿ, ಭಾನುಮತಿಯು ಅಂತಃಪುರಕ್ಕೆ ಬಂದಿರುವಳೇ ಇಲ್ಲವೇ ಎಂಬಂಶವನ್ನು ತಿಳಿದುಬರುವಂತೆ ಮಹಾರಾಜ ದುರ್ಯೋಧನನು ನನಗೆ ಆಜ್ಞಾಪಿಸಿರುವನು. ಇದೂ ಅಲ್ಲದೆ ಇವ

ಳನ್ನು ನೋಡಿ ಅನಂತರದಲ್ಲಿ ಅಭಿಮನ್ಯುವನ್ನು ಸಂಹರಿಸಿ ಬಂದಿರುವ ಕರ್ಣ, ಜಯದ್ರಥ ಇವರೇ ಮೊದಲಾದವರನ್ನು ಯುದ್ಧಭೂಮಿಗೆ ಹೋಗಿ ಸನ್ಮಾನಿಸಬೇಕೆಂದು ಹೇಳಿರುವನು. ಆದ್ದರಿಂದ ನಾನು ಜಾಗ್ರತೆ ಹೋಗಬೇಕು. ಮಹಾರಾಜನ ಪ್ರಭಾವವು ಅನ್ಯಾದೃಶವಾದದ್ದು. ನನಗೋ ಅಂದರೆ, ಮುದುಕನಾದ್ದರಿಂದ ಸುಮ್ಮನೆ ಮರ್ಯಾದೆಗೆ ಮಾತ್ರ ಅಂತಃಪುರದ ಕೆಲಸವು ಅಥವಾ ಮುಪ್ಪನ್ನೇಕೆ ದೂಷಿಸಲಿ. ಅಂತಃಪುರದಲ್ಲಿರುವವರೆಲ್ಲರ ವೇಷ, ನಡತೆ, ವ್ಯವಹಾರ, ಎಲ್ಲವೂ ಮುದುಕನಂತೆಯೇ. ಕಣ್ಣುಗಳಿದ್ದರೂ ಸರಿಯಾಗಿ ನೋಡುವುದಕ್ಕಿಲ್ಲ. ಕಿವಿಗಳಿದ್ದರೂ ಯಾವುದನ್ನೂ ಕೇಳದಂತಿರಬೇಕು. ಶಕ್ತಿಯಿದ್ದರೂ ಸರ್ಕಾರಕ್ಕೋಸ್ಕರ ಕೈಯಲ್ಲಿ ದೊಣ್ಣೆಯನ್ನು ಹಿಡಿದೇ ಇರಬೇಕು. ನಡೆಯಲ್ಲಿ ಎಲ್ಲಿ ತಪ್ಪು ಬರುವುದೋ ಎಂದು ಉದ್ಧತವಾಗಿ ನಡೆಯಕೂಡದು. ಹೀಗಿರುವಾಗ ಮುದಿತನದಲ್ಲಿ ತಪ್ಪೇನು ? (ಆಕಾಶದಲ್ಲಿ ದೃಷ್ಟಿಯಿಟ್ಟು) ಹುಹಂಗಿಕೆ! ಹುಹಂಗಿಕೆ! ದೇವಿಯಾದ ಭಾನುಮತಿಯು ಅತ್ತೆಯ ಪಾದವಂದನವನ್ನು ಮಾಡಿ ಹಿಂತಿರುಗಿದಳೋ ಹೇಗೆ? ಏನು ಹೇಳಿದೆ ? ಆರ್ಯನೇ, ಈ ಭಾನುಮತೀ ದೇವಿಯು ಯುದ್ಧದಲ್ಲಿ ಪತಿಗೆ ಜಯವಾಗಬೇಕೆಂದೆಣಿಸಿ, ದೇವಗುರುಪಾದವಂದನವನ್ನು ಮುಗಿಸಿಕೊಂಡು, ಇದು ಮೊದಲು ನಿಯಮನಿಷ್ಠಳಾಗಿ ದೇವಮಂದಿರದ ಬಾಲೋದ್ಯಾನದಲ್ಲಿರುವಳೆಂದೋ ? ಆಗಲಿ. ಈ ಸಂಗತಿಯನ್ನು ಮಹಾರಾಜನಿಗೆ ತಿಳಿಸುವೆನು. (ಎರಡು ಹೆಜ್ಜೆ ಮುಂದೆ ಹೋಗಿ) ಎಲೌ ಪತಿವ್ರತೆಯೇ, ನಿನ್ನ ಕೆಲಸವೇ ಸಾಧುವಾದದ್ದು. ನೀನು ಸ್ತ್ರೀ ಸ್ವಭಾವದಲ್ಲಿದ್ದಾಗ್ಯೂ ಮಹಾರಾಜನಿಗಿಂತಲೂ ನೀನೇ ಯೋಗ್ಯಳು. ಮಹಾರಾಜನಾದರೋ ಸ್ವಯಂ ಬಲಿಷ್ಠರಾಗಿಯೂ, ಕೃಷ್ಣ ಸಹಾಯವನ್ನು ಪಡೆದಿರುವಂಥಾವರಾಗಿಯೂ ಇರುವ ಪಾಂಡವರುಗಳು ಯುದ್ಧಕ್ಕೆ ನಿಂತಿರುವಾಗ ಈಗಲೂ ಅಂತಃಪುರ ವಿಹಾರದಲ್ಲಿ ಆಸಕ್ತಿಯುಳ್ಳವನಾಗಿರುತ್ತಾನೆ. (ಹಾಗೆಯೇ ಯೋಚಿಸಿ) ನಮ್ಮ ಸ್ವಾಮಿಯ ವ್ಯಾಪಾರವು ವಿಪರೀತವಾದದ್ದು. ಶಸ್ತ್ರವನ್ನು ಧರಿಸಿದ್ದು ಮೊದಲು ಅಪ್ರತಿಹತವಾದ ಪರಸ್ವಧವುಳ್ಳ ಪರಶುರಾಮನನ್ನು ಜಯಿಸಿದ ಭೀಷ್ಮಾಚಾರ್ಯನು ಪಾಂಡವರುಗಳ ಬಾಣದಿಂದ ಮಲಗಿದ್ದು ಇವನ ಸಂತಾಪಕ್ಕೆ ಕಾರಣವಾಗಲಿಲ್ಲ. ಜಯದಿಂದ ಬಳಲಿ ಬಿಲ್ಲು ಮುರಿದು ಒಬ್ಬಂಟಿಗ

ನಾಗಿ ಇನ್ನೂ ಬಾಲಕನಾದ ಅಭಿಮನ್ಯುವನ್ನು ಶ್ರೇಷ್ಠರಾದ ಅನೇಕ ಧನುರ್ಧಾರಿಗಳು ಸೇರಿ ಕೊಂದದ್ದಕ್ಕೆ ಸಂತೋಷಪಡುತ್ತಲಿದ್ದಾನೆ. ಸರ್ವಪ್ರಕಾರದಲ್ಲಿಯೂ ದೈವವು ನಮಗೆ ಒಳ್ಳೆಯದನ್ನು ಮಾಡುವುದಿಲ್ಲ. ದೇವಿಯು ಇಲ್ಲಿರುವ ಸಂಗತಿಯನ್ನು ಮಹಾರಾಜನಿಗೆ ತಿಳಿಸುವೆನು. (ಎಂದು ಹೋಗುವನು.)

(ಭಾನುಮತಿ, ಚೇಟಿ, ಸಖಿ ಇವರುಗಳು ಪ್ರವೇಶಿಸುವರು.)

ಸಖಿ :—ಭಾನುಮತಿಯೇ, ಸ್ವಪ್ನವನ್ನು ಕಂಡ ಮಾತ್ರದಿಂದಲೇ ಅಭಿಮಾನಿಯಾದ ಮಹಾರಾಜ ದುರ್ಯೋಧನನ ಮಹಿಷಿಯಾಗಿದ್ದರೂ ಧೈರ್ಯಗೆಟ್ಟು ಏಕೆ ಹೀಗೆ ಸಂತಾಪಪಡುತ್ತೀಯೆ?

ಚೇಟಿ :—ಮಹಾರಾಣಿಯೇ, ಸಖಿಯು ಹೇಳಿದ್ದು ನಿಜವಾಗಿದೆ. ಸ್ವಪ್ನದಲ್ಲಿ ಜನಗಳು ಏನೇನು ಕಂಡು ಹೇಳಿಕೊಳ್ಳುವುದಿಲ್ಲ?

ಭಾನುಮತಿ :—ಸಖಿ, ನೀನು ಹೇಳಿದ್ದು ನಿಜ. ಆದರೆ ಆ ಸ್ವಪ್ನವು ಈಗಲೂ ನನಗೆ ಕಂಡಂತೆ ಕಾಣುತ್ತದೆ.

ಸಖಿ :—ಹಾಗಾದರೆ ಸ್ವಪ್ನದಿಂದಾದ್ದು ಏನು? ಅದನ್ನು ನಾವು ಯೋಚಿಸಿ, ಧರ್ಮಾಚರಣೆಯಿಂದಲೂ, ದೇವತಾಪ್ರಾರ್ಥನೆಯಿಂದಲೂ, ಬ್ರಾಹ್ಮಣರಿಗೆ ದಾನಮಾಡುವುದರಿಂದಲೂ, ಪರಿಹಾರ ಮಾಡಿಕೊಳ್ಳಬಹುದು.

ಚೇಟಿ :—ಮಹಾರಾಣಿಯೇ, ನಿಜ. ಸ್ವಪ್ನವು ಅಶುಭಸೂಚಕವಾದಾಗ್ಯೂ, ದೇವರ ಸ್ತೋತ್ರಗಳಿಂದ ಸಂಗ್ರಾಮದಲ್ಲಿ ಶುಭಕರವಾಗುವುದೆಂದು ಹೇಳುತ್ತಾರೆ.

ಭಾನುಮತಿ :—ಹಾಗಾದರೆ ಹೇಳುವೆನು ಕೇಳಿ. ಈ ದಿನದ ಪ್ರಮದ ವನದಲ್ಲಿ ಕುಳಿತುಕೊಂಡಿದ್ದ ನನ್ನ ಮುಂದೆ ದಿವ್ಯಾಕೃತಿಯುಳ್ಳ ಒಂದು ನಕುಲವು (ಮುಂಗುಸಿ) ನೂರು ಹಾವುಗಳನ್ನು ಕೊಂದಿತು.

ಚೇಟಿ, ಸಖಿಯರು :—ಪಾಪವು ಶಾಂತವಾಗಲಿ. ಅಮಂಗಳವು ಪ್ರತಿಹತವಾಗಲಿ. ಆಮೇಲೆ.

ಭಾನುಮತಿ :—ಭಯದಿಂದ ಮರೆತುಹೋಯಿತು. ಜ್ಞಾಪಿಸಿಕೊಂಡು ಎಲ್ಲವನ್ನೂ ಹೇಳುವೆನು ಸ್ವಲ್ಪ ತಾಳಿ. (ಎಂದು ಯೋಚಿಸುವಳು.)

(ದುರ್ಯೋಧನನು ಕಂಚುಕಿಯೊಡನೆ ಪ್ರವೇಶಿಸುವನು.)

ದುರ್ಯೋಧನ:—ಶತ್ರುಗಳ ವಿಷಯದಲ್ಲಿ ಮರೆಯಾಗಿಯೇ ಆಗಲಿ, ಪ್ರತ್ಯಕ್ಷವಾಗಿಯೇ ಆಗಲಿ, ಅಲ್ಪವಾಗಲೀ, ಹೆಚ್ಚಾಗಲೀ, ದ್ರೋಹವನ್ನು ತಾನಾಗಲೀ, ತನ್ನ ಕಡೆಯವನಾಗಲೀ ಮಾಡಿದಾಗ್ಯೂ ಬಹಳ ಸಂತೋಷವನ್ನುಂಟುಮಾಡುವುದು. ಆದುದರಿಂದಲೇ ಈಗ ದ್ರೋಣ, ಕರ್ಣ, ಜಯದ್ರಥಾದಿಗಳು ಸೇರಿ, ಅಭಿಮನ್ಯುವನ್ನು ಕೊಂದರೆಂಬುವುದನ್ನು ಕೇಳಿ, ಮನಸ್ಸು ಬಹಳ ಸಂತೋಷಪಡುತ್ತಲಿದೆ.

ಕಂಚುಕಿ:—ಸ್ವಾಮಿ, ಆಚಾರ್ಯನಿಂದ ಶಿಕ್ಷೆಯನ್ನು ಹೊಂದಿದ ತಮ್ಮ ಅಸ್ತ್ರಪ್ರಭಾವಕ್ಕೆ ಇದು ಒಂದು ದೊಡ್ಡದಲ್ಲ.

ಕರ್ಣ ಜಯದ್ರಥರುಗಳಿಗೆ ತಾನೇ ಈ ವಿಷಯದಲ್ಲೇನು ಹೊಗಳಿಕೆ?

ದುರ್ಯೋಧನ:—ವಿನಯಂಧರ ಏನು ಹೇಳಿದೆ! ಒಬ್ಬಂಟಿಗನಾದ ನಿರಾಯುಧನಾದ ಹುಡುಗನನ್ನು ಬಹು ಜನಗಳು ಕೊಂದರೆಂದೋ! ವೃದ್ಧನಾದ ಭೀಷ್ಮಾಚಾರ್ಯನನ್ನು ಶಿಖಂಡಿಯನ್ನು ಮುಂದೆ ನಿಲ್ಲಿಸಿ ಕೊಂದ ಪಾಂಡವರುಗಳಿಗೆ ಯಾವ ಶ್ಲಾಘನೆಯೋ ಆ ಶ್ಲಾಘನೆಯು ನಮಗೂ ಇರುವುದು.

ಕಂಚುಕಿ:—ಮಹಾರಾಜನೇ ಹಾಗೆ ಕಲ್ಪಿಸಕೂಡದು. ನಮ್ಮ ಪರಾಕ್ರಮಕ್ಕೆ ಕೊರತೆಯು ಹಿಂದೆ ಯಾವಾಗಲೂ ಯೋಚಿಸಲ್ಪಟ್ಟಿಲ್ಲವೆಂದು ವಿಜ್ಞಾಪಿಸಿಕೊಂಡೆನು.

ದುರ್ಯೋಧನ:—ಹಾಗೆಯೇ ಸರಿ. ಭೃತ್ಯರೊಂದಿಗೂ, ಬಂಧುಗಳೊಂದಿಗೂ, ಮಿತ್ರರೊಂದಿಗೂ, ಮಕ್ಕಳೊಂದಿಗೂ, ತಮ್ಮಂದಿರೊಂದಿಗೂ, ಯುದ್ಧದಲ್ಲಿ ಪಾಂಡುಪುತ್ರನು ಸುಯೋಧನನನ್ನು ಜಾಗ್ರತೆಯಾಗಿಯೇ ತನ್ನ ಬಲದಿಂದ ಕೊಲ್ಲುವನು.

ಕಂಚುಕಿ:—(ಭಯದಿಂದ ಕಿವಿಯನ್ನು ಮುಚ್ಚಿಕೊಂಡು) ಶಾಂತಂ ಪಾಪಂ, ಶಾಂತಂ ಪಾಪಂ.

ದುರ್ಯೋಧನ:—ವಿನಯಂಧರ, ನಾನೇನು ಹೇಳಿದೆ!

ಕಂಚುಕಿ:—ದುರ್ಯೋಧನನು ಪಾಂಡುಪುತ್ರನನ್ನು ಎಂಬುವುದಕ್ಕೆ ಬದಲಾಗಿ

ದುರ್ಯೋಧನನನ್ನು ಪಾಂಡುಪುತ್ರನು ಎಂದು ವಿಪರೀತವಾಗಿ ಹೇಳೋಣ ವಾಯಿತು.

ದುರ್ಯೋಧನ :—ಈಗ ಭಾನುಮತಿಯು ವಾಸಭವನದಿಂದ ನನಗೆ ತಿಳಿಸದೇ ಪ್ರಾತಃಕಾಲನಲ್ಲಿಯೇ ಹೊರಟುಹೋದಳೆಂದು ನನ್ನ ಮನಸ್ಸು ವ್ಯಾಕುಲ ವಾಗಿರುವುದು. ಅವಳಿರುವ ಸ್ಥಳವನ್ನು ತೋರಿಸು.

ಕಂಚುಕಿ :—ಹೀಗೆ ದಯಮಾಡಬೇಕು. (ಸುತ್ತಲೂ ನೋಡಿ ಪ್ರಕಾಶವಾಗಿ) ಮಹಾರಾಜರೇ, ಬಾಲೋದ್ಯಾನವು ಮುಂದೆ ಕಾಣಿಸುತ್ತಿರುವುದು. ಇಲ್ಲಿ ಪುಷ್ಪಗಳ ಮೇಲೆ ಮಂಜಿನ ಹನಿಗಳು ಕಣಕಣವಾಗಿ ಬಿದ್ದಿರುವುವು. ತಣ್ಣಗೆ ಬೀಸುವ ಗಾಳಿಯಿಂದ ಹೂವುಗಳು ತೊಟ್ಟು ಕಳಚಿ ಬೀಳುತ್ತಿರುವುವು. ಮಲ್ಲಿಯ ಮೊಗ್ಗುಗಳು ಈಗತಾನೆ ಅರಳುತ್ತಿರುವುದರಿಂದ, ಅದರ ವಾಸ ನೆಯು ಬಹಳವಾಗಿ ಹೊರಡುತ್ತಿರುವುದು. ಪಾದರೀ ಹೂವುಗಳು ಬಹಳ ಅಂದವಾಗಿ ಕಾಣಿಸುತ್ತಿರುವುವು. ಇಲ್ಲಿ ಹಿಮಕಣಗಳೊಂದಿಗೆ ಕೂಡಿದ ಮಕರಂದಗಳನ್ನು ಸುರಿಸುತ್ತಿರುವ ಪುಷ್ಪಗಳನ್ನು ಬಿಟ್ಟು, ಭ್ರಮರಗಳು ಸೂರ್ಯಕಿರಣದಿಂದ ಈಗತಾನೆ ಅರಳುತ್ತಿರುವ ತಾವರೆ ಹೂವುಗಳ ಗಂಧ ವನ್ನು ತಿಳಿದು ಅಲ್ಲಿಗೆ ಹೋಗುತ್ತಿವೆ. ಇಗೋ ಇಲ್ಲಿಯೇ ಭಾನುಮತಿಯು ಸುವದನೆ, ತರಳಿಕೆ ಇವರುಗಳಿಂದ ಸೇವಿಸಲ್ಪಡುತ್ತಲಿದ್ದಾಳೆ.

ದುರ್ಯೋಧನ :—ನೀನು ಯುದ್ಧಕ್ಕೆ ಸಿದ್ಧವಾದ ರಥವನ್ನು ತೆಗೆದುಕೊಂಡು ಬಾ, ನಾನು ದೇವಿಯನ್ನು ನೋಡಿ ಒಡನೆಯೇ ಬರುವೆನು.

ಕಂಚುಕಿ :—(ಅಪ್ಪಣೆ ಎಂದು ಹೋಗುವನು.)

ಸಖೀ :—ಪ್ರಿಯಸಖಿಯೇ, ಜ್ಞಾಪಿಸಿಕೊಂಡೆಯಾ ?

ಭಾನುಮತಿ :—ಹಾ ! ಜ್ಞಾಪಕಕ್ಕೆ ಬಂತು. ಪ್ರಮದ ವನದಲ್ಲಿ ಕೂತಿದ್ದ ನನ್ನ ಮುಂದೆ ಯಾವುದೋ ಒಂದು ದಿವ್ಯರೂಪವುಳ್ಳ ನಕುಲವು ನೂರು ಹಾವು ಗಳನ್ನು ಕೊಂದಿತು.

ಇಬ್ಬರೂ :—ಶಾಂತಂ ಪಾಪಂ. ಶಾಂತಂ ಪಾಪಂ.

ಭಾನುಮತಿ :—ಸಂತಾಪದಿಂದ ಮನಸ್ಸು ಘಾಬರಿಗೊಂಡು ಪುನಃ ಮರೆತು ಹೋಯಿತು.

ದುರ್ಯೋಧನ:—ಭಾನುಮತಿಯು ಸುವದನಾ ತರಳಿಕೆಯರೊಂದಿಗೆ ಏನೋ ಮಾತ ನಾಡುತ್ತಾ ಕುಳಿತಿರುವಳು. ಇರಲಿ. ಇವರ ಧಾರಾಳದ ಮಾತುಗಳನ್ನು ಈ ಬಳ್ಳಿಯ ಮರೆಯಲ್ಲಿ ನಿಂತು ಕೇಳುವೆನು.

ಸಖಿ:—ಸಂತಾಪವೇಕೆ, ಹೇಳು ?

ದುರ್ಯೋಧನ:—ಇವಳ ಸಂತಾಪಕ್ಕೇನು ಕಾರಣವೋ ತಿಳಿಯಲಿಲ್ಲ. ಅಥವಾ ವಾಸಭವನದಿಂದ ನನಗೆ ತಿಳಿಸದೇನೇ ಹೊರಟುಹೋದಳಾದ್ದರಿಂದ, ಇವ ಳಿಗೆ ಕೋಪವಿದೆಯೆಂಬುದು ಸಿದ್ಧವಾಗಿಯೇ ಇದೆ. ಎಲೈ ಭಾನುಮ ತಿಯೇ, ನಿನ್ನ ಕೋಪಕ್ಕೆ ದುರ್ಯೋಧನನು ವಿಷಯನಲ್ಲವಲ್ಲ! ತಿಳಿಯದೆ ನಾನು ನಿನ್ನ ಬಾಹುವನ್ನು ನನ್ನ ಕಂಠದಿಂದ ಶಿಥಿಲ ಮಾಡಿದೆನೆ? ನಿದ್ರೆ ಯಲ್ಲಿ ನಿನಗೆದುರಾಗಿ ತಿರುಗಿಕೊಂಡು, ನಾನು ಗೌರವಿಸಲಿಲ್ಲವೆ? ಸ್ವಪ್ನದಲ್ಲಿ ಅನ್ಯಸ್ತ್ರೀ ವಿಷಯವಾದ ಮಾತನ್ನು ನಾನು ಆಡಿದ್ದನ್ನೇನಾದರೂ ಕಂ ಡೆಯಾ ? ಪ್ರಿಯಳೇ, ನನ್ನಲ್ಲಿ ಯಾವ ದೋಷವನ್ನು ಕಂಡಿರುವೆ ? (ಹಾ ಗೆಯೇ ಯೋಚಿಸಿ) ಅಥವಾ ನನ್ನಲ್ಲಿ ಹೆಚ್ಚು ಪ್ರೇಮವುಳ್ಳವಳಾದ ಕಾರಣ, ಅತ್ಯಂತ ವಲ್ಲಭನಾದ ನನ್ನಲ್ಲಿ ಪ್ರೇಮದಿಂದ ಮಾತ್ಸರ್ಯವನ್ನು ಕಲ್ಪಿಸಿ ಕೊಂಡು ಏನಾದರೂ ಅಪರಾಧಲೇಶವನ್ನು ತಾನಾಗಿಯೇ ಊಹಿಸಿಕೊಂಡು ಕೋಪಿಸಿಕೊಂಡಿರಬಹುದು. ಆದರೂ ಏನು ಹೇಳುವಳೋ ಕೇಳುವೆನು.

ಭಾನುಮತಿ:—ಅನಂತರದಲ್ಲಿ ಆ ದಿವ್ಯ ರೂಪವುಳ್ಳ ನಕುಲನನ್ನು ನೋಡಿ ನನಗೆ ಆಶೆಯಾಯಿತು.

ದುರ್ಯೋಧನ:—ಏನು ? ಅತಿಶಯ ದಿವ್ಯರೂಪವುಳ್ಳ ನಕುಲನನ್ನು ನೋಡಿ ನನಗೆ ಆಶೆಯಾಯಿತು. ಪಾಪಿಷ್ಠಳಾದ ಇವಳು ಮಾದ್ರೀ ಪುತ್ರನಲ್ಲಿ ಅನುರಕ್ತ ಳಾಗಿ ನನ್ನನ್ನು ಮೋಸ ಮಾಡಿರುವಳೇ ? (ಹಾಗೆಯೇ ಊಹಿಸಿ) ಅಯ್ಯೋ ಮೂಢನಾದ ದುರ್ಯೋಧನನೇ, ಜಾರಿಣಿಯಿಂದ ಮೋಸಹೋದ ನಿನ್ನನ್ನು ಬಹುಮಾನಾರ್ಹನೆಂದು ತಿಳಿದುಕೊಂಡಿದ್ದೆಯಲ್ಲ! ಈಗ ಏನು ಹೇಳುವಿ? ಅದಕ್ಕಾಗಿಯೇ ಇವಳಿಗೆ ಬೆಳಗಾದ ಒಡನೆಯೇ ರಹಸ್ಯವಾದ ಸ್ಥಳದಲ್ಲಿ ಅಭಿ ಲಾಷೆಯು. ಸಖಿಯರೊಂದಿಗೆ ಮಾತನಾಡುವುದರಲ್ಲಿ ಪಕ್ಷಪಾತವು. ಈ ದುರ್ಯೋಧನನಾದರೋ ಮೋಹಕ್ಕೆ ಸಿಕ್ಕಿ ಜಾರಿಣಿಯ ಮನೋಭಾವವನ್ನ

ನಿಯುದೆ ಪ್ರಮಿಸಿರುವನು. ಎಲೈ ಪಾಪಿಷ್ಠಳೇ! ನನ್ನನ್ನು ಪರಿಗ್ರಹಿಸಿದ ದುಷ್ಟಳೇ, ನನ್ನ ಮುಂದೆ ನಿನಗೆ ಅಷ್ಟು ಹೆದರಿಕೆ. ಇಷ್ಟು ಸಾಹಸವು. ನನ್ನ ಶರೀರವನ್ನು ಬಹಳವಾಗಿ ಹೊಗಳುವುದು, ಪಾತಿವ್ರತ್ಯವನ್ನು ಮೀರಿ ನಡೆಯುವ ಈ ಅನುರಾಗವು. ಮಂದಬುದ್ಧಿಯಾದ ನನ್ನಲ್ಲಿ ಅಷ್ಟು ಸರಳತೆಯನ್ನು ತೋರಿಸುತ್ತಾ, ವಂಚನೆಯ ಈ ಉಪಾಯವು. ಶ್ರೇಷ್ಠವಾದ ವಂಶದಲ್ಲಿ ಹುಟ್ಟಿಯೂ ಇಂಥ ದುರ್ನಡತೆಯು.

ಸಖಿ :—ಆಮೇಲೆ.

ಭಾನುಮತಿ :—ನಾನು ಆ ಉಪವನವನ್ನು ಬಿಟ್ಟು ಈ ಲತಾಮಂಟಪಕ್ಕೆ ಬಂದೆನು. ಆಗ ಆ ನಕುಲವೂ ಕೂಡ ನನ್ನನ್ನೇ ಹಿಂಬಾಲಿಸುತ್ತಾ, ಆ ಲತಾಮಂಟಪವನ್ನೇ ಹೊಕ್ಕಿತು.

ದುರ್ಯೋಧನ :—ಆಹಾ! ಚಾರಿಣಿಯರಿಗೆ ಯೋಗ್ಯವಾದ ಈ ಪಾಪಿಷ್ಠಳ ಸ್ವಭಾವವು ಅತಿಶಯವಾಗಿರುವುದು. ನನ್ನೊಂದಿಗೆ ಏಕಾಂತದಲ್ಲಿ ಅನುಭವಿಸಿದ ಸುಖಗಳನ್ನು ಹೇಳುವುದಕ್ಕೆ ಯೋಗ್ಯರಾದ ಅದೇ ಸಖಿಯರಲ್ಲಿ ಈಗ ದುರ್ನಡತೆಯನ್ನು ತಿಳಿಸುವ ನಿನಗೆ ನಾಚಿಕೆಯಾಗುವುದಿಲ್ಲವೆ?

ಸಖಿ :—ಆಮೇಲೆ.

ಭಾನುಮತಿ :—ಸಖೀ, ಆ ನಕುಲವು ಗರ್ವದಿಂದ ಕೈನೀಡಿ ನನ್ನ ಸೆರಗನ್ನು ಎಳೆಯಿತು.

ದುರ್ಯೋಧನ :—ಗರ್ವದಿಂದ ಕೈನೀಡಿ ಸೆರಗನ್ನೆಳೆದನೋ? ಇನ್ನು ಕೇಳಿದ್ದು ಸಾಕು. ಇರಲಿ. ಪರಸ್ತ್ರೀಲಂಪಟನಾದ ಮಾದ್ರೀಪುತ್ರನ ಪ್ರಾಣವನ್ನು ಮೊದಲು ತೆಗೆಯುವೆನು. (ಸ್ವಲ್ಪದೂರ ಹೋಗಿ ಯೋಚಿಸಿ) ಅಥವಾ ಪಾಪಶೀಲಳಾದ ಇವಳನ್ನೇ ಮೊದಲು ಶಿಕ್ಷಿಸಬೇಕು. (ಬಂದು ಹಿಂದಿರುಗುವನು.

ಸಖಿ :—ಆಮೇಲೆ.

ಭಾನುಮತಿ :—ಸಖೀ, ಅನಂತರದಲ್ಲಿ ನಾನು ಆರ್ಯಪುತ್ರನ ಪ್ರಭಾತಕಾಲಿಕವಾದ ಮಂಗಳ ಸಂಗೀತದಿಂದ ಕಣ್ಣು ಬಿಟ್ಟೆನು.

ದುರ್ಯೋಧನ :—(ಹಾಗೆಯೇ ಊಹಿಸಿ) ಕಣ್ಣು ಬಿಟ್ಟೆನೆಂದು ಸ್ವಪ್ನವನ್ನು ತಿಳಿಸಿದಳೇನು ? ಇರಲಿ ಸಖಿಯರ ಮಾತಿನಿಂದ ಸ್ಪಷ್ಟವಾಗುತ್ತದೆ.

ಇಬ್ಬರೂ :—(ದುಃಖದಿಂದ ಒಬ್ಬರನ್ನೊಬ್ಬರು ನೋಡುವರು.)

ಸಖಿ :—ಯಾವ ಅನಿಷ್ಟವಾದರೂ ಗಂಗೆಯೇ ಮೊದಲಾದ ಪುಣ್ಯ ನದಿಗಳ ಉದಕದಿಂದ ಪರಿಹರಿಸಿಕೊಳ್ಳಬಹುದು. ಪೂಜ್ಯರಾದ ಬ್ರಾಹ್ಮಣರು ಹೋಮ ಮಾಡಿದ ಅಗ್ನಿಯಲ್ಲಿ ಆ ಅನಿಷ್ಟವೆಲ್ಲವೂ ಸುಟ್ಟುಹೋಗಲಿ.

ದುರ್ಯೋಧನ :—ಸಂದೇಹವೇಕೆ ? ಸ್ವಪ್ನದಲ್ಲಿ ಕಂಡದ್ದನ್ನೇ ಹೇಳಿದಳು. ಮಂದಮತಿಯಾದ ನಾನು ಬೇರೇ ವಿಧವಾಗಿ ಊಹಿಸಿದೆನು. ಪುಣ್ಯಕ್ಕೆ ಅರ್ಧದಲ್ಲೇ ಕೋಪಗೊಂಡು ನಾನು ಉದ್ಧತನಾಗಲಿಲ್ಲ. ಅರ್ಧ ಮಾತಿಗೇನೇ ಕೋಪಗೊಂಡು ಕಠಿಣವಾದ ಮಾತುಗಳನ್ನು ಯಾವುದನ್ನೂ ಆಡಲಿಲ್ಲ. ಪುಣ್ಯಕ್ಕೆ ನನಗೆ ನಂಬಿಕೆಯನ್ನು ಉಂಟುಮಾಡುವುದಕ್ಕೇನೆ ಕಥೆಯು ಮುಗಿಯಿತು. ಪ್ರಪಂಚದಲ್ಲಿ ಇವಳಿಗೆ ಉಂಟಾಗಬಹುದಾಗಿದ್ದ ಮಿಥ್ಯಾಪವಾದವು ತೊಲಗಿತು.

ಭಾನುಮತಿ :—ಸಖೀ, ಇದರಲ್ಲಿ ಯಾವುದು ಶುಭಸೂಚಕ, ಯಾವುದು ಅಶುಭಸೂಚಕ ಹೇಳಿರಿ.

ಇಬ್ಬರೂ :—(ಪರಸ್ಪರವಾಗಿ) ಶುಭಸೂಚನೆಯು ಸ್ವಲ್ಪವೂ ಕಾಣುವುದಿಲ್ಲ. ಸುಳ್ಳು ಹೇಳಿದರೆ ಪ್ರಿಯ ಸಖಿಯಲ್ಲಿ ನಾವು ತಪ್ಪಿತಸ್ಥರಾಗುತ್ತೇವೆ. ಕ್ರೂರವಾದ ಮಾತಾದಾಗ್ಯೂ ಹಿತವನ್ನೇ ಹೇಳಬೇಕಾದದ್ದು ಪ್ರೀತಿಯ ಕೆಲಸವು. (ಪ್ರಕಾಶವಾಗಿ) ಸಖಿಯೇ, ಇದೆಲ್ಲವೂ ಒಳ್ಳೆಯದನ್ನು ಸೂಚಿಸುವುದಿಲ್ಲ. ಆದ್ದರಿಂದ ದೇವರ ಅನುಗ್ರಹದಿಂದಲೂ, ಬ್ರಾಹ್ಮಣರ ಆಶೀರ್ವಾದದಿಂದಲೂ ಪರಿಹರಿಸಿಕೊಳ್ಳಬೇಕು. ಕೋರೇ ಹಲ್ಲುಳ್ಳ ಪ್ರಾಣಿಗಳೂ, ಪಕ್ಷಿಗಳೂ, ಮುಂಗುಸಿಯೂ, ಕಪಿಯೂ, ಹುಲಿಯೂ ಇವುಗಳನ್ನು ಸ್ವಪ್ನದಲ್ಲಿ ಕಾಣುವುದೂ, ನೂರು ಹಾವುಗಳನ್ನು ಕೊಂದಂತೆ ಕಾಣುವುದೂ ಒಳ್ಳೆಯದಲ್ಲವೆಂದು ತಿಳಿದವರು ಹೇಳುತ್ತಾರೆ.

ದುರ್ಯೋಧನ :—ಸುವಚನೆಯು ನಿಜವನ್ನು ಹೇಳಿದಳು. ಮುಂಗುಸಿಯು ನೂರು ಹಾವುಗಳನ್ನು ಕೊಂದದ್ದು, ಎದೆಯ ಶರಗನ್ನೆಳೆದದ್ದು ಮುಂದಾಗುವ

ಅನಿಷ್ಟವನ್ನು ಸೂಚಿಸುವುದೆಂದು ಊಹಿಸುತ್ತೇನೆ. ಸ್ವಪ್ನವು ಒಳ್ಳೆಯದಾಗುವುದೂ ಉಂಟು. ಕೆಟ್ಟದ್ದಾಗುವುದೂ ಉಂಟು. ಕೆಟ್ಟದ್ದರಿಂದ ಒಳ್ಳೆಯದೂ ಆಗುವುದುಂಟು. ಒಳ್ಳೆಯದರಿಂದ ಕೆಟ್ಟದ್ದಾಗುವುದೂ ಉಂಟು. ಆದರ ನೂರು ಎಂಬ ಸಂಖ್ಯೆಯು ಮಾತ್ರ ತಮ್ಮಂದಿರೊಡಗೂಡಿದ ನನಗೆ ಅನ್ವಯಿಸುವಂತೆ ಕಾಣುತ್ತದೆ. (ಎಡಗಣ್ಣು ಹಾರುವುದನ್ನಭಿನಯಿಸುತ್ತ) ದುರ್ಯೋಧನನಾದ ನನಗೂ ದುರ್ನಿಮಿತ್ತಗಳು ಮನಸ್ಸನ್ನು ಕೆಡಿಸುತ್ತವೆಯೋ? ಇವುಗಳು ಹೆದರಿದವನನ್ನು ಹೆದರಿಸುತ್ತವೆಯೇ ಹೊರತು, ದುರ್ಯೋಧನನನ್ನೇನೂ ಮಾಡುವುದಿಲ್ಲವು. ಗ್ರಹಗಳ ಗತಿಗಳೂ, ಸ್ವಪ್ನವೂ, ದುರ್ನಿಮಿತ್ತಗಳೂ, ಉಪಶ್ರುತಿಗಳೂ, ಒಂದೊಂದು ವೇಳೆ ಫಲಿಸುತ್ತವೆ. ಆದ್ದರಿಂದ ತಿಳಿದವರು ಇವುಗಳಿಗೆ ಹೆದರುವುದಿಲ್ಲವೆಂದು ಬೃಹಸ್ಪತಿಗಳು ಹೇಳುವರು. ಆದ್ದರಿಂದ ಸ್ತ್ರೀ ಸ್ವಭಾವದಿಂದ ಉಂಟಾಗಿರುವ ಭಾನುಮತಿಯ ಸಂದೇಹವನ್ನು ಪರಿಹರಿಸುವೆನು.

ಭಾನುಮತಿ :—ಸಖಿಯೇ, ಸೂರ್ಯನು ಹೆಚ್ಚಾಗಿ ಉದಯಿಸಿ, ಕೆಂಪೆಲ್ಲವೂ ಹೋಗಿ, ಸೂರ್ಯನು ಪ್ರಸನ್ನನಾದ ಪ್ರಕಾಶವುಳ್ಳವನಾಗಿದ್ದಾನೆ.

ಸಖಿ :—ದೇವಿಯೇ, ಸೂರ್ಯನ ಕಿರಣಗಳು ಬಕ್ಕಿಗಳ ಸಂದುಗಳಿಂದ ಉದ್ಯಾನಭೂಮಿಯೆಲ್ಲವನ್ನೂ ಕುಂಕುಮವನ್ನು ಚೆಲ್ಲಿದಂತೆ ಮಾಡಿವೆ. ರಕ್ತಚಂದನದಿಂದಲೂ, ಹೂಗಳಿಂದಲೂ ಕೂಡಿದ ಅರ್ಘ್ಯವನ್ನು ಕೊಡುವುದಕ್ಕೆ ಇದು ಸಮಯವಾಗಿರುವುದು.

ಭಾನುಮತಿ :—ತರಳಿಕೆ, ಅರ್ಘ್ಯಪಾತ್ರವನ್ನು ತೆಗೆದುಕೊಂಡು ಬಾ. ಸೂರ್ಯಪೂಜೆಯನ್ನು ಮಾಡುವೆನು.

ಚೇಟಿ :—ಅಪ್ಪಣೆ. (ಎಂದು ಹೋಗಿ ಅರ್ಘ್ಯಪಾತ್ರವನ್ನು ತಂದು ಮುಂದೆ ಇಡುವಳು.)

ದುರ್ಯೋಧನ :—ಪ್ರಿಯಳ ಸಮೀಪಕ್ಕೆ ಹೋಗುವುದಕ್ಕೆ ಈ ಸಮಯವೇ ಸರಿಯಾಗಿರುವುದು. (ಎಂದು ಸಮೀಪಕ್ಕೆ ಹೋಗುವನು.)

ಸಖಿ :—(ನೋಡಿ ತನ್ನಲ್ಲಿ ತಾನು) ಓಹೋ! ಮಹಾರಾಜನು ಬಂದನು. ಅಯ್ಯೋ! ಇವಳ ನಿಯಮಕ್ಕೆ ಭಂಗ ಉಂಟಾಯಿತು.

ಭಾನುಮತಿ :—(ಸೂರ್ಯನಿಗೆ ಅಭಿಮುಖಳಾಗಿ) ಭಗವಂತನೇ, ಆಕಾಶವೆಂಬ ದೊಡ್ಡ ಸರೋವರಕ್ಕೆ ಕಮಲದಂತೆ ಪ್ರಕಾಶಿಸುತ್ತಲಿದ್ದೀಯೆ. ಪೂರ್ವದಿಕ್ಕೆಂಬ ರಮಣಿಯ ಮುಖಕ್ಕೆ ಕುಂಕುಮದ ಬೊಟ್ಟಾಗಿದ್ದೀಯೆ. ನೀನು ಸಕಲ ಲೋಕಕ್ಕೂ ರತ್ನದೀಪನಾಗಿರುವಿ. ಈ ಸ್ವಪ್ನದಿಂದ ಏನಾದರೂ ಕೆಟ್ಟದ್ದುಂಟಾಗುವುದಾದರೆ, ಅದು ನಿನ್ನ ಅನುಗ್ರಹದಿಂದ ಸಹೋದರರುಗಳೊಡಗೂಡಿದ ಆರ್ಯಪುತ್ರನಿಗೆ ಸಂಗ್ರಾಮದಲ್ಲಿ ಕುಶಲವನ್ನುಂಟುಮಾಡಲಿ (ಎಂದು ಅರ್ಘ್ಯವನ್ನು ಕೊಟ್ಟು, ತರಳಿಕೆ, ಉಳಿದ ದೇವತೆಗಳ ಪೂಜೆಗೆ ಹೂವುಗಳನ್ನು ಕೊಡು, ಎಂದು ಕೈ ನೀಡುವಳು) ದುರ್ಯೋಧನನು ಸನ್ನೆಯಿಂದ ಪರಿಜನರನ್ನು ಕಳುಹಿಸಿ, ತಾನೇ ಹೂವುಗಳನ್ನು ಅವಳ ಕೈಯಲ್ಲಿಡುತ್ತಾ, ಹಸ್ತಸ್ಪರ್ಶದ ಸುಖವನ್ನನುಭವಿಸಿ, ಹೂವುಗಳನ್ನು ಭೂಮಿಯಲ್ಲಿ ಬೀಳಿಸುವನು.

ಭಾನುಮತಿ :—(ಕೋಪದಿಂದ) [illegible] ಅದಕ್ಷೆ. (ಎಂದು ಹಿಂತಿರುಗಿ ರಾಜನನ್ನು ನೋಡಿ ಹೆದರಿಕೆಯಿಂದ ನಾಚಿಕೆಗೊಳ್ಳುವಳು.)

ದುರ್ಯೋಧನ :—ದೇವಿ, ಈ ಸೇವಕನು ಇಂಥಾ ಸೇವೆಯಲ್ಲಿ ಜಾಣನಲ್ಲ. ಅತಿ ಪ್ರಿಯಳೇ, ಸೇವಕನಾದ ನನ್ನಲ್ಲಿ ಧವಳವಾಗಿಯೂ, ದೀರ್ಘವಾಗಿಯೂ ಇರುವ ನಿನ್ನ ಕಡೆಗಣ್ಣಿನ ನೋಟವನ್ನು ತೋರು. ಗಾಬರಿಯೇಕೆ ? ಮಂದಹಾಸದಿಂದ ಮಧುರವಾಗಿ ನನ್ನೊಂದಿಗೆ ಮಾತನಾಡು. ನಿನ್ನನ್ನು ಸೇವಿಸುವುದಕ್ಕೋಸ್ಕರ ಈ ಅಂಜಲಿಯು ಸಿದ್ಧವಾಗಿರುವುದು.

ಭಾನುಮತಿ :—ನನಗೆ ಒಂದು ನಿಯಮದಲ್ಲಿ ಅಭಿಲಾಷೆ ಇರುವುದು. ಮಹಾರಾಜನೇ ಸಮ್ಮತಿಸಬೇಕು.

ದುರ್ಯೋಧನ :—ನಿನ್ನ ಸ್ವಪ್ನವೃತ್ತಾಂತವನ್ನು ವಿಸ್ತಾರವಾಗಿ ಕೇಳಿರುವೆನು. ಸುಕುಮಾರವಾದ ನಿನ್ನ ಶರೀರವನ್ನು ಕ್ಲೇಶಪಡಿಸುವುದು ಉಚಿತವಲ್ಲ.

ಭಾನುಮತಿ :—ಆರ್ಯಪುತ್ರನೇ, ಸಂದೇಹವು ನನ್ನನ್ನು ಬಹಳವಾಗಿ ಬಾಧಿಸುತ್ತಲಿದೆ. ಆದ್ದರಿಂದ ಅಪ್ಪಣೆಯನ್ನು ಕೊಡು.

ದುರ್ಯೋಧನ :—(ಸಂತೋಷದಿಂದ) ಸಾಕು ಈ ನಿನ್ನ ಸಂದೇಹವು. ಇದಕ್ಕೋಸ್ಕರ ನೀನು ಕ್ಲೇಶಪಡುವುದಾದರೆ, ದಿಕ್ಕುಗಳನ್ನೆಲ್ಲಾ ವ್ಯಾಪಿಸಿಕೊಂಡು ಭೂಮಿಯನ್ನು ನಡುಗಿಸುತ್ತಲಿರುವ ಅಕ್ಷೋಹಿಣಿಗಳಿಗೇನು ಫಲ? ದ್ರೋಣ

ಸಿಂದೇನು ಪ್ರಯೋಜನ? ಕರ್ಣನ ಬಾಣಗಳಿಂದ ತಾನೆ ಏನು ಪ್ರಯೋಜನ? ಎಲೈ ಭೀರುವೇ, ನೂರು ಜನ ಸಹೋದರರೊಡನೆ ಕೂಡಿಕೊಂಡಿರುವ ನನ್ನ ಬಾಹುವನ್ನು ಆಶ್ರಯಿಸಿಕೊಂಡಿರುವ ನೀನು ದುರ್ಯೋಧನಕೇಸರಿಯ ಮಹಿಷಿಯಾಗಿದ್ದು ಹೆದರಬೇಕೇ?

ಭಾನುಮತಿ :—ಆರ್ಯಪುತ್ರನೇ, ನೀವು ಸನ್ನಿಹಿತರಾಗಿರುವಾಗ ನನಗೆ ಭಯಕ್ಕೆ ಕಾರಣವೇನಿರುವುದು ? ಆದರೆ ಆರ್ಯಪುತ್ರನ ಮನೋರಥವು ಪೂರ್ಣವಾಗಬೇಕೆಂದು ಆಶಿಸಡುವೆನು.

ದುರ್ಯೋಧನ :—ಪ್ರಿಯಳೇ, ಪ್ರೀತಿಪಾತ್ರಳಾದ ನಿನ್ನೊಂದಿಗೆ ಸಖೀಜನರಿಂದ ಕೂಡಿ ಸ್ವೇಚ್ಛೆಯಾಗಿ ವಿಹರಿಸುವುದೇ ನನ್ನ ಮನೋರಥವು. ನೋಡು, ಪ್ರೇಮದಿಂದ ಸಿಕ್ತವಾದ ಕಣ್ಣಿನಿಂದ ಕೂಡಿ ಕಮಲದ ಕಾಂತಿಯನ್ನು ಧಿಕ್ಕರಿಸುತ್ತಾ, ಮಂದಹಾಸದಿಂದ ಕೂಡಿರುವ ನಿನ್ನ ಮುಖಚಂದ್ರವನ್ನೂ ಮತ್ತು ಸಿಪುಮುಧಾರಣೆಯಿಂದ ಲಾಕ್ಷಾರಸದ ಗುರುತಿಲ್ಲದೆ, ಸ್ವಭಾವ ಮಧುರವಾದ ನಿನ್ನ ಅಧರವನ್ನೂ ಪಾನಮಾಡುವ ಆಶೆಯೊಂದು ಹೊರತು ದುರ್ಯೋಧನನಿಗೆ ಇನ್ನು ಯಾವುದು ತಾನೆ ದುರ್ಲಭವು ?

(ತೆರೆಯಲ್ಲಿ ಕಲಕಲಧ್ವನಿಯಾಗುವುದು, ಎಲ್ಲರೂ ಕೇಳುವರು.)

ಭಾನುಮತಿ :—(ರಾಜನನ್ನು ಘಟ್ಟಿಯಾಗಿ ಹಿಡಿದುಕೊಂಡು) ಆರ್ಯಪುತ್ರನೇ ಕಾಪಾಡು, ಕಾಪಾಡು.

ದುರ್ಯೋಧನ :—(ಸುತ್ತಲೂ ನೋಡಿ) ಪ್ರಿಯಳೇ, ಏಕೆ ಗಾಬರಿಪಡುವಿ. ಸುಂಟರಗಾಳಿಯು ಬೀಸುತ್ತಿದೆ. ಹುಲ್ಲುಕಡ್ಡಿಗಳೆಲ್ಲವನ್ನೂ ಸೇರಿಸಿಕೊಂಡು, ಧೂಳುಗಳನ್ನು ದುಂಡಾಕಾರವಾಗಿ ಆಕಾಶದ ವರೆಗೂ ತೆಗೆದುಕೊಂಡು ಹೋಗುತ್ತಾ, ಮರಗಳ ಕೊಂಬೆಗಳನ್ನು ಒಂದಕ್ಕೊಂದು ಉಜ್ಜುವಂತೆ ಮಾಡುತ್ತಾ ಮೇಘಧ್ವನಿಯಂತೆ ಗಂಭೀರವಾಗಿ ಧ್ವನಿಮಾಡುತ್ತಿದೆ. ಇದಕ್ಕೇಕೆ ಹೆದರುವಿ?

ಸಖಿ :—ಈ ಧೂಳು ಕಣ್ಣುಗಳಿಗೆಲ್ಲವೂ ಬೀಳುವ ಕಾರಣ, ಇಲ್ಲಿ ಬಹಳ ಕ್ಲೇಶಪಡಿಸುತ್ತಲಿದೆ. ಆದ್ದರಿಂದ ಮಂದಾರ ಪರ್ವತದ ಪ್ರಾಸಾದಕ್ಕೆ ದಯಮಾಡಬೇಕು.

ದುರ್ಯೋಧನ :—(ಬಹಳ ಸಂತೋಷದಿಂದ) ಈ ಸುಂಟರ ಗಾಳಿಯು ದೇವಿಯ ನಿಯಮವನ್ನು ಬಿಡಿಸಿ, ನನ್ನ ಮನೋರಥವನ್ನು ನಡೆಸಿಕೊಡುವ ಕಾರಣ ನನಗೆ ಉಪಕಾರಿಯೇ ಆಗಿರುವುದು. ಈ ವಿಷಯದಲ್ಲಿ ಇವಳು ಹುಬ್ಬು ಗಂಟಿಕ್ಕಲಿಲ್ಲ, ಕಣ್ಣಿನಲ್ಲಿ ನೀರು ತುಂಬಿಕೊಳ್ಳಲಿಲ್ಲ, ಆಣೆ-ಭಾಷೆಗಳನ್ನಿಟ್ಟುಕೊಂಡು ನನ್ನನ್ನು ತಡೆಯಲಿಲ್ಲ, ಹೀಗೆ ಅನಾಯಾಸವಾಗಿ ಇವಳ ನಿಯಮವನ್ನು ಪರಿಹರಿಸಿದ ಈ ಸುಂಟರಗಾಳಿಯು ನನಗೆ ಮಿತ್ರನೇ ಅಲ್ಲವೆ ? ಈಗ ನನ್ನ ಮನೋರಥದಂತೆ ವಿಹಾರದಲ್ಲಿ ಸ್ವಚ್ಛಂದವಾಗಿರಬಹುದು. ಭೀರುವೇ, ಮಂದಾರ ಪರ್ವತದ ಪ್ರಾಸಾದಕ್ಕೆ ಹೋಗೋಣ ಮೆಲ್ಲಮೆಲ್ಲಗೆ ಹೆಜ್ಜೆಗಳನ್ನಿಡು. ನಡುಗುವ ಗತಿಯನ್ನು ಬಿಡು. ನನ್ನನ್ನು ಆಶ್ರಯಿಸಿಕೊಂಡು ಬಾ. (ಪ್ರಾಸಾದಕ್ಕೆ ಪ್ರವೇಶಿಸಿ) ಇಲ್ಲಿ ಗಾಳಿಯ ಸಂಚಾರವಿಲ್ಲ. ಧಾರಾಳವಾಗಿ ಕಣ್ಣನ್ನು ಬಿಡು.

ಭಾನುಮತಿ:—(ಸಂತೋಷದಿಂದ) ಉತ್ಪಾತದ ಗಾಳಿಯು ಈಗ ನನ್ನನ್ನು ಬಾಧಿಸುವುದಿಲ್ಲ.

ಸಖೀ:—ಮಹಾರಾಜನೇ, ವೇಗವಾಗಿ ಮೇಲಕ್ಕೆ ಹತ್ತಿಬಂದದ್ದರಿಂದ ಪ್ರಿಯಸಖಿಯ ತೊಡೆಗಳು ಆಯಾಸಗೊಂಡಿವೆ. ಆಸನವೇದಿಕೆಯನ್ನು ಅಲಂಕರಿಸಬಹುದಲ್ಲವೆ?

ದುರ್ಯೋಧನ:—(ದೇವಿಯನ್ನು ನೋಡಿ) ಈ ಗಾಳಿಯು ಸ್ವಲ್ಪವೇ ಅಪಕಾರ ಮಾಡಿತು. ಧೂಳು ಅಲ್ಪವಾಗಿದ್ದಾಗ್ಯೂ, ಕಣ್ಣುಗಳು ವಿಸ್ತಾರವಾದದ್ದರಿಂದ ಬಾಧೆಯನ್ನುಂಟುಮಾಡುತ್ತಿದೆ. ಅಲ್ಪವಾದ ನಡುಕವೂ ಕೂಡ ಎದೆಯಲ್ಲಿ ಹಾರವನ್ನು ಎತ್ತಿಹಾಕುತ್ತಿರುವುದು. ನಿಧಾನವಾಗಿ ನಡೆದಾಗ್ಯೂ, ಇವಳ ತೊಡೆಯಲ್ಲಿ ನಡುಕವು ಹೆಚ್ಚುತ್ತಲಿದೆ. ಈ ಗಾಳಿಯು ಕೈಯನ್ನು ಹಿಡಿದುಕೊಳ್ಳುವಂತೆ ಮಾಡುತ್ತಿದೆ. (ಎಲ್ಲರೂ ಕುಳಿತುಕೊಳ್ಳುವರು.)

ದುರ್ಯೋಧನ:—ದೇವಿಯು ಆಸ್ತರಣವಿಲ್ಲದೆ ಕಠಿನವಾದ ಕಲ್ಲಿನ ಮೇಲೆ ಕುಳಿತುಕೊಳ್ಳುವುದು ಉಚಿತವಲ್ಲ. ದೇವಿಯೇ, ನೀನು ಕುಳಿತುಕೊಳ್ಳುವುದಕ್ಕೆ ಅನುಕೂಲವಾಗಿರುವ, ಇಗೋ ನೋಡು, ನನ್ನ ತೊಡೆಯು.

(ಸಂಭ್ರಾಂತನಾದ ಕಂಚುಕಿಯು ಪ್ರವೇಶಿಸಿ)

ಕಂಚುಕಿ:—ಮುರಿಯಿತು! ಮುರಿಯಿತು! (ಎಲ್ಲರೂ ಭಯದಿಂದ ನೋಡುವರು)

ದುರ್ಯೋಧನ:—ಏನದು?

ಕಂಚುಕಿ:—ಸ್ವಾಮಿ, ಭೀಮ—

ದುರ್ಯೋಧನ:—ಏನು ಬೊಗಳುವಿ?

ಭಾನುಮತಿ:—ಆರ್ಯನೇ, ಏನು ಕೆಟ್ಟದ್ದನ್ನು ಹೇಳುವಿ?

ಕಂಚುಕಿ—(ಭಯದಿಂದ) ದೇವಿಯೇ ಹೇಳುತ್ತೇನಲ್ಲಾ. ಎಲ್ಲವೂ ಮುರಿಯಿತು. ಭೀಮ—

ದುರ್ಯೋಧನ:—ಛೀ, ಪ್ರಲಾಪಿಯೇ, ಹಾಳು ವೃದ್ಧನೆ, ಏನು ನಿನ್ನ ಮೌಢ್ಯ?

ಕಂಚುಕಿ:—ಮೌಢ್ಯವೇನೂ ಇಲ್ಲ. ಇದು ನಿಜ. ಸರ್ವವೂ ಮುರಿಯಿತು.—ಭೀಮಮಾರುತದಿಂದ ನಿನ್ನ ಧ್ವಜವು. ಮುರಿದು ಗಂಟೆಗಳ ಸದ್ದಿನೊಂದಿಗೆ ಭೂಮಿಯಲ್ಲಿ ಬಿತ್ತು.

ದುರ್ಯೋಧನ:—ಗಾಳಿಯ ವೇಗಕ್ಕೆ ಪ್ರಪಂಚವೇ ನಡುಗುತ್ತಿರುವಾಗ, ರಥದ ಧ್ವಜವು ಮುರಿದ ಮಾತ್ರಕ್ಕೆ ಮುರಿಯಿತು, ಮುರಿಯಿತು ಎಂದು ಸುಮ್ಮನೆ ಕೂಗುವಿ.

ಕಂಚುಕಿ:—ಏನೂ ಇಲ್ಲ. ಈ ದುರ್ನಿಮಿತ್ತದ ಶಾಂತಿಗೆ ಏನಾದರೂ ಮಾಡಬೇಕೆಂದು ಸ್ವಾಮಿಭಕ್ತಿಯು ನನ್ನನ್ನು ಈ ರೀತಿ ವಿಜ್ಞಾಪನೆ ಮಾಡುವಂತೆ ಮಾಡಿತು.

ಭಾನುಮತಿ:—ಆರ್ಯಪುತ್ರನೇ, ಈ ದುರ್ನಿಮಿತ್ತವನ್ನ ಪ್ರಸನ್ನರಾದ ಬ್ರಾಹ್ಮಣರುಗಳು ಸ್ವಸ್ತಿವಾಚನಗಳಿಂದ ಪರಿಹರಿಸಿಕೊಳ್ಳಬೇಕು.

ದುರ್ಯೋಧನ:—(ಅಲಕ್ಷ್ಯದಿಂದ) ಹೋಗು, ಪುರೋಹಿತನಾದ ಸುಮಿತ್ರನಿಗೆ ತಿಳುಹಿಸು.

(ಪ್ರತೀಹಾರಿಯು ಪ್ರವೇಶಿಸುವನು.)

ಪ್ರತೀಹಾರಿ:—ಮಹಾರಾಜನಿಗೆ ಜಯವಾಗಲಿ. ಮಹಾರಾಜನೇ, ಅಳಿಯನಾದ ಸೈಂಧವನ ತಾಯಿಯು ದುಶ್ಶಳೆಯೊಂದಿಗೆ ಬಾಗಿಲಲ್ಲಿ ನಿಂತಿರುವಳು.

ದುರ್ಯೋಧನ:—(ತನ್ನಲ್ಲಿ ತಾನು) ಜಯದ್ರಥನ ತಾಯಿಯೂ, ದುಶ್ಶಳೆಯೂ ಸಹ ಬಂದಿರುವರೇ! ಅಭಿಮನ್ಯು ವಧದಿಂದ ಕುಪಿತರಾದ ಪಾಂಡವರು ಏನೋ ಕೆಡಕನ್ನು ನಡೆಸಿರಬೇಕು, ಅವರನ್ನು ಒಳಕ್ಕೆ ಕಳುಹಿಸು.

ಪ್ರತೀಹಾರಿ:—ಅಪ್ಪಣೆ. (ಎಂದು ಹೊರಟುಹೋಗುವನು.)

(ಜಯದ್ರಥನ ತಾಯಿಯೂ, ದುಶ್ಶಳೆಯೂ ಪ್ರವೇಶಿಸಿ ಕಣ್ಣೀರು ಬಿಡುತ್ತಾ ದುರ್ಯೋಧನನ ಕಾಲಿನ ಮೇಲೆ ಬೀಳುವರು.)

ಜಯದ್ರಥನ ತಾಯಿ:—ಕುರುನಾಥನೇ, ಕಾಪಾಡು! ಕಾಪಾಡು! (ದುಶ್ಶಳೆಯು ಅಳುವಳು.)

ದುರ್ಯೋಧನ:—(ಗಾಬರಿಯಿಂದೆದ್ದು) ಮಾತೆಯೇ, ಸ್ಥೈರಿಸು! ಸ್ಥೈರಿಸು! ಕಷ್ಟವೇನಾಗಿರುವುದು? ಯುದ್ಧಾಂಗಣದಲ್ಲಿ ಅಪ್ರತಿಹತನಾದ ಜಯದ್ರಥನಿಗೆ ಕ್ಷೇಮವಷ್ಟೆ?

ಮಾತೆ:—ಅವನಗೆಲ್ಲಿ ಕ್ಷೇಮ?

ದುರ್ಯೋಧನ:—ಹಾಗೆಂದರೇನು?

ಮಾತೆ:—(ದುಃಖದಿಂದ) ಈಗ ಪುತ್ರನ ವಧದಿಂದ ಕುಪಿತನಾದ ಅರ್ಜುನನು ಸೂರ್ಯಾಸ್ತಮಯದ ಒಳಗಾಗಿಯೇ ಅವನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿರುವನು.

ದುರ್ಯೋಧನ:—(ನಗುತ್ತಾ) ಮಾತೆಗೂ, ದುಶ್ಶಳೆಗೂ ಇದೀಗ ಕಣ್ಣೀರಿಗೆ ಕಾರಣ. ಪುತ್ರಶೋಕದಿಂದ ಹುಚ್ಚು ಹಿಡಿದು ಹರಟಿದ ಅರ್ಜುನನ ಪ್ರಲಾಪದಿಂದ ಈ ಅವಸ್ಥೆ. ಹೆಂಗಸರ ಮೌಢ್ಯಕ್ಕೇನು ಹೇಳೋಣ? ಮಾತೆ ದುಃಖಪಡಬೇಡ. ದುಶ್ಶಳೆ ವತ್ಸೆ, ಏಕೆ ಕಣ್ಣೀರು ಹಾಕುವಿ? ದುರ್ಯೋಧನನ ಬಾಹುವಿನಿಂದ ರಕ್ಷಿತನಾದ ಮಹಾರಥ ಜಯದ್ರಥನಿಗೆ ವಿಪತ್ತನ್ನುಂಟುಮಾಡುವುದಕ್ಕೆ ಅರ್ಜುನನಿಗೆ ಶಕ್ತಿ ಎಲ್ಲಿರುವುದು?

ಮಾತೆ:—ಅಪ್ಪಾ! ಪುತ್ರಾದಿಗಳ ವಧದಿಂದ ಹೆಚ್ಚಿದ ಕೋಪವುಳ್ಳ ವೀರರು ತಮ್ಮ ಶರೀರವನ್ನೂ ಲಕ್ಷ್ಯಮಾಡದೆ ಪರಾಕ್ರಮವನ್ನು ತೋರುವರು.

ದುರ್ಯೋಧನ:—(ಅಪಹಾಸ್ಯ ಮಾಡುತ್ತಾ) ಹೌದು, ಪಾಂಡವರ ಕೋಪ ಸರ್ವಪ್ರಸಿದ್ಧವಾಗಿದೆ. ನೋಡು, ನನ್ನ ಅಪ್ಪಣೆಯಿಂದ ದುಶ್ಶಾಸನನು ದ್ರೌಪ

ದಿವ್ಯ ಕೌಶಾಂಬರಗಳನ್ನು ಸಮಸ್ತ ರಾಜರುಗಳ ಎದುರಿಗೆ ತನ್ನ ಕೈಯಿಂದ ಎಳೆದನು. ಆ ಸಮಯದಲ್ಲಿ ಮಾತೆಯೇ ? ಗಾಂಡೀವವನ್ನು ಹಿಡಿದಿದ್ದ ಅರ್ಜುನನು ಇರಲಿಲ್ಲವೋ? ಒಳ್ಳೇ ಪ್ರಾಯಸಮರ್ಥನಾಗಿ, ಕ್ಷತ್ರಿಯವಂಶದಲ್ಲಿ ಹುಟ್ಟಿ, ಸಮರ್ಥನಾದ ಪುರುಷನಿಗೆ ಇದು ಕೋಪಕ್ಕೆ ಕಾರಣವಲ್ಲವೊ?

ಮಾತೆ:—ಅಪ್ಪಾ, ತನ್ನ ಪ್ರತಿಜ್ಞೆ ನೆರವೇರದಿದ್ದರೆ ಆತ್ಮವಧವನ್ನೂ ಪ್ರತಿಜ್ಞೆ ಮಾಡಿರುವನು.

ದುರ್ಯೋಧನ:—ಹಾಗಾದರೆ ಸಂತೋಷಪಡುವುದನ್ನು ಬಿಟ್ಟು ದುಃಖಪಡಬೇಕೇ? ಅನುಜರೊಂದಿಗೆ ಧರ್ಮರಾಯನು ನಷ್ಟನಾದನೆಂದೇ ಹೇಳಬೇಕು. ಮತ್ತು ಮಾತೆಯೇ, ನಿನ್ನ ಮಗನನ್ನು ನೂರು ಮಂದಿ ಕೌರವರುಗಳು ಸುತ್ತಿ ಮಹಿಮೆಯನ್ನು ಹೆಚ್ಚಿಸುತ್ತಲಿದಾರೆ. ಕೃಪ, ಕರ್ಣ, ದ್ರೋಣ, ಅಶ್ವತ್ಥಾಮ ಮೊದಲಾದ ಮಹಾರಥರು ಬೆಂಬಲರಾಗಿ ನಿನ್ನ ಮಗನ ಪ್ರತಾಪವನ್ನು ಇಮ್ಮಡಿಯಾಗಿ ಮಾಡುತ್ತಲಿದಾರೆ. ಹೀಗಿರುವಲ್ಲಿ ಅರ್ಜುನನಾಗಲೀ, ಇತರನಾಗಲೀ ನಿನ್ನ ಮಗನ ಹೆಸರನ್ನೆತ್ತುವುದಕ್ಕೆ ತಾನೆ ಹೇಗೆ ಸಮರ್ಥನಾದಾನು! ನಿನ್ನ ಮಗನ ಪರಾಕ್ರಮವನ್ನು ನೀನು ತಿಳಿಯೆ! ನಿನ್ನ ಮಗನ ಎದುರಿಗೆ ಧರ್ಮರಾಜನಾಗಲಿ, ನಕುಲ-ಸಹದೇವರಾಗಲೀ ಅವರ ಕಥೆಯೇ ಇರುವುದಿಲ್ಲ. ಅರ್ಜುನ, ಭೀಮ ಇವರೊಳಗೆ ಒಬ್ಬನೂ ಕೂಡ ಮಂಡಲಾಕಾರವಾಗಿ ಮಾಡಿದ ಬಿಲ್ಲನ್ನು ಹಿಡಿದು ನಿಂತಿರುವ ಸಿಂಧುರಾಜನನ್ನು ಎದುರಿಸುವುದಕ್ಕೆ ಸಮರ್ಥನಾಗುವುದಿಲ್ಲ.

ಭಾನುಮತಿ:—ಆರ್ಯಪುತ್ರನೇ, ನಿಜ. ಆದರೂ ದೊಡ್ಡ ಪ್ರತಿಜ್ಞೆಯನ್ನು ಮಾಡಿರುವುದರಿಂದ ಸ್ವಲ್ಪ ಭಯಪಡಬೇಕಾಗಿದೆ.

ಮಾತೆ:—ಕಾಲೋಚಿತವಾಗಿ ಸರಿಯಾಗಿ ಹೇಳಿದೆ.

ದುರ್ಯೋಧನ:—ಆಹಾ! ದುರ್ಯೋಧನನಾದ ನನಗೂ ಪಾಂಡವರು ಭಯಕ್ಕೆ ಸ್ಥಾನವೋ? ಶತ್ರುಗಳನ್ನು ಲಕ್ಷ್ಯಮಾಡದೆಯೂ, ಲೋಹಕವಚವನ್ನು ಧರಿಸಿಯೂ, ಶ್ವೇತಛತ್ರಗಳ ಸಾಲುಗಳು ಒಂದಕ್ಕೊಂದು ಸೇರಿಕೊಂಡಿರುವುದರಿಂದ ಬಿಳಿದಾವರೆಗಳ ವನಗಳೆಂಬ ಭ್ರಾಂತಿಯನ್ನುಂಟುಮಾಡುತ್ತಲೂ ಇರುವ ನನ್ನ ಸಹೋದರರುಗಳು ಒಬ್ಬೊಬ್ಬರ ಸಮೀಪದಲ್ಲಿ

ಕೋಟಿ ಕೋಟಿ ಸೈನ್ಯಗಳನ್ನು ಸೇರಿಸಿಕೊಂಡು ಯುದ್ಧದಲ್ಲಿ ನಿಲ್ಲುವರು. ಮತ್ತು ಭಾನುಮತಿ ? ಪಾಂಡವರ ಪ್ರಭಾವವನ್ನರಿತಿರುವ ನೀನೂ ಕೂಡ ಹೀಗೆ ಹೆದರುವಿಯಾ? ನೋಡು, ದುಶ್ಶಾಸನನ ಎದೆಯ ರಕ್ತವನ್ನು ಪಾನ ಮಾಡುವುದಾಗಿಯೂ, ದುರ್ಯೋಧನನ ತೊಡೆಯನ್ನು ಗದೆಯಿಂದ ಮುರಿ ಯುವುದಾಗಿಯೂ ಮಾಡಿರುವ ಪ್ರತಿಜ್ಞೆಯು ಎಷ್ಟರ ಫಲವುಳ್ಳದ್ದೋ! ಈ ಜಯದ್ರಥನ ವಧದಲ್ಲಿ ಮಾಡಿರುವ ಪ್ರತಿಜ್ಞೆಯೂ ಅಷ್ಟೇ ಫಲವುಳ್ಳದ್ದು. ಯಾರಲ್ಲಿ! ನನ್ನ ಜಯದ್ರಥವನ್ನು ಸಿದ್ಧಪಡಿಸು. ಆ ಅರ್ಜುನನ ಪ್ರತಿ ಜ್ಞೆಯನ್ನು ಜಯದ್ರಥನನ್ನು ಕಾಪಾಡುವುದರಿಂದಲೇ ಕೆಡಿಸಿ, ಆ ಅವಮಾನ ದಿಂದಲೇ ಅರ್ಜುನನು ಆಯುಧದ ಪ್ರಹಾರವಿಲ್ಲದಂತೆಯೇ ಸಾಯುವಂತೆ ಮಾಡುವೆನು.

ಕಂಚುಕಿ:—(ಪ್ರವೇಶಿಸಿ) ಚಿನ್ನದ ಗಂಟೆಗಳನ್ನು ಕಟ್ಟಿ, ಚಾಮರಗಳಿಂದ ಪ್ರಕಾಶಿ ಸುತ್ತಿರುವ ನಿನ್ನ ರಥವು ಹೂಡಿದ ಕುದುರೆಗಳುಳ್ಳದ್ದಾಗಿ ಸಿದ್ಧವಾಗಿರು ವುದು.

ದುರ್ಯೋಧನ:—ನೀವು ಒಳಗೆ ಹೋಗಿ (ಎಂದು ಹೊರಟು ಹೋಗುವನು.)

ದ್ವಿತೀಯಾಂಕ ಸಮಾಪ್ತಂ.

---

# ಮೂರನೆಯ ಅಂಕ

---

(ವಿಕೃತವೇಷಿಯಾದ ರಾಕ್ಷಸಿಯು ಪ್ರವೇಶಿಸುವಳು.)

ರಾಕ್ಷಸಿ:—(ವಿಕಾರವಾಗಿ ನಕ್ಕು, ಬಹಳ ಸಂತೋಷದಿಂದ) ಹತರಾದ ಮನು ಷ್ಯರುಗಳ ಮಾಂಸಗಳಿಂದ ತುಂಬಿದ ಸಾವಿರ ಕುಂಭಗಳನ್ನು ಕೂಡಿಟ್ಟಿರು ವೆನು. ಸರ್ವದಾ ರಕ್ತವನ್ನು ಕುಡಿಯುತ್ತೇನೆ. ಹೀಗೆಯೇ ಯುದ್ಧವು ನೂರು ವರ್ಷಗಳವರೆಗೂ ನಡೆಯಲಿ. ಸಿಂಧುರಾಜನ ಸಂಹಾರದ ದಿವಸ

ದಂತೆಯೇ ಅರ್ಜುನನು ಪ್ರತಿದಿವಸವೂ ಯುದ್ಧಮಾಡುತ್ತಿದ್ದರೆ ನನ್ನ ಮನೆಯ ಅಂಗಳವೆಲ್ಲವೂ ಮಾಂಸಗಳಿಂದಲೂ, ರಕ್ತಗಳಿಂದಲೂ ತುಂಬಿ ಹೋಗುವುದು. (ದಿಕ್ಕುಗಳನ್ನು ನೋಡಿ) ನಮ್ಮ ರುಧಿರಪ್ರಿಯನು ಎಲ್ಲಿರುವನೋ ಕೂಗುವೆನು. "ರುಧಿರಪ್ರಿಯನೇ, ರುಧಿರಪ್ರಿಯನೇ, ಇತ್ತ ಬಾ."

ರಾಕ್ಷಸ:—(ಪ್ರವೇಶಿಸಿ) ಶ್ರಮಪಡುತ್ತ ಹೊಸದಾಗಿ ಹತರಾದವರ ಬಿಸಿಬಿಸಿಯಾದ ರಕ್ತವೂ, ಮಾಂಸವೂ ಸಿಕ್ಕಿದರೆ, ನನ್ನ ಈ ಶ್ರಮವೆಲ್ಲವೂ ಒಂದು ಕ್ಷಣದಲ್ಲಿ ನಾಶವಾಗುವುದು. ಯಾರು ನನ್ನನ್ನು ಕೂಗುವರು. ಓಹೋ! ವಸಾಗಂಧೆಯು. ವಸಾಗಂಧೆ, ಏಕೆ ನನ್ನನ್ನು ಕೂಗಿದೆ!

ರಾಕ್ಷಸಿ:—ರುಧಿರಪ್ರಿಯನೇ, ನಿನಗೋಸ್ಕರ ಈಗ ತಾನೆ ಹತನಾದ ರಾಜರ್ಷಿಯ ಶರೀರಾವಯವಗಳ ವಸೆಯ ಜಿಡ್ಡಿನಿಂದ ಕೂಡಿದ ಬಿಸಿಬಿಸಿಯಾದ ರಕ್ತವನ್ನೂ, ಮಾಂಸವನ್ನೂ ನಾನು ತುಂಬಿಟ್ಟಿದ್ದೇನೆ. ಈ ರಕ್ತವನ್ನು ಕುಡಿ.

ರಾಕ್ಷಸ:—ಬಹಳ ಒಳ್ಳೇ ಕೆಲಸ ಮಾಡಿದೆ. ನನಗೆ ಬಾಯಾರಿಕೆ ಬಹಳವಾಗಿತ್ತು.

ರಾಕ್ಷಸಿ:—ಛೀ! ಛೀ! ರುಧಿರಪ್ರಿಯನೇ, ಆನೆಗಳೂ, ಕುದುರೆಗಳೂ, ಮನುಷ್ಯರೂ ಹತರಾಗಿ, ಅವರ ರಕ್ತಮಾಂಸಗಳಿಂದ ತುಂಬಿ, ಸಂಚರಿಸುವುದಕ್ಕೆ ಕಷ್ಟವಾಗಿರುವ ಈ ಯುದ್ಧರಂಗದಲ್ಲಿ ತಿರುಗುತ್ತಿದ್ದರೂ, ನಿನಗೆ ಬಾಯಾರಿಕೆ ಎನ್ನುವುದು ತುಂಬಾ ಆಶ್ಚರ್ಯವಾಗಿದೆ.

ರಾಕ್ಷಸ:—ವಸಾಗಂಧೆಯೇ, ಪುತ್ರಶೋಕದಿಂದ ಸಂತಪ್ತಹೃದಯಳಾದ ಹಿಡಿಂಬಾದೇವಿಯನ್ನು ನೋಡುವುದಕ್ಕೆ ಹೋಗಿದ್ದೆ.

ರಾಕ್ಷಸಿ:—ಹಿಡಿಂಬಾದೇವಿಗೆ ಘಟೋತ್ಕಚನ ಶೋಕವು ಇನ್ನೂ ಹೊಸದಾಗ ಇಲ್ಲವೆ!

ರಾಕ್ಷಸ:—ಅದರ ಶಾಂತಿಯೆಲ್ಲಿ? ಅಭಿಮನ್ಯುವಿನ ಶೋಕದಿಂದ ಸಮಾನದುಃಖಿತೆಯಾದ ಸುಭದ್ರಾದೇವಿಯೂ, ದ್ರೌಪದಿಯೂ ಅವಳನ್ನು ಸಮಾಧಾನ ಪಡಿಸುತ್ತಿರುವರು.

ರಾಕ್ಷಸಿ:—ಈ ಆನೆಯ ತಲೆಯಲ್ಲಿ ತುಂಬಿರುವ ಅಗ್ರಮಾಂಸದ ಉಪ್ಪಿನಕಾಯನ್ನು ತಿನ್ನು. ಈ ರಕ್ತವನ್ನು ಕುಡಿ.

ರಾಕ್ಷಸ:—(ಹಾಗೆ ಮಾಡಿ) ಎಲೈ ವಸಾಗಂಧೆಯೇ, ಈ ಅಗ್ರಮಾಂಸದ ಉಷ್ಣನಕಾಯನ್ನೂ, ರಕ್ತವನ್ನೂ ಸಹ ಎಷ್ಟು ಕೂಡಿಟ್ಟಿದ್ದೀಯೇ?

ರಾಕ್ಷಸಿ:—ಮೊದಲು ಕೂಡಿಟ್ಟಿರುವುದನ್ನು ನೀನು ತಿಳಿದಿರುವೆಯಷ್ಟೆ. ಹೊಸದಾಗಿ ಸಂಗ್ರಹಿಸಿರುವುದನ್ನು ಕೇಳು. ಭಗದತ್ತನ ರಕ್ತದಿಂದ ತುಂಬಿದ ಗಡಿಗೆಯೊಂದು, ಸಿಂಧುರಾಜನ ವಸೆಯಿಂದ ತುಂಬಿದ ಮುಂಕರಿಯೊಂದು, ದ್ರುಪದ, ವಿರಾಟ, ಭೂರಿಶ್ರವಸ್ಸು, ಸೋಮದತ್ತ ಮೊದಲಾದ ಮುಖ್ಯ ಮುಖ್ಯ ರಾಜರುಗಳ ರಕ್ತಮಾಂಸ ಇವುಗಳಿಂದ ತುಂಬಿದ ಅನೇಕ ಘಟಗಳೂ, ಇದಲ್ಲದೆ, ಇತರರಾದ ಪ್ರಾಕೃತಪುರುಷರುಗಳ ರಕ್ತಮಾಂಸಗಳಿಂದ ತುಂಬಿದ ಗಡಿಗೆಗಳೂ ಮನೆಯಲ್ಲಿವೆ!

ರಾಕ್ಷಸ:—(ಬಹು ಸಂತೋಷಿಸುತ್ತ) ಸುಗೃಹಿಣಿಯೇ, ಈ ನಿನ್ನ ಗೃಹಿಣೀತನದಿಂದಲೂ, ಹಿಡಿಂಬಾದೇವಿಯ ಸಂವಿಭಾಗದಿಂದಲೂ, ನನ್ನ ಬಡತನವೆಲ್ಲವೂ ನಾಶವಾಗಿ ಹೋಯಿತು.

ರಾಕ್ಷಸಿ:—ರುಧಿರಪ್ರಿಯನೇ, ಹಿಡಿಂಬಾದೇವಿಯು ಏನು ಹೇಳಿರುವಳು?

ರಾಕ್ಷಸ:—ಈ ದಿವಸದಲ್ಲಿ ಹಿಡಿಂಬಾದೇವಿಯು ನನ್ನನ್ನು ಮರ್ಯಾದೆಯಿಂದ ಕರೆದು "ಎಲೈ ರುಧಿರಪ್ರಿಯನೇ, ಇಂದು ಮೊದಲು ಆರ್ಯಪುತ್ರ ಭೀಮಸೇನನನ್ನು ಹಿಂಬಾಲಿಸಿ ಯುದ್ಧದಲ್ಲಿ ಸಂಚರಿಸುತ್ತಿರು." ಎಂದು ಅಜ್ಞಾಪಿಸಿರುವಳು. ಆದ್ದರಿಂದ ಭೀಮನನ್ನು ಹಿಂಬಾಲಿಸಿದ ನನಗೆ ಹತರಾದ ಮನುಷ್ಯರುಗಳ ರಕ್ತನದಿಗಳನ್ನೂ ನೋಡುವುದರಿಂದ ನನ್ನ ಬಾಯಾರಿಕೆಯೂ, ಹಸಿವೂ ಅಡಗಿ, ಸ್ವರ್ಗಸುಖವುಂಟಾಗುತ್ತದೆ. ನೀನು ಧಾರಾಳವಾಗಿ ರಕ್ತಮಾಂಸದ ಸಾವಿರಾರು ಕುಂಭಗಳನ್ನು ಸೇರಿಸು.

ರಾಕ್ಷಸಿ:—ಕುಮಾರ ಭೀಮಸೇನನ ಹಿಂದೆಯೇ ಏಕೆ ತಿರುಗಬೇಕು?

ರಾಕ್ಷಸ:—ಆ ಭೀಮಸೇನನು ದುಶ್ಶಾಸನನ ರಕ್ತವನ್ನು ಪಾನಮಾಡುವುದಕ್ಕೆ ಪ್ರತಿಜ್ಞೆ ಮಾಡಿರುವನು. ರಾಕ್ಷಸರಾದ ನಾವುಗಳು ಅವನಲ್ಲಿ ಅನುಪ್ರವೇಶಮಾಡಿ, ಆ ರಕ್ತವನ್ನು ಕುಡಿಯಬೇಕು.

ರಾಕ್ಷಸಿ:—ನನ್ನ ಪತಿಯಾದ ನಿನಗೆ ಹಿಡಿಂಬಾದೇವಿಯು ಸರಿಯಾದ ಸಂವಿಭಾಗವನ್ನು ಮಾಡಿರುವಳು.

(ತೆರೆಯಲ್ಲಿ ಕಲಕಲಧ್ವನಿಯಾಗುವುದು.)

ರಾಕ್ಷಸಿ:—(ಕೇಳಿ ಹೆದರಿಕೆಯಿಂದ) ರುಧಿರಪ್ರಿಯನೇ, ಏನು ಕಲಕಲಧ್ವನಿ?

ರಾಕ್ಷಸ:—ದೃಷ್ಟದ್ಯುಮ್ನನು ದ್ರೋಣನನ್ನು ಕೇಶಪಾಶಗಳಲ್ಲಿ ಹಿಡಿದುಕೊಂಡು ಖಡ್ಗದಿಂದ ಛೇದಿಸುತ್ತಿರುವನು.

ರಾಕ್ಷಸಿ:—(ಸಂತೋಷದಿಂದ) ಹಾಗಾದರೆ ನಾವೂ ಅಲ್ಲಿಗೆ ಹೋಗಿ ದ್ರೋಣನ ರಕ್ತವನ್ನು ಕುಡಿಯೋಣ.

ರಾಕ್ಷಸ:—(ಭಯದಿಂದ) ಅದು ಬ್ರಾಹ್ಮಣನ ರಕ್ತವಲ್ಲವೇ? ಗಂಟಲನ್ನು ಸುಡುತ್ತದೆ. ಆದುದರಿಂದ ಅದು ಏಕೆ?

(ಪುನಃ ತೆರೆಯಲ್ಲಿ ಕಲಕಲಧ್ವನಿಯಾಗುವುದು.)

ರಾಕ್ಷಸಿ:—ಇದು ಏನು ಪುನಃ ಕಲಕಲಧ್ವನಿ ಕೇಳುತ್ತದೆ?

ರಾಕ್ಷಸ:—(ತೆರೆಯಕಡೆ ನೋಡಿ) ವಸಾಂಗಧೆಯೇ, ಅಶ್ವತ್ಥಾಮನು ಕತ್ತಿಯನ್ನು ಹಿಡಿದುಕೊಂಡು ಬರುತ್ತಿರುವನು. ಇವನು ದೃಷ್ಟದ್ಯುಮ್ನನ ಮೇಲಿನ ಕೋಪದಿಂದ ನಮ್ಮನ್ನು ಎಲ್ಲಿಯಾದರೂ ಕೊಂದಾನು? ಆದುದರಿಂದ ಬಾ, ಹಿಡಿಂಬಾ ದೇವಿಯ ಅಪ್ಪಣೆಯಂತೆ ನಡೆಯೋಣ. (ಎಂದು ಹೊರಟುಹೋಗುವರು.)

ಕಲಕಲ ಧ್ವನಿಯನ್ನು ಕೇಳುತ್ತಾ ಖಡ್ಗಧಾರಿಯಾದ
ಅಶ್ವತ್ಥಾಮನು ಬರುವನು.

ಅಶ್ವತ್ಥಾಮ:—ಪ್ರಳಯಕಾಲದ ಗಾಳಿಗೆ ಸಿಕ್ಕಿದ ಪ್ರಚಂಡವಾದ ಪುಷ್ಕಲಾವರ್ತಕ ಮೇಘಗಳ ಗುಡಿಗಿನಂತೆ ಭೂವ್ಯಾಕಾಶಗಳನ್ನು ಮುಚ್ಚುವ, ಕೇಳುವುದಕ್ಕೆ ಭಯಂಕರವಾದ, ಸಮರ ಸಂಹಾರದ ಧ್ವನಿಯು ಅಪೂರ್ವವಾಗಿರುವುದು. (ಹಾಗೆಯೇ ಯೋಚಿಸಿ) ನಿಜವಾಗಿಯೂ, ಅರ್ಜುನನೋ, ಸಾತ್ಯಕಿಯೋ, ಅಥವಾ ಭೀಮಸೇನನೋ, ಯೌವ್ವನದ ಕೊಬ್ಬಿನಿಂದ ಮಿತಿಮೀರಿರಬೇಕು. ಅದಕ್ಕೆ ನಮ್ಮ ತಂದೆಯು ಕೋಪಿಸಿಕೊಂಡು, ಶಿಷ್ಯ ಪ್ರೀತಿಯನ್ನೂ ಬಿಟ್ಟು, ಅದಕ್ಕೆ ತಕ್ಕ ಸಾಹಸವನ್ನು ತೋರಿಸುತ್ತಿದ್ದಾನೆ. ದುರ್ಯೋಧನನಲ್ಲಿರುವ ಪಕ್ಷಪಾತಕ್ಕೂ, ಶಸ್ತ್ರವನ್ನು ಹಿಡಿದದ್ದಕ್ಕೂ, ಪರುಶುರಾಮನಿಂದ ಲಬ್ಧ

ವಾದ ಸರ್ವಾಯುಧಗಳಿಂದ ಹೆಚ್ಚಿದ ವೀರ್ಯಕ್ಕೂ, ಧನುರ್ಧಾರಿಗಳ ಆಧಿಪತ್ಯಕ್ಕೂ, ಅನುರೂಪವಾದ ಸಾಹಸವನ್ನು ನಮ್ಮ ತಂದೆಯು ತೋರಿಸುತ್ತಿರುವನು. ಯಾರಲ್ಲಿ? ರಥ, ರಥ. ರಥವನ್ನು ತಾನೇ ಏಕೆ ಕಾಯಬೇಕು? ಆಯುಧವು ಕೈಯಲ್ಲೇ ಇದೆ. ಕಾಳಸರ್ಪದಂತೆ ಕಪ್ಪಾಗಿ ಪ್ರಕಾಶಿಸುವ ಚಿನ್ನದ ಹಿಡಿಯಿಂದ ಕೂಡಿರುವ ಈ ಕತ್ತಿಯೊಡನೆಯೇ ಯುದ್ಧಭೂಮಿಗೆ ಹೋಗುವೆನು. (ಹೊರಟು ಎಡಗಣ್ಣು ಅದುರುವುದನ್ನು ತೋರಿಸುತ್ತಾ) ಇದೇನು! ತಂದೆಯ ಪರಾಕ್ರಮವನ್ನು ನೋಡಲು ಆಶೆಗೊಂಡು ಸಮರ ಮಹೋತ್ಸವದ ಸಂತೋಷದಿಂದ ತುಂಬಿರುವ ಅಶ್ವತ್ಥಾಮನಾದ ನನಗೂ ದುರ್ನಿಮಿತ್ತಗಳು ಯುದ್ಧಕ್ಕೆ ಹೋಗುವುದಕ್ಕೆ ತಡೆಯನ್ನುಂಟು ಮಾಡುತ್ತವೆಯೋ? (ಗರ್ವದೊಂದಿಗೆ ಹೊರಟು ಮುಂದೆ ನೋಡಿ) ಕ್ಷಾತ್ರಧರ್ಮವನ್ನು ಲಕ್ಷೀಕರಿಸದೆ ವೀರಪುರುಷರಿಗೆ ಯೋಗ್ಯವಾದ ಲಜ್ಜೆಯನ್ನು ದೂರ ಬಿಸುಟು, ಸ್ವಾಮಿಭಕ್ತಿಯನ್ನು ತೊರೆದು, ಕುಲ, ಬಲ ಇವುಗಳ ಗೌರವವನ್ನು ಲಕ್ಷ್ಯ ಮಾಡದೆ, ಸೈನ್ಯಗಳೆಲ್ಲವೂ ಯುದ್ಧದಿಂದ ಪಲಾಯನ ಮಾಡುತ್ತಲಿವೆ. (ಚೆನ್ನಾಗಿ ನೋಡಿ) ಕಷ್ಟ! ಕಷ್ಟ! ಮಹಾರಥರಾದ ಕರ್ಣನೇ ಮೊದಲಾದವರೂ ಕೂಡ ಪರಾಙ್ಮುಖರಾಗಿರುತ್ತಾರೆ. ನಮ್ಮ ತಂದೆಯು ಬಲದಿಂದ ಕಾಪಾಡಿದ ಈ ಸೈನ್ಯಕ್ಕೆ ಈ ಅವಸ್ಥೆ ಎಲ್ಲಿಂದುಂಟಾಯಿತು? ಇರಲಿ, ಎಲೈ ಮಹಾರಥಿಕರೇ, ಕೌರವ ಸೈನ್ಯ ಸಮುದ್ರಕ್ಕೆ ಪರ್ವತಗಳಂತೆ ಸ್ಥಿರವಾಗಿರುವ ನಿಮ್ಮಗಳಿಗೆ ಯುದ್ಧವನ್ನು ಬಿಟ್ಟು ಓಡುವ ಈ ಸಾಹಸವು ಸಾಕು! ಸಾಕು! ಯುದ್ಧವನ್ನು ಬಿಟ್ಟು ಹಿಂತಿರುಗುವುದರಿಂದ ಮರಣದ ಭಯವು ತಪ್ಪಿಹೋಗುವುದಾದರೆ, ಹಾಗೆ ಮಾಡಿದರೂ ಮಾಡಬಹುದು. ಹುಟ್ಟಿದ ಪ್ರಾಣಿಗೆ ಮರಣವು ಅವಶ್ಯಕವಾಗಿಯೂ ಆಗುವ ಪಕ್ಷದಲ್ಲಿ, ವ್ಯರ್ಥವಾಗಿ ನಿಮ್ಮ ಯಶಸ್ಸಿಗೆ ಕಳಂಕವನ್ನು ಏಕೆ ತಂದುಕೊಳ್ಳುವಿರಿ? ಇದೂ ಅಲ್ಲದೆ ಧನುರ್ಧಾರಿಗಳಲ್ಲಿ ಅಗ್ರೇಸರನಾಗಿಯೂ, ಅಸ್ತ್ರಜ್ವಾಲೆಗಳಿಂದ ಪ್ರಳಯದ ಸಮುದ್ರಕ್ಕೆ ಬಡಬಾಗ್ನಿಯಾಗಿಯೂ ಇರುವ ನನ್ನ ತಂದೆಯು ಸೇನಾನಾಯಕನಾಗಿರುವಾಗ ಎಲೈ ಕರ್ಣನೇ ನಿನಗೆ ಭಯವೇಕೆ? ಕೃಪಾಚಾರ್ಯನೇ ಯುದ್ಧವನ್ನು ಮಾಡು. ಕೃತ

ವರ್ಮನೇ ಸಂಶಯವನ್ನು ಬಿಡು. ನನ್ನ ತಂದೆಯು ಯುದ್ಧದ ಹೊರೆ
ಯನ್ನು ಹೊತ್ತಿರುವಾಗ ಭಯಕ್ಕೆ ಅವಕಾಶವೆಲ್ಲಿ?

(ತೆರೆಯಲ್ಲಿ) ಇನ್ನೂ ನಿನ್ನ ತಂದೆಯು ಎಲ್ಲಿರುವನು?

ಅಶ್ವತ್ಥಾಮ:—(ಕಿವಿಗೊಟ್ಟು ಕೇಳಿ) ಏನು ಹೇಳುವಿರಿ! "ಇನ್ನೂ ನಿನ್ನ ತಂದೆಯು ಎಲ್ಲಿ" ಎಂದೋ, ಆಹಾ! ಯುದ್ಧದಲ್ಲಿ ಹೆದರುವ ಹೇಡಿಗಳಿರಾ! ಹೀಗೆ ಹೇಳುವ ನಿಮ್ಮ ನಾಲಿಗೆಯು ಸಾವಿರನಾಲಾಗಿ ಸೀಳುವುದಿಲ್ಲವೇ? ದ್ವಾದಶಾದಿತ್ಯರು ಒಟ್ಟಿಗೆ ಸೇರಿ ಪ್ರಪಂಚವನ್ನೆಲ್ಲವನ್ನೂ ಸುಡುವುದಕ್ಕೆ ಹುಟ್ಟಲಿಲ್ಲ. ಸಪ್ತ ಮಾರುತಗಳೂ, ದಿಕ್ಕು ದಿಕ್ಕುಗಳಲ್ಲಿ ಒಟ್ಟಿಗೆ ಬೀಸಲಿಲ್ಲ. ಪುಷ್ಕಲಾವರ್ತಕಗಳೆಂಬ ಮೇಘಗಳು ಆಕಾಶದಲ್ಲಿ ಕವಿಯಲಿಲ್ಲ. ಪಾಪಿಗಳಾದ ನೀವೂ ನನ್ನ ತಂದೆಗೆ—ಶೌರ್ಯರಾಶಿಯಾದ ನನ್ನ ತಂದೆಗೆ—ಕೆಟ್ಟ ಮಾತನ್ನು ಹೇಳುವಿರಾ?

(ಭಯಭ್ರಾಂತನಾದ ಸಾರಥಿಯು ಪ್ರವೇಶಿಸಿ) "ಕುಮಾರನೇ, ಕಾಪಾಡು, ಕಾಪಾಡು." ಎಂದು ಕಾಲಿಗೆ ಬೀಳುವನು.

ಅಶ್ವತ್ಥಾಮ:—ಇವನು ತಂದೆಗೆ ಸಾರಥಿಯಾದ ಅಶ್ವಸೇನನು. ಆರ್ಯನೇ, ಮೂರು ಲೋಕವನ್ನೂ ಕಾಪಾಡುವುದಕ್ಕೆ ಸಮರ್ಥನಾದ, ತಂದೆಯ ಸಾರಥಿಯಾದ ನೀನು ಇದರಿಂದ ಪರಿತ್ರಾಣವನ್ನು ಏಕೆ ಬಯಸುವಿ?

ಸಾರಥಿ:—(ದೈನ್ಯದಿಂದ) ಇನ್ನೂ ನಿನ್ನ ತಂದೆಯು ಎಲ್ಲಿರುವನು?

ಅಶ್ವತ್ಥಾಮ:—ಏನು ತಂದೆಯೋ, ಇಲ್ಲವೇ! ಅಯ್ಯೋ ತಂದೆಯೇ! ಎಂದು ಮೂರ್ಛಿತನಾಗುವನು.

ಸಾರಥಿ:—ಕುಮಾರನೇ, ಸ್ಥಿರನು, ಸ್ಥಿರನು.

ಅಶ್ವತ್ಥಾಮ:—(ಕಣ್ಣೀರು ಬಿಡುತ್ತಾ) ಹಾ ತಂದೆಯೇ, ನೀನು ಮಗನಲ್ಲಿ ಬಹಳ ಪ್ರೀತಿಯುಳ್ಳವನಾಗಿದ್ದೆಯಲ್ಲಾ! ಮೂರು ಲೋಕದೊಳಗೂ ಧನುರ್ಧಾರಿಗಳಲ್ಲಿ ಮುಖ್ಯನೆಂದೆನಿಸಿದ್ದೆಯಲ್ಲಾ, ಪರಶುರಾಮನ ಸರ್ವಾಸ್ತ್ರಗಳನ್ನೂ ಪ್ರತಿಗ್ರಹ ಮಾಡಿದ್ದೆಯಲ್ಲಾ.

ಸಾರಥಿ:—ಆಯುಷ್ಮಂತನೇ, ವೀರಪುರುಷರುಗಳಿಗೆ ಯೋಗ್ಯವಾದ ಸ್ಥಿತಿಯನ್ನು ನಿನ್ನ ತಂದೆಯು ಹೊಂದಿರುವನು. ಏಕೆ ಕಾತುರನಾಗುವಿ? ನೀನೂ

ಕೂಡ ಅದಕ್ಕೆ ಅನುಗುಣವಾದ ಪರಾಕ್ರಮದಿಂದ ಶೋಕಸಮುದ್ರವನ್ನು ದಾಟಿ ಸುಖಿಯಾಗು.

ಅಶ್ವತ್ಥಾಮ:—(ಕಣ್ಣೀರು ಬಿಡುತ್ತಾ) ಆರ್ಯನೇ, ಅಂತಹ ಭುಜವೀರ್ಯದಿಂದಲೂ, ಅಸ್ತ್ರಪ್ರಭಾವದಿಂದಲೂ, ಸಮುದ್ರದಂತಿದ್ದ ನನ್ನ ತಂದೆಯು ಹೇಗೆ ಅಸ್ತನಾದನು, ಹೇಳು. ದೊಡ್ಡ ಗದೆಯುಳ್ಳ ಭೀಮಸೇನನಿಂದ ಭೀಮಪ್ರಿಯನಾದ ನನ್ನ ತಂದೆಯು ಗುರುದಕ್ಷಿಣೆಯನ್ನು ಹೊಂದಿದನೋ.

ಸಾರಥಿ:—ಕುಮಾರನೇ, ಹಾಗಾಗಲಿಲ್ಲ.

ಅಶ್ವತ್ಥಾಮ:—ಶಿಷ್ಯರಲ್ಲಿ ದಯೆಯುಳ್ಳವನಾದಕಾರಣ, ಅರ್ಜುನನು ನೀತಿ ತಪ್ಪಿ ಕೊಂದನೋ?

ಸಾರಥಿ:—ಇದು ಹೇಗಾಗುವುದು?

ಅಶ್ವತ್ಥಾಮ:—ಕೃಷ್ಣನ ತೀಕ್ಷ್ಣವಾದ ಚಕ್ರಾಯುಧದ ಅಂಚಿಗೆ ಸಿಲುಕಿದನೋ?

ಸಾರಥಿ:—ವತ್ಸನೇ, ಅದೂ ಆಗಲಿಲ್ಲ.

ಅಶ್ವತ್ಥಾಮ:—ಇವರು ಹೊರತು ಇನ್ನಾರಿಂದಲೂ ನನ್ನ ತಂದೆಗೆ ವಿಪತ್ತನ್ನು ಊಹಿಸಲಾರೆ.

ಸಾರಥಿ:—ಮಹಾಸ್ತ್ರಪಾಣಿಯಾದ ಕುಪಿತನಾದ ನಿನ್ನ ತಂದೆಗೆ ನೀನು ಹೇಳಿದ ಈ ಮೂವರೂ ಯುದ್ಧದಲ್ಲಿ ಸಾಟಿಯಾಗಲಾರರು. ದುಃಖವು ಹೆಚ್ಚಿ ನಿನ್ನ ತಂದೆಯು ಶಸ್ತ್ರತ್ಯಾಗವನ್ನು ಮಾಡಿದಾಗ ಶತ್ರುವು ಈ ಘೋರಕೃತ್ಯವನ್ನು ಮಾಡಿದನು.

ಅಶ್ವತ್ಥಾಮ:—ಶೋಕವು ಹೆಚ್ಚುವುದಕ್ಕೂ, ಶಸ್ತ್ರತ್ಯಾಗಕ್ಕೂ ಕಾರಣವೇನು?

ಸಾರಥಿ:—ಕುಮಾರನಾದ ನೀನೇ ಕಾರಣನು.

ಅಶ್ವತ್ಥಾಮ:—ಅದು ಹೇಗೆ ನಾನು?

ಸಾರಥಿ:—(ಕಣ್ಣೀರು ಬಿಡುತ್ತಾ) ಕೇಳು, ಧರ್ಮರಾಯನು 'ಅಶ್ವತ್ಥಾಮಾ ಹತಃ' ಎಂದು ಘಟ್ಟಿಯಾಗಿ ಹೇಳಿ, ಮೆಲ್ಲಗೆ 'ಕುಂಜರಃ' ಎಂದು ಹೇಳಿದನು. ಅವನು ಸತ್ಯವಾಕ್ಯವುಳ್ಳವನು. ಆದುದರಿಂದ ಆ ಮಾತನ್ನು ಕೇಳಿ, ಆ ಧರ್ಮರಾಯನ ಮೇಲಿನ ನಂಬಿಕೆಯಿಂದ ಮಗನ ಮೇಲೆ ಹೆಚ್ಚಾದ ಪ್ರೀತಿಯುಳ್ಳ

ನಿನ್ನ ತಂದೆಯೂ ಯುದ್ಧದಲ್ಲಿ ಶಸ್ತ್ರವನ್ನೂ ಬಿಟ್ಟನು. ಶರೀರವನ್ನೂ ಬಿಟ್ಟನು.

ಅಶ್ವತ್ಥಾಮ:—ಹಾ ತಂದೆಯೇ! ಶೌರ್ಯರಾಶಿಯೇ, ಶಿಷ್ಯಪ್ರಿಯನೇ, ಹಾ! ಯುಧಿಷ್ಠಿರ ಪಕ್ಷಪಾತಿಯೇ, ನನಗೋಸ್ಕರ ವ್ಯರ್ಥವಾಗಿ ಪ್ರಾಣವನ್ನು ಬಿಟ್ಟೆಯಾ (ಎಂದು ಅಳುವನು.)

ಸಾರಥಿ:—ಕುಮಾರನೇ, ಹೆಚ್ಚಾಗಿ ಅಳಬೇಡ.

ಅಶ್ವತ್ಥಾಮ:—ತಂದೆಯೇ, ಮಗನ ಮೇಲಿನ ಮಮತೆಯಿಂದ ನಾನು ಸಾಯದಿದ್ದರೂ ಸತ್ತನೆಂದು ಹೇಳಿದ ಮಾತ್ರದಿಂದಲೇ, ಬಾಣಗಳನ್ನೂ, ಪ್ರಾಣವನ್ನೂ ಸಹಾ ಬಿಟ್ಟೆಯಲ್ಲಾ! ಅಂಥಾ ನೀನು ಹೀಗಾಗಿ ಸತ್ತಿರುವದನ್ನು ಕೇಳಿಯೂ ನಾನು ಬದುಕಿರುವೆನಲ್ಲಾ. ಇಂಥಾ ಕ್ರೂರನಾದ ನನ್ನಲ್ಲಿ ನಿನ್ನ ಸ್ನೇಹವು ವ್ಯರ್ಥವಲ್ಲವೆ? (ಎಂದು ಮೂರ್ಛಿತನಾಗುವನು.)

ಸಾರಥಿ:—ಕುಮಾರನೇ, ಕುಮಾರನೇ, ಸ್ಥೈರಿಸು, ಸ್ಥೈರಿಸು.

(ದುಃಖದಿಂದ ಕೃಪಾಚಾರ್ಯನು ಪ್ರವೇಶಿಸುವನು.)

ಕೃಪ:—ಕುರುಪತಿಯನ್ನೂ, ಅವನ ತಮ್ಮಂದಿರನ್ನೂ ಸುಡಬೇಕು. ಧರ್ಮರಾಯನು ಕೆಟ್ಟನು. ವ್ಯರ್ಥವಾಗಿ ಆಯುಧಗಳನ್ನು ಹಿಡಿದಿರುವ ನಾವು ಬದುಕಿ ಏನು ಪ್ರಯೋಜನ! ಆಗ ದ್ರೌಪದೀಕೇಶಗ್ರಹಣವನ್ನೂ, ಈಗ ದ್ರೋಣಾಚಾರ್ಯನ ಕೇಶಗ್ರಹಣವನ್ನೂ ಚಿತ್ರದ ಬೊಂಬೆಗಳಂತೆ ನೋಡುತ್ತಿದ್ದೆವಲ್ಲಾ! ವತ್ಸನಾದ ಅಶ್ವತ್ಥಾಮನನ್ನು ಹೇಗೆ ನೋಡಲಿ? ಅಥವಾ ಹಿಮವತ್ಪರ್ವತದಂತೆ ಸ್ಥಿರವಾದ ಮನಸ್ಸುಳ್ಳವನಾಗಿಯೂ, ಲೋಕವ್ಯವಹಾರವನ್ನು ಅರಿತವನಾಗಿಯೂ ಇರುವ ಅಶ್ವತ್ಥಾಮನು ಹೆಚ್ಚು ದುಃಖವನ್ನು ಪಡಲಾರನೆಂದು ಯೋಚಿಸುತ್ತೇನೆ. ಆದರೆ, ತಂದೆಗೆ ಉಂಟಾದ ಅನುಚಿತವಾದ ಅವಮಾನವನ್ನು ಕೇಳಿ ಏನು ಮಾಡುವನೋ ತಿಳಿಯದು. ಅಥವಾ ಒಂದು ಕೇಶಗ್ರಹಕ್ಕೆ ಇಷ್ಟು ಭಯಂಕರವಾದ ಪರಿಣಾಮವೂ ಆಗಿದೆ. ಈ ಎರಡನೇ ಕೇಶಗ್ರಹದಲ್ಲಿ ಖಂಡಿತವಾಗಿಯೂ ಪ್ರಜೆಗಳ್ಯಾರೂ ಉಳಿಯುವುದೇ ಇಲ್ಲ. ವತ್ಸನು ಇಲ್ಲಿಯೇ ಇರುವನು. (ಸಮೀಪಕ್ಕೆ ಬಂದು ಮೂರ್ಛೆ ಹೋಗಿರುವುದನ್ನು ನೋಡಿ ಗಾಬರಿಯಿಂದ) ವತ್ಸನೇ, ಸ್ಥೈರಿಸು, ಸ್ಥೈರಿಸು.

ಅಶ್ವತ್ಥಾಮ:—(ಎಚ್ಚೆತ್ತು ಕಣ್ಣೀರು ಬಿಡುತ್ತಾ) ಸಮಸ್ತ ಲೋಕಕ್ಕೂ ಆಚಾರ್ಯನಾದ ಹಾ! ತಂದೆಯೇ,- (ಆಕಾಶದಲ್ಲಿ ದೃಷ್ಟಿಯಿಟ್ಟು) ಯುಧಿಷ್ಠಿರನೇ, ಯುಧಿಷ್ಠಿರನೇ, ನೀನು ಹುಟ್ಟಿದ್ದು ಮೊದಲು ಸುಳ್ಳು ಹೇಳಿದವನಲ್ಲ. ಯಾರಲ್ಲಿಯೂ ನಿನಗೆ ದ್ವೇಷವಿಲ್ಲ. ಆದ್ದರಿಂದಲೇ ನಿನ್ನನ್ನು ಅಜಾತಶತ್ರುನೆಂದು ಹೇಳುವರು. ಅಸ್ತ್ರಾಚಾರ್ಯನಾಗಿಯೂ, ಬ್ರಾಹ್ಮಣ ಶ್ರೇಷ್ಠನಾಗಿಯೂ ಇರುವ ನನ್ನ ತಂದೆಯ ವಿಷಯದಲ್ಲಿ ಅದೆಲ್ಲವನ್ನೂ ಒಟ್ಟಿಗೆ ತಳ್ಳಿಬಿಟ್ಟೆಯಲ್ಲಾ. ಇದು ನನ್ನ ಭಾಗ್ಯದೋಷ.

ಸಾರಥಿ:—ಕುಮಾರನೇ, ಮಾವನಾದ ಕೃಪಾಚಾರ್ಯನು ಪಕ್ಕದಲ್ಲಿ ನಿಂತಿರುವನು.

ಅಶ್ವತ್ಥಾಮ:—(ಪಕ್ಕದಲ್ಲಿ ನೋಡಿ ಕಣ್ಣೀರು ತುಂಬಿಕೊಂಡು) ಮಾತುಲ, ಮಾತುಲ, ಕೌರವರುಗಳ ಯುದ್ಧದ ಭಾರವನ್ನು ಅವಗಿಸುವ ದ್ರೋಣಾಚಾರ್ಯನೊಂದಿಗೆ ನೀನು ಅನೇಕ ವಿಧವಾದ ಸಂವಾದಗಳನ್ನಾಡುತ್ತಿದ್ದೆಯಲ್ಲ. ಅಂತಹ ಶ್ಲಾಘ್ಯನಾದ ನನ್ನ ತಂದೆಯು ಎಲ್ಲಿ ಹೋದನು?

ಕೃಪ:—ವತ್ಸ, ತಿಳಿಯಬೇಕಾದ್ದೆಲ್ಲವನ್ನೂ ತಿಳಿದೇ ಇರುವೆ. ಏಕೆ ದುಃಖಪಡುವಿ?

ಅಶ್ವತ್ಥಾಮ:—ಮಾವನೇ, ನಾನು ದುಃಖವನ್ನು ಬಿಟ್ಟೆಬಿಟ್ಟೆನು. ಪುತ್ರವತ್ಸಲನಾದ ತಂದೆಯನ್ನೇ ಅನುಸರಿಸುವೆನು.

ಕೃಪ:—ವತ್ಸನೇ, ನಿನಗೆ ಇದು ಯೋಗ್ಯವಲ್ಲ.

ಸಾರಥಿ:—ಕುಮಾರನೇ, ಅಂಥಾ ಸಾಹಸವನ್ನು ಮಾಡಬೇಡ.

ಅಶ್ವತ್ಥಾಮ:—ಆರ್ಯನೇ, ನೀನು ಹೇಳುವೆ? ನನ್ನ ವಿಯೋಗವನ್ನು ಸಹಿಸಲಾರದೆ ತಂದೆಯು ಪರಲೋಕಕ್ಕೆ ಹೋದನು. ನಾನು ಇಲ್ಲಿಯೇ ಇದ್ದು ಪುನಃ ಅವನಿಗೆ ವಿರಹದುಃಖವನ್ನುಂಟುಮಾಡುವುದು ಸರಿಯಲ್ಲ.

ಕೃಪ:—ವತ್ಸ, ಸಂಸಾರದಲ್ಲಿರುವವರಿಗೂ ಮುಕ್ತರಾದವರು ತಂದೆಯನ್ನು ಉಭಯ ಲೋಕದಲ್ಲಿಯೂ ಅನುಸರಿಸಿಕೊಂಡಿರಬೇಕೆಂಬುದು ಪ್ರಸಿದ್ಧವಾಗಿಯೇ ಇರುವುದು. ತರ್ಪಣಗಳಿಂದಲೂ, ಶ್ರಾದ್ಧಕರ್ಮಗಳಿಂದಲೂ ತಂದೆಗೆ ಉಪಕಾರ ಮಾಡುವುದಕ್ಕೆ ಬದುಕಿದ್ದರೆ ಶಕ್ತನಾಗುವೆಯಾ? ಬದುಕದಿದ್ದರೆ ಶಕ್ತನಾಗುವೆಯೋ ನೋಡು?

ಸಾರಥಿ:—ಆಯುಷ್ಮಂತನೇ, ಕೃಪಾಚಾರ್ಯನು ಹೇಳಿರುವುದು ನ್ಯಾಯವಾಗಿರುವುದು.

ಅಶ್ವತ್ಥಾಮ:—ಆರ್ಯನೇ, ಇದೆಲ್ಲವೂ ಸರಿ. ಆದರೆ ದುಃಖವನ್ನು ಸಹಿಸುವುದಕ್ಕಾಗುವುದಿಲ್ಲ. ತಂದೆಯನ್ನು ಅಗಲಿ ಒಂದು ಕ್ಷಣವೂ ಪ್ರಾಣವನ್ನು ಧರಿಸಿಕೊಂಡಿರಲಾರೆನು. ನನ್ನ ತಂದೆಯ ಪ್ರೀತಿಯನ್ನು ನೋಡುವುದಕ್ಕೆ ಅಲ್ಲಿಗೆ ಹೋಗುತ್ತೇನೆ. (ಖಡ್ಗ, ಕತ್ತಿಯನ್ನು ನೋಡಿ, ಹಾಗೆಯೇ ಯೋಚಿಸಿ) ಇನ್ನು ಶಸ್ತ್ರವನ್ನು ಗ್ರಹಿಸುವುದು ಸಾಕು. ಎಲೈ ಪೂಜ್ಯ ಶಸ್ತ್ರವೇ, ಬ್ರಾಹ್ಮಣರಿಗೆ ಗ್ರಹಿಸುವುದಕ್ಕೆ ನೀನು ಅನರ್ಹನಾದಾಗ್ಯೂ, ಶತ್ರುವಿನಿಂದುಂಟಾಗುವ ತಿರಸ್ಕಾರ ಭಯದಿಂದ ತಂದೆಯು ನಿನ್ನನ್ನು ಗ್ರಹಿಸಿದನು. ಅವನ ಮಹಿಮೆಯಿಂದ ನಿನಗೆ ಯಾವುದೂ ಅಕೀರ್ತಿಯಿರಲಿಲ್ಲ. ಆ ತಂದೆಯು ಪುತ್ರಶೋಕದಿಂದ ನಿನ್ನನ್ನು ತ್ಯಾಗ ಮಾಡಿದನು. ಭಯದಿಂದಲ್ಲ, ಆದ್ದರಿಂದ ನಾನೂ ನಿನ್ನನ್ನು ತ್ಯಾಗ ಮಾಡುವೆನು. ಕ್ಷೇಮವಾಗಿರು. (ತ್ಯಾಗ ಮಾಡುವುದಕ್ಕೆ ಉದ್ಯೋಗಿಸುವನು.)

(ತೆರೆಯಲ್ಲಿ) ಎಲೈ ರಾಜರುಗಳಿರಾ! ನೀವುಗಳು ಆಚಾರ್ಯನಿಗೆ ಉಂಟುಮಾಡಿದ ತಿರಸ್ಕಾರವನ್ನು ಶಸ್ತ್ರಗಳುಳ್ಳರೂ ಹೇಗೆ ಉಪೇಕ್ಷೆ ಮಾಡುತ್ತೀರಿ?

ಅಶ್ವತ್ಥಾಮ. (ಕೇಳಿ ಮರಳಿ ಆಯುಧವನ್ನು ಕೈಗೆ ತೆಗೆದುಕೊಳ್ಳುತ್ತಾ) ನನ್ನ ತಂದೆಯಾದ ಭಾರದ್ವಾಜನಿಗೂ ತಿರಸ್ಕಾರವೇ!

(ತೆರೆಯಲ್ಲಿ ಪುನಃ) ಮಹಾರಾಜ ಶೋಕಕ್ಕೆ ಪಾತ್ರನಾಗಿ ದುಃಖದಿಂದ ಕಣ್ಣೀರು ಬಿಡುತ್ತಾ, ಶಸ್ತ್ರ ಸನ್ಯಾಸವನ್ನು ಮಾಡಿದ ದ್ರೋಣಾಚಾರ್ಯನ ನರೆತ ಕೂದಲಿನಿಂದ ಬೆಳ್ಳಗಿರುವ ತಲೆಯ ಮೇಲೆ ಕೈಯನ್ನಿಟ್ಟು, ಧೃಷ್ಟದ್ಯುಮ್ನನು ನೀಚ ಕೆಲಸವನ್ನು ಮಾಡಿ ಶಿಬಿರಕ್ಕೆ ಹೋಗುತ್ತಿರುವನು. ನೀವೆಲ್ಲರೂ ಸಹಿಸಿಕೊಳ್ಳಿರಿ.

ಅಶ್ವತ್ಥಾಮ:—(ಕೋಪದಿಂದ ನಡುಗುತ್ತಾ, ಕೃಪಾಚಾರ್ಯನನ್ನೂ, ಸಾರಥಿಯನ್ನೂ ನೋಡಿ) ಏನಿದು! ಧನುರ್ಧಾರಿಗಳಾದ ರಾಜರುಗಳ ಎದುರಿಗೆ ಪ್ರಾಯೋಪವೇಶಕ್ಕೆ ಸಮಾನವಾದ ಶಾಂತಿಯನ್ನು ವಹಿಸಿ, ನಿರಾಯುಧನಾಗಿ ಕಣ್ಣು

ಮುಚ್ಚಿಕೊಂಡು ಇರುವ ಆಚಾರ್ಯನ ನೆರತ ಕೂದಲುಗಳುಳ್ಳ ತಲೆಯಲ್ಲಿ ಶಸ್ತ್ರವನ್ನು ಉಪಯೋಗಿಸುವುದು ಉಚಿತವೇ?

ಕೃಪ:—ವತ್ಸನೇ, ಹೀಗೆ ಜನಗಳು ಹೇಳುತ್ತಾರೆ.

ಅಶ್ವತ್ಥಾಮ:—ದುರಾತ್ಮನು ತಂದೆಯ ಶಿರಸ್ಸನ್ನು ಮುಟ್ಟಿದನೇ?

ಸಾರಥಿ:—(ಭಯದಿಂದ) ಕುಮಾರನೇ, ತೇಜೋರಾಶಿಯಾದ ಆಚಾರ್ಯನಿಗೆ ಈ ವಿಧವಾದ ತಿರಸ್ಕಾರವು ಹೊಸದಾಗಿ ಆಯಿತು.

ಅಶ್ವತ್ಥಾಮ:—ಹಾ! ತಂದೆಯೇ, ಪುತ್ರಪ್ರಿಯನೇ, ಮಂದಭಾಗ್ಯನಾದ ನನಗೋಸ್ಕರ ಶಸ್ತ್ರಪರಿತ್ಯಾಗವನ್ನು ಮಾಡಿ, ಆ ನೀಚನಿಂದ ಅವಮಾನವನ್ನು ತಂದುಕೊಂಡೆಯಾ! ಅಥವಾ ಯುದ್ಧದಲ್ಲಿ ದುಃಖದಿಂದ ಮನಸ್ಸು ಕೆಟ್ಟುಹೋಗಿ, ಶಸ್ತ್ರತ್ಯಾಗವನ್ನು ಮಾಡಿರುವಾಗ ನಾಯಿಯಾಗಲೀ, ಕಾಗೆಯಾಗಲೀ ದುಷ್ಟ ಮನುಷ್ಯನಾಗಲೀ ತಲೆಯನ್ನು ಸ್ಪರ್ಶಮಾಡಬಹುದು. ಅದರಲ್ಲೇನೂ ಪರಾಕ್ರಮವಿಲ್ಲ. ದಿವ್ಯಾಸ್ತ್ರಗಳ ಸಮೂಹದಿಂದ ಮೆರೆಯುವ ಆ ಶತ್ರುವಿನ ತಲೆಯ ಮೇಲೆ ಕೈಯನ್ನಿಡುವುದಿಲ್ಲ, ಕಾಲನ್ನಿಡುವೆನು. ದುರಾತ್ಮನೇ, ನೀಚ ಪಾಂಚಾಲನೇ, ತಂದೆಯು ಶಸ್ತ್ರವನ್ನು ಹಿಡಿಯುವುದಿಲ್ಲವೆಂದು ನಿಶ್ಚಯಿಸಿಕೊಂಡು ಭಯವಿಲ್ಲದೆ ಕೈಯನ್ನಿಟ್ಟ ನಿನಗೆ ಪಾಂಡು ಪಾಂಚಾಲ ಸೇನೆಗಳನ್ನು, ಪ್ರಳಯ ಮಾರುತನು ಹತ್ತಿಯನ್ನು ತೂರುವಂತೆ ಓಡಿಸುವ ಸಾಮರ್ಥ್ಯವುಳ್ಳ ಕೈಯಲ್ಲಿ ಬಿಲ್ಲನ್ನು ಧರಿಸಿರುವ ಅಶ್ವತ್ಥಾಮನು ಜ್ಞಾಪಕಕ್ಕೆ ಬರಲಿಲ್ಲವೇ? ಧರ್ಮರಾಜನೇ, ಅಜಾತಶತ್ರುವೇ, ಮಿಥ್ಯಾವಾದಿಯೇ, ನಿನಗಾಗಲಿ ನಿನ್ನ ತಮ್ಮಂದಿರಿಗಾಗಲೀ ಇವನು ಯಾವ ಅಪಕಾರವನ್ನು ಮಾಡಿದನು? ಅಥವಾ ವೃಥಾ ಸತ್ಯವಾದಿಯೆಂದು ಹೆಸರು ಪಡೆದು, ಸ್ವಭಾವ ವಂಚಕನಾದ ನಿನ್ನಿಂದೇನು ಪ್ರಯೋಜನ? ಅರ್ಜುನನೇ, ಅರ್ಜುನನೇ, ಸಾತ್ಯಕಿಯೇ, ಬಾಹುಗಳ ಬಲಶಾಲಿಯಾದ ಭೀಮನೇ, ಮಾಧವನೇ, ಸುರಾಸುರರಲ್ಲಿಯೂ, ಮನುಷ್ಯರಲ್ಲಿಯೂ, ಲೋಕೈಕವೀರನೆಂದು ಹೆಸರುಗೊಂಡು, ಬ್ರಾಹ್ಮಣನಾಗಿ, ಅದರಲ್ಲಿಯೂ ವೃದ್ಧನಾಗಿ, ಅದರೊಳಗೂ ಸರ್ವಾಚಾರ್ಯನಾಗಿ, ನನ್ನ ತಂದೆಯಾದ ದ್ರೋಣಾಚಾರ್ಯನಿಗೆ ದ್ರುಪದಕುಲ ಕಳಂಕಿಯಾದ ನರಪಶುವು ಅವಮಾನ ಮಾಡಿದರೆ, ನೀವು ಉಪೇಕ್ಷೆ ಮಾಡು

ವುದು ಯುಕ್ತವೆ? ಇವರೆಲ್ಲರೂ ಮಹಾಪಾತಕಿಗಳು. ಇವರಿಂದ ಏನು? ಈ ಗುರುಪಾತಕವನ್ನು ಮಾಡಿದ, ಸಮ್ಮತಿಸಿದ, ನೋಡಿದ, ಮರ್ಯಾದೆಗೆಟ್ಟ, ನರಪಶುಗಳಾದ ನಿಮ್ಮಗಳ ರಕ್ತಮಾಂಸಗಳಿಂದಲೂ, ಕೃಷ್ಣ, ಭೀಮಾರ್ಜುನರುಗಳ ರಕ್ತಮಾಂಸಗಳಿಂದಲೂ ದಿಕ್ಕುಗಳಿಗೆ ಬಲಿಯನ್ನು ಕೊಡುವೆನು.

ಕೃಪ:—ವತ್ಸನೇ, ಭಾರದ್ವಾಜನಿಗೆ ಸಮನಾದ ದಿವ್ಯಾಸ್ತ್ರಗಳನ್ನರಿತಿರುವ ಬಾಹುಬಲಶಾಲಿಯಾದ ನಿನಗೆ ಯಾವುದೂ ಅಸಾಧ್ಯವಲ್ಲ.

ಅಶ್ವತ್ಥಾಮ:—ಎಲೈ ಪಾಂಡವ, ಮಾತ್ಸ್ಯಸೋಮಕ, ಮಾಗಧರೇ ಮೊದಲಾದ ನೀಚ ಕ್ಷತ್ರಿಯರುಗಳಿರಾ, ಬ್ರಹ್ಮನ ವರಸ್ಪರ್ಧವುಳ್ಳ ಪರಶುರಾಮನು ಅವನ ತಂದೆಯ ತಿರಸ್ಸನ್ನು ಸ್ಪರ್ಶಮಾಡಿದಾಗ, ಅವನು ಮಾಡಿದ ಸಾಹಸವನ್ನು ನೀವು ಕೇಳಿರುವಿರಷ್ಟೆ. ಈಗ ಈ ಅಶ್ವತ್ಥಾಮನು ಅದೇ ಪರಶುರಾಮನು ಮಾಡಿದಂತೆ ರಾಜರುಗಳನ್ನು ರಕ್ತಮಾತ್ರಶೇಷರನ್ನಾಗಿ ಮಾಡುವುದಕ್ಕೆ ಸಮರ್ಥನಲ್ಲವೆ! ಸಾರಥಿಯೇ, ಯುದ್ಧೋಪಕರಣಗಳಿಂದ ಕೂಡಿದ ನನ್ನ ರಥವನ್ನು ತೆಗೆದುಕೊಂಡು ಬಾ.

ಸಾರಥಿ:—ಅಪ್ಪಣೆ. (ಹೊರಟು ಹೋಗುವನು.)

ಕೃಪ:—ವತ್ಸನೇ, ಈ ದಾರುಣವಾದ ದುಃಖಾಗ್ನಿಗೆ ಪ್ರತಿಕ್ರಿಯೆಯನ್ನು ಮಾಡಬೇಕಾದ್ದು ಅತ್ಯವಶ್ಯಕವಾಗಿರುವುದರಿಂದ, ಅದಕ್ಕೆ ನಮ್ಮೊಳಗೆ ನಿನ್ನ ಹೊರತು ಇನ್ನು ಯಾರು ತಾನೆ ಶಕ್ತರು!

ಅಶ್ವತ್ಥಾಮ:—ಅದರ ಮೇಲೆ ಇನ್ನೇನು?

ಕೃಪ:—ಸೇನಾಪತಿಯ ಸ್ಥಾನದಲ್ಲಿ ಅಭಿಷೇಕವನ್ನು ಹೊಂದಿ, ನೀನು ಯುದ್ಧಭೂಮಿಗೆ ಹೋಗಬೇಕೆಂದು ಅಪೇಕ್ಷಿಸುತ್ತೇನೆ.

ಅಶ್ವತ್ಥಾಮ:—ಇದು ಪರಾಧೀನವಾದದ್ದು, ಮತ್ತು ಇದರಿಂದ ಪ್ರಯೋಜನವೂ ಇಲ್ಲ.

ಕೃಪ:—ವತ್ಸ, ಪರಾಧೀನವೂ ಅಲ್ಲ, ಅದರಿಂದ ಪ್ರಯೋಜನವಿಲ್ಲದೆಯೂ ಇಲ್ಲ. ನೋಡು, ಭೀಷ್ಮನೂ ಇಲ್ಲದೆ, ದ್ರೋಣನೂ ಇಲ್ಲದೆ, ಅವನಿಗೆ ಸಮನಾದ

ನೀನೂ ಜಂಬನಾಗಿಲ್ಲದೇ ಹೋದರೆ, ಕುರುಸೈನ್ಯವು ಹೇಗೆ ನಿಲ್ಲುವುದು? ಸಾಧನಸಂಪತ್ತುಗಳಿಂದ ಕೂಡಿದ ನಿನ್ನಂತಹ ಮನುಷ್ಯನಿಗೆ ಮೂರು ಲೋಕಗಳೂ ಕೂಡ ವಿರೋಧವಾಗಿ ನಿಲ್ಲುವುದಕ್ಕೆ ಸಮರ್ಥವಾಗಲಾರವು. ಧರ್ಮರಾಜನ ಬಲವು ಎಷ್ಟುಮಾತ್ರದ್ದು? ಆದ್ದರಿಂದ ಅಭಿಷೇಕದ ಉಪಕರಣಗಳನ್ನು ಸಿದ್ಧಪಡಿಸಿಕೊಂಡು ನಿನ್ನ ಸಮೀಪಕ್ಕೆ ಕುರುರಾಜನು ಶೀಘ್ರವಾಗಿಯೇ ಬರುವನೆಂದು ನಂಬುತ್ತೇನೆ.

ಅಶ್ವತ್ಥಾಮ:—ಹಾಗಾದರೆ, ಈ ಅವಮಾನದ ಬೆಂಕಿಯ ತಾಪವನ್ನು ಪ್ರತಿಕ್ರಿಯೆಯ ನೀರಿನಲ್ಲಿ ಮುಳುಗಿ ಪರಿಹರಿಸಿಕೊಳ್ಳುವುದಕ್ಕೆ ನನ್ನ ಮನಸ್ಸು ಆತುರಪಡುತ್ತಿದೆ. ಆದ್ದರಿಂದ ನನ್ನ ತಂದೆಯ ವಧೆಯಿಂದ ದುಃಖಪಡುತ್ತಿರುವ ಕುರುರಾಜನಲ್ಲಿಗೆ ಹೋಗಿ, ನಾನೇ ಸೇನಾಪತಿಯಾಗುವುದಕ್ಕೆ ಇಷ್ಟಪಟ್ಟಿರುವ ನನ್ನ ಪ್ರಣಯವನ್ನು ತೋರಿಸಿ, ಸಮಾಧಾನ ಪಡಿಸುವುದರಿಂದ, ಅವನ ಸಂತಾಪವನ್ನು ಹೋಗಲಾಡಿಸುವೆನು.

ಕೃಪ:—ವತ್ಸನೇ, ಹಾಗೆಯೇ ಸರಿ. ಅಲ್ಲಿಗೆ ಹೋಗೋಣ. (ಎಂದು ಹೋಗುವರು.)

(ದುರ್ಯೋಧನನೂ, ಕರ್ಣನೂ ಪ್ರವೇಶಿಸುವರು.)

ದುರ್ಯೋಧನ:—ಅಂಗರಾಜನೇ, ಪರಾಕ್ರಮಶಾಲಿಯಾದ ಮನುಷ್ಯನು ಶತ್ರುಗಳಿಂದ ತನ್ನ ಬಂಧುಗಳು ಹತರಾದರೆ, ಆ ದುಃಖಸ್ರಾವವನ್ನು ಆಯುಧವನ್ನು ಧರಿಸಿರುವ ಬಾಹುಗಳಿಂದ ಶಸ್ತ್ರಗಳಿಂದ ದಾಟುವುದುಂಟು. ಆಚಾರ್ಯನು ಮಗನು ಸತ್ತನೆಂಬ ಸಂಗತಿಯನ್ನು ಕೇಳಿ, ಶಸ್ತ್ರಗ್ರಹಣವನ್ನು ಮಾಡಬೇಕಾದ ಕಾಲದಲ್ಲಿ ಶಸ್ತ್ರವನ್ನು ಬಿಟ್ಟನಲ್ಲ ಛೀ! ಅಥವಾ ಸ್ವಭಾವವನ್ನು ಬಿಡುವುದಕ್ಕಾಗುವುದಿಲ್ಲವೆಂದು ದೊಡ್ಡವರು ಹೇಳುವರು. ಅದು ನಿಜ. ಆದ್ದರಿಂದಲೇ ಶೋಕದಿಂದ ನೊಂದ ಮನಸ್ಸುಳ್ಳವನಾಗಿ ಕ್ಷಾತ್ರಧರ್ಮಕ್ಕೆ ಉಚಿತವಾದ ಕರ್ತವ್ಯವನ್ನು ಬಿಟ್ಟು, ಬ್ರಾಹ್ಮಣನಿಗೆ ಸಹಜವಾದ ಮಾರ್ದವವನ್ನು ಪರಿಗ್ರಹಿಸಿದನು.

ಕರ್ಣ:—ರಾಜನೇ, ಇದು ಹಾಗಲ್ಲ.

ದುರ್ಯೋಧನ:—ಮತ್ತೆ ಹೇಗೆ?

ಕರ್ಣ:—ಅವನ ಅಭಿಪ್ರಾಯವೇ ಬೇರೆ. ಈ ಪೃಥಿವಿಯ ಸಾಂಬ್ರಾಜ್ಯದಲ್ಲಿ ಅಶ್ವತ್ಥಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಅಭಿಲಾಷೆ ಇತ್ತು. ಅವನು ಮೃತನಾದ ಬಳಿಕ, ವೃದ್ಧನಾಗಿಯೂ, ಬ್ರಾಹ್ಮಣನಾಗಿಯೂ ಇರುವ ತಾನು ವ್ಯರ್ಥವಾಗಿ ಶಸ್ತ್ರವನ್ನು ಏಕೆ ಧರಿಸಬೇಕೆಂದು ಹಾಗೆ ಮಾಡಿದನು.

ದುರ್ಯೋಧನ:—(ತಲೆದೂಗುತ್ತಾ) ಇದು ಹೀಗೆಯೋ!

ಕರ್ಣ:—ರಾಜನೇ, ಅದಕ್ಕಾಗಿಯೇ ಪಾಂಡವರಲ್ಲಿಯೂ, ಕೌರವರಲ್ಲಿಯೂ ವಿಶ್ವಾಸವುಳ್ಳ ರಾಜರುಗಳು ಈ ಮಹಾಯುದ್ಧವನ್ನು ಹೊಂದಿ, ಯುದ್ಧಮಾಡುತ್ತಿರುವಾಗ "ಇವರೆಲ್ಲರೂ ನಾಶವಾಗಿ ಹೋಗಬೇಕೆಂಬ ಉದ್ದೇಶದಿಂದಲೇ ತಾನು ಶಕ್ತನಾಗಿದ್ದಾಗ್ಯೂ, ಪ್ರಧಾನಪುರುಷರುಗಳು ಸಂಹೃತರಾಗುವಾಗ ಉಪೇಕ್ಷೆ ಮಾಡಿದನು.

ದುರ್ಯೋಧನ:—ಒಪ್ಪಬಹುದು.

ಕರ್ಣ:—ಇನ್ನೊಂದು ವಿಷಯ. ಇವನ ದುರಭಿಪ್ರಾಯವನ್ನು ತಿಳಿದೇನೇ ಬಾಲ್ಯಸ್ನೇಹಿತನಾದ ದ್ರುಪದನು ತನ್ನ ರಾಜ್ಯದಲ್ಲಿ ಇವನಿಗೆ ವಾಸಮಾಡುವುದಕ್ಕೆ ಅವಕಾಶವನ್ನು ಕೊಡಲಿಲ್ಲ.

ದುರ್ಯೋಧನ:—ಅಂಗರಾಜನೇ, ನ್ಯಾಯ. ನಿನ್ನ ಊಹೆಯು ಬಹಳ ಶ್ಲಾಘ್ಯವಾಗಿರುವುದು. ಚೆನ್ನಾಗಿ ಊಹಿಸಿದೆ.

ಕರ್ಣ:—ಇದು ನನ್ನ ಅಭಿಪ್ರಾಯ ಮಾತ್ರವೇ ಅಲ್ಲ. ದೊಡ್ಡ ದೊಡ್ಡವರೂ ಕೂಡ ಹೀಗೆಯೇ ತಿಳಿದಿದ್ದಾರೆ.

ದುರ್ಯೋಧನ:—ಸಂಶಯವೇನು? ಇದು ಹೀಗೆಯೇ ಸರಿ. ಸಿಂಧುರಾಜನನ್ನು ಕಾಪಾಡುತ್ತೇನೆಂದು ಅಭಯವನ್ನು ಕೊಟ್ಟು, ತಾನು ಅತಿರಥನಾಗಿದ್ದೂ ಕೂಡ ಅರ್ಜುನನು ಅವನನ್ನು ಕೊಲ್ಲುತ್ತಿದ್ದರೆ, ಈ ವಿಧವಾದ ಅಭಿಪ್ರಾಯವಿಲ್ಲದಿದ್ದರೆ, ಉದಾಸೀನ ಮಾಡುತ್ತಿದ್ದನೇ?

ಕೃಪ:—ವತ್ಸನೇ, ಕುರುಪತಿಯು ಕರ್ಣನೊಂದಿಗೆ ಈ ಆಲದ ಮರದ ನೆರಳಿನಲ್ಲಿ ಕುಳಿತಿರುವನು. ಅಲ್ಲಿಗೆ ಹೋಗೋಣ (ಎಂದು ಸಮೀಪಕ್ಕೆ ಬಂದು) ಕುರುರಾಜನಿಗೆ ಜಯವಾಗಲಿ.

ಕರ್ಣ:—(ನೋಡಿ) ಕೃಪಾಚಾರ್ಯನೂ, ಅಶ್ವತ್ಥಾಮನೂ ಬಂದಿರುವರು.

ದುರ್ಯೋಧನ:—(ಆಸನದಿಂದ ಇಳಿದು) ಆಚಾರ್ಯನೇ ನಮಸ್ಕರಿಸುವೆನು. ಆಚಾರ್ಯ ಪುತ್ರನೇ, ನನಗೋಸ್ಕರ ನಿನ್ನ ತಂದೆಯು ಹತನಾದನು. ದುಃಖದಿಂದ ಬಳಲಿರುವ ನಿನ್ನ ಶರೀರವನ್ನು ನನ್ನ ಶರೀರದೊಂದಿಗೆ ಸೇರಿಸಿ ಆಲಿಂಗಿಸಿಕೋ. ನಿನ್ನ ಈ ಸ್ಪರ್ಶವು ನಿನ್ನ ತಂದೆಗೆ ಸಮಾನವಾಗಿಯೇ ಇರುವುದು. ಈ ದುಃಖಸಮಯದಲ್ಲಿಯೂ ಸಂತೋಷವನ್ನುಂಟುಮಾಡುತ್ತಿರುವುದು. (ಆಲಿಂಗಿಸಿಕೊಂಡು ಪಕ್ಕದಲ್ಲಿ ಕೂಡಿಸಿಕೊಳ್ಳುವನು.

(ಅಶ್ವತ್ಥಾಮನು ಕಣ್ಣೀರು ಬಿಡುವನು.)

ಕರ್ಣ:—ದ್ರೋಣಪುತ್ರನೇ, ಶೋಕಾಗ್ನಿಯಲ್ಲಿ ದೇಹವನ್ನು ಅತ್ಯಂತವಾಗಿ ಬಳಲಿಸಬೇಡ.

ದುರ್ಯೋಧನ:—ಆಚಾರ್ಯ ಪುತ್ರನೇ, ಈ ವ್ಯಸನ ಮಹಾಸಮುದ್ರದಲ್ಲಿ ನಮ್ಮಿಬ್ಬರಿಗೂ ವ್ಯತ್ಯಾಸವೇನು? ನೋಡು, ಆಚಾರ್ಯನು ನಿನಗೆ ಪ್ರೀತಿಪಾತ್ರನಾದ ತಂದೆಯು. ನನ್ನ ತಂದೆಗೆ ಪ್ರೀತಿಪಾತ್ರನಾದ ಮಿತ್ರನು. ಶಸ್ತ್ರವಿದ್ಯೆಯ ವಿಷಯದಲ್ಲಿ ನಿನಗೆ ಹೇಗೆ ಗುರುವೋ ನನಗೂ ಹಾಗೆ ಗುರುವು. ಅಂತಹ ಆಚಾರ್ಯನು ಮೃತಿಯನ್ನು ಹೊಂದಿದ್ದರಿಂದ, ಉಂಟಾಗಿರುವ ದುಃಖವನ್ನು ಹೇಗೆ ವಿವರಿಸಲಿ. ನಿನ್ನ ಮನಸ್ಸಿನಿಂದಲೇ ನೀನು ತಿಳಿದುಕೊ.

ಕೃಪ:—ವತ್ಸನೇ, ಅದು ಹಾಗೆಯೇ ಸರಿ. ಕುರುರಾಜನು ಯಥಾರ್ಥವನ್ನು ಹೇಳಿರುವನು.

ಕರ್ಣ:—ಇದರಲ್ಲಿ ವಿಚಾರವೇನು!

ಅಶ್ವತ್ಥಾಮ:—ರಾಜನೇ, ನೀನು ಹೀಗೆ ಹೇಳುವಾಗ, ಶೋಕದ ಹೊರೆಯನ್ನು ಕಡಮೆ ಮಾಡಿಕೊಳ್ಳುವುದು ಯುಕ್ತವೇ ಸರಿ. ಆದರೆ ನಾನು ಬದುಕಿರುವಾಗ, ನಮ್ಮ ತಂದೆಯು ಇತರರಿಂದ ಕೇಶಗ್ರಹಣ ರೂಪವಾದ ಅವಮಾನವನ್ನು ಹೊಂದಿದನು. ಪುತ್ರಾಪೇಕ್ಷೆಯುಳ್ಳವರು ಮಗನ ವಿಷಯದಲ್ಲಿ ಹೇಗೆ ಆಶೆಯುಳ್ಳವರಾಗಿರುವರು.

ಕರ್ಣ:—ಅವಮಾನವನ್ನು ಪರಿಹರಿಸಿಕೊಳ್ಳುವುದಕ್ಕೆ ಕಾರಣಭೂತವಾದ ಶಸ್ತ್ರವನ್ನು ತೊರೆದು, ತಾನೇ ಆ ದುರ್ದಶೆಯನ್ನು ಹೊಂದಿದರೆ. ಇದರಿಂದ ಏನಾಗುವುದು?

ಅಶ್ವತ್ಥಾಮ:—ಅಂಗರಾಜನೇ, ಏನು ಹೇಳಿದೆ? ಯಾರಿಂದ ಏನಾಗುವುದು ಎಂತಲೋ? ಕೇಳು. ಈ ಪಾಂಡವರ ಸೈನ್ಯದಲ್ಲಿ ಯಾರು ಯಾರು ಬಾಹುಬಲವುಳ್ಳವರಾಗಿ ಶಸ್ತ್ರವನ್ನು ಧರಿಸಿರುವರೋ, ಪಾಂಚಾಲವಂಶದಲ್ಲಿ ಗರ್ಭವು ಹೊರಬಿಗೊಂಡು ಮುದುಕರ ವರೆಗೂ, ಯಾರು ಯಾರಿರುವರೋ, ಯಾರು ಯಾರು ಆ ಸಿಂಹ ಕರ್ಮವನ್ನು ಸಾಕ್ಷಿಯಾಗಿ ನೋಡುತ್ತಿದ್ದರೋ, ಯುದ್ಧದಲ್ಲಿ ಸಂಚರಿಸುವವನಿಗೆ ಪ್ರತಿಶಕ್ತಿಗಳಾಗಿ ಯಾರು ಯಾರು ನಿಲ್ಲುವರೋ ಅವರೆಲ್ಲರಿಗೂ ಕುಪಿತನಾದ ನಾನು ಮೃತ್ಯುಸ್ವರೂಪನಾಗುವೆನು. ಮತ್ತು ಎಲೈ, ಪರಶುರಾಮ ಶಿಷ್ಯನಾದ ಕರ್ಣನೇ, ಪೂರ್ವದಲ್ಲಿ ಪರಶುರಾಮನು ಕ್ಷತ್ರಿಯರುಗಳನ್ನು ಸಂಹರಿಸಿ, ಯಾವ ದೇಹದಲ್ಲಿ ರಕ್ತದ ಮಡುವನ್ನು ತುಂಬಿದನೋ, ಇದು ಅದೇ ದೇಹವು; ನನ್ನ ತಂದೆಗೆ ಬಂದಿರುವ ತಿರಸ್ಕಾರವೂ ಕೂಡ ಕ್ಷತ್ರಿಯರಿಂದಲೇ ಅದೇ ವಿಧವಾಗಿ ಬಂದಿರುವುದು. ಆ ಪರಶುರಾಮನಲ್ಲಿದ್ದ ದಿವ್ಯಾಸ್ತ್ರಗಳು ಕೂಡ ನನ್ನಲ್ಲಿಯೂ ಪ್ರಕಾಶಿಸುತ್ತಲಿವೆ. ಆದುದರಿಂದ ಆ ಪರಶುರಾಮನು ಏನು ಮಾಡಿದನೋ, ಕುಪಿತನಾದ ನಾನೂ ಅದೇ ಕೆಲಸವನ್ನು ಮಾಡುವೆನು.

ದುರ್ಯೋಧನ:—ಆಚಾರ್ಯಪುತ್ರನೇ, ಈ ವಿಧವಾದ ಅಸಾಧಾರಣವಾದ ಅಪಮಾನಕ್ಕೂ, ನಿನ್ನ ಪರಾಕ್ರಮಕ್ಕೂ ಇದೇ ಯೋಗ್ಯವಾದದ್ದು.

ಕೃಪ:—ರಾಜನೇ, ದ್ರೋಣಪುತ್ರನು ಯುದ್ಧದ ಹೊಣೆಯನ್ನು ಹೊರುವುದಕ್ಕೆ ನಿಶ್ಚಯ ಮಾಡಿದ್ದಾನೆ. ಆದ್ದರಿಂದ ನೀನು ಇವನನ್ನು ಪರಿಗ್ರಹಿಸಿ, ಮೂರು ಲೋಕವನ್ನೂ ಕೂಡ ನಾಶಮಾಡುವುದಕ್ಕೆ ಸಮರ್ಥನಾಗುವನೆಂದು ನಾನು ತಿಳಿದಿರುತ್ತೇನೆ. ಯುಧಿಷ್ಠಿರನ ಸೈನ್ಯವೆಷ್ಟರದು? ಇವನನ್ನು ಸೇನಾಧಿಪತ್ಯದಲ್ಲಿ ಅಭಿಷೇಕ ಮಾಡು.

ದುರ್ಯೋಧನ:—ತಾವು ಅಪ್ಪಣೆ ಕೊಡಿಸಿದ್ದು ಯುಕ್ತವೇ ಸರಿ. ಆದರೆ ಇದು ಅಂಗರಾಜನಿಗೆ ನಿಶ್ಚಿತವಾಗಿರುವುದು.

ಕೃಪ:—ರಾಜನೇ, ಇಂತಹ ಶೋಕಸಾಗರದಲ್ಲಿ ಮುಳುಗಿರುವ ಇವನನ್ನು ಅಂಗರಾಜನಿಗೋಸ್ಕರ ಉಪೇಕ್ಷೆ ಮಾಡುವುದು ಸರಿಯಲ್ಲ.

ದುರ್ಯೋಧನ:—ಇವನು ಅದೇ ಶತ್ರುಕುಲವನ್ನು ನಾಶಮಾಡಬೇಕು. ಆದ್ದರಿಂದ ಇವನ ಮನಸ್ಸಿಗೆ ವ್ಯಥೆಯಾಗುವುದಿಲ್ಲವೋ?

ಅಶ್ವತ್ಥಾಮ:—ರಾಜನೇ, ಇನ್ನೂ ಯುಕ್ತಾಯುಕ್ತ ವಿಚಾರವೇಕೆ? ಈ ಲೋಕ ವನ್ನು ಕೌರವ, ಪಾಂಡವರು ಇಲ್ಲದಂತೆಯೂ, ವಿನಷ್ಟರಾದ ಸೋಮಕರು ಳ್ಳದ್ದನ್ನಾಗಿಯೂ ಮಾಡುವೆನು. ನೀನು ಸ್ತೋತ್ರಗಳಿಂದ ಪ್ರಯತ್ನ ಪುರಸ್ಸರನಾಗಿ ಎಚ್ಚರಿಸಲ್ಪಡುವಷ್ಟು ಸುಖವಾಗಿ ರಾತ್ರಿ ಎಲ್ಲವೂ ನಿದ್ರೆ ಮಾಡುವಂತೆ ಮಾಡುವೆನು. ಬಾಹುಬಲಶಾಲಿಗಳ ಯುದ್ಧದ ಕಥೆಯನ್ನು ಈ ದಿವಸದಲ್ಲಿ ಮುಗಿಸಿಬಿಡುವೆನು. ರಾಜರುಗಳೆಂಬ ಕಾಡುಗಳಿಂದ ಅತಿ ಭಾರವಾದ ಭೂಮಿಯು ಹೊರೆಯು ಈ ದಿವಸ ಕಳೆದುಹೋಗಲಿ.

ಕರ್ಣ:—ಅಶ್ವತ್ಥಾಮನೇ, ಕೌರವರಹಿತವನ್ನಾಗಿಯೂ, ಪಾಂಡವರಹಿತವನ್ನಾಗಿಯೂ ಲೋಕವನ್ನು ಮಾಡುತ್ತೇನೆಂದು ನಿಶ್ಚಯಿಸುವುದೇನೂ ದುಷ್ಕರ ವಲ್ಲವು. ಈ ಕಾರ್ಯಕ್ಕೆ ಸಮರ್ಥರಾದವರು ಕೌರವ ಸೈನ್ಯದಲ್ಲಿ ಅನೇಕ ರಿರುವರು.

ಅಶ್ವತ್ಥಾಮ:—ಅಂಗರಾಜನೇ, ನಿಜ. ಕೌರವ ಸೈನ್ಯದಲ್ಲಿ ಈ ವಿಷಯದಲ್ಲಿ ಸಮರ್ಥರನೇಕರಿರುವರು. ಆದರೆ ನನಗೆ ದುಃಖವು ಹೆಚ್ಚಿ, ಅದರಿಂದ ಉಂಟಾದ ಕೋಪಾವೇಶದಿಂದ ಹೇಳಿದೆನೇ ಹೊರತು, ವೀರರನ್ನು ತಿರಸ್ಕಾರ ಮಾಡಬೇಕೆಂದು ಹೇಳಲಿಲ್ಲ.

ಕರ್ಣ:—ದುಃಖ ಬಂದರೆ ಕಣ್ಣೀರು ಬಿಡಬೇಕು. ಕೋಪ ಬಂದರೆ ಆಯುಧ ವನ್ನು ಹಿಡಿದುಕೊಂಡು ಯುದ್ಧಕ್ಕೆ ಹೋಗಬೇಕು. ಈ ವಿಧವಾದ ಪ್ರಲಾಪಗಳು ಯೋಗ್ಯವಲ್ಲ.

ಅಶ್ವತ್ಥಾಮ:—(ಕೋಪದಿಂದ) ನೀಚನೇ, ರಾಧಾಗರ್ಭಭಾರಭೂತನೇ, ನೀಚ ಸೂತನೇ, ಅಶ್ವತ್ಥಾಮನಾದ ನನಗೂ ದುಃಖವುಂಟಾದರೆ, ಕಣ್ಣೀರನ್ನು ಬಿಟ್ಟು, ಪ್ರತಿಕ್ರಿಯೆ ಮಾಡಿಕೊಳ್ಳಬೇಕೆಂದು ಉಪದೇಶಿಸುವೆಯಾ! ಶಸ್ತ್ರ ದಿಂದಲ್ಲವೋ? ಗುರುಶಾಪದಿಂದ ಹೀನವಾದ ನಿನ್ನ ಆಯುಧಗಳಂತೆ ನನ್ನ ಆಯುಧಗಳು ಹೀನವಾಗಿವೆಯೋ? ಈಗ ತಾನೇ ಭಯದಿಂದ ಯುದ್ಧ ವನ್ನು ಬಿಟ್ಟು ಓಡಿ ಬಂದವನು ನೀನೋ, ನಾನೋ, ರಾಜರನ್ನು ಹೊಗ

ಳುವ ಕಸಬುಳ್ಳ ಸೂತಕುಲದಲ್ಲಿ ನಿನ್ನ ಹಾಗೆ ನಾನು ಹುಟ್ಟಿದೇನೆಯೋ? ಅಲ್ಪರಾದ ಶತ್ರುಗಳು ಮಾಡಿದ ಅಪರಾಧಕ್ಕೆ ನಾನು ಕಣ್ಣೀರಿಂದ ಪ್ರತಿಕ್ರಿಯೆ ಮಾಡಿಕೊಳ್ಳಬೇಕು. ಅಸ್ತ್ರದಿಂದಲ್ಲ ಅಲ್ಲವೇ?

ಕರ್ಣ:—(ಕೋಪದಿಂದ) ನೀಚ ವಾಚಾಟನೇ, ಶಸ್ತ್ರವನ್ನು ಗ್ರಹಿಸಿರುವನೆಂಬ ಅಹಂಕಾರದಿಂದ ಮೆರೆಯುವ ಹುಡುಗನೇ, ನನ್ನ ಆಯುಧವು ನಿರ್ವೀರ್ಯವಾಗಲೀ, ಸವೀರ್ಯವಾಗಲೀ, ಬಾಹುಶಾಲಿಯಾದ ನಿನ್ನ ತಂದೆಯು ದೃಷ್ಟದ್ಯುಮ್ನನಿಗೆ ಹೆದರಿ, ಆಯುಧವನ್ನು ಬಿಸಾಡಿದಂತೆ ನಾನು ಬಿಟ್ಟಿಲ್ಲ.

ಅಶ್ವತ್ಥಾಮ:—ರಥಕಾರಕುಲಕಳಂಕನೇ, ಆಯುಧವನ್ನು ಬಿಡದ ನೀನು ತಂದೆಯನ್ನು ಧಿಕ್ಕರಿಸುವೆಯಾ? ಮೂರು ಲೋಕದಲ್ಲಿಯೂ ಪ್ರಖ್ಯಾತವಾದ ಬಾಹುಬಲವುಳ್ಳವನಾಗಿ, ಯುದ್ಧದಲ್ಲಿ ಪ್ರತಿ ದಿವಸದಲ್ಲಿಯೂ ಐದು ಸಾವಿರ ಸೈನ್ಯವನ್ನು ಸಂಹರಿಸುವ ಕೆಲಸವನ್ನು ಮಾಡುತ್ತಿದ್ದ ದ್ರೋಣನು ಶೂರನೋ ಅಥವಾ ಹೇಡಿಯೋ ಎಂಬ ಅಂಶವನ್ನು ಭೂಮಿಯೇ ಬಲ್ಲದು. ಶಸ್ತ್ರಪರಿತ್ಯಾಗವನ್ನು ಹೇಗೆ ಮಾಡಿದನೆಂಬ ಅಂಶಕ್ಕೆ ಸತ್ಯವ್ರತಧಾರಿಯಾದ ಧರ್ಮರಾಜನೇ ಸಾಕ್ಷಿಯಾಗಿರುವನು. ರಣಹೇಡಿಯಾದ ನೀನು ಆಗ ಎಲ್ಲಿದ್ದೆ?

ಕರ್ಣ:—(ನಕ್ಕು) ನಾನು ಹೀಗೆ ಹೇಳಿಯೇ ಇಲ್ಲ. ಪರಾಕ್ರಮಕ್ಕೆ ಸ್ಥಾನಭೂತನಾದ ನಿನ್ನ ತಂದೆಯನ್ನು ಸ್ಮರಿಸಿಕೊಂಡು, ನನಗೆ ಬಹಳ ಸಂತಸವುಂಟಾಗುತ್ತದೆ. ಮತ್ತು ಮೂರ್ಖನೇ, ಆಯುಧವನ್ನು ಬಿಟ್ಟಾಗ್ಯೂ, ಆಯುಧವಿಲ್ಲದೇನೇ ಆಯುಧವನ್ನು ಧರಿಸಿರುವ ಶತ್ರುಗಳನ್ನು ತಡೆಯುವುದಿಲ್ಲವೇ? ನಿನ್ನ ತಂದೆಯು ಹೆಂಗಸಿನಂತೆ ರಾಜರುಗಳ ಎದುರಿಗೆ ತನ್ನ ತಲೆಯನ್ನು ಛೇದಿಸುತ್ತಿದ್ದಾಗ್ಯೂ ಸುಮ್ಮನೆ ಇದ್ದನಲ್ಲಾ.

ಅಶ್ವತ್ಥಾಮ:—(ಕೋಪದಿಂದ) ದುರಾತ್ಮನೇ, ರಾಜವಾಲ್ಲಭ್ಯವಿರುವುದರಿಂದ ಹೆಮ್ಮೆಯುಳ್ಳವನೇ, ಅಸಂಬದ್ಧಪ್ರಲಾಪಿಯೇ, ನನ್ನ ತಂದೆಯು ದೃಷ್ಟದ್ಯುಮ್ನನ ಕೈಯನ್ನು ದುಃಖದಿಂದಲೋ ಅಥವಾ ಭಯದಿಂದಲೋ ಹೇಗೋ ನಿಷೇಧ ಮಾಡಲಿಲ್ಲ. ಈಗ ಭುಜಬಲದ ಕೊಬ್ಬಿನಿಂದ ಊದಿಹೋಗಿರುವ ನಿನ್ನ ತಲೆಯ ಮೇಲೆ ಇಗೋ ಈ ನನ್ನ ಎಡಗಾಲನ್ನಿಡುತ್ತೇನೆ. ತಪ್ಪಿಸಿಕೋ? (ಎಂದು ನಿಲುವನು.)

(ಕೃಪ, ದುರ್ಯೋಧನ ಇಬ್ಬರೂ) ಸೈರಿಸು, ಸೈರಿಸು (ಎಂದು ತಡೆಯುವರು.)

ಕರ್ಣ:—(ಕೋಪದಿಂದ ಎದ್ದು ಕತ್ತಿಯನ್ನು ಹಿಡಿದು) ದುರಾತ್ಮನೇ, ನೀಚ ಬ್ರಾಹ್ಮಣನೇ, ಆತ್ಮಶ್ಲಾಘಿಯೇ, ನಿನ್ನ ಜಾತಿಯನ್ನು ನೋಡಿದರೆ ಕೊಲ್ಲುವುದಕ್ಕಿಲ್ಲ. ಕಾಲನ್ನು ಎತ್ತಿದ್ದೀಯೆ. ಆ ಕಾಲನ್ನು ಈ ಖಡ್ಗದಿಂದ ಕತ್ತರಿಸುತ್ತೇನೆ.

ಅಶ್ವತ್ಥಾಮ:—ಎಲೈ ಮೂಢನೇ, ಜಾತಿಯಿಂದ ನಾನು ಕೊಲ್ಲುವುದಕ್ಕೆ ಯೋಗ್ಯನಲ್ಲವೋ! ಇಗೋ ಆ ಜಾತಿಯನ್ನು ಬಿಟ್ಟೆನು. ಈಗ ಅರ್ಜುನನ ಪ್ರತಿಜ್ಞೆಯನ್ನು ಸುಳ್ಳುಮಾಡುತ್ತೇನೆ. ಶಸ್ತ್ರವನ್ನು ಗ್ರಹಿಸು. ಇಲ್ಲವಾದರೆ ತಲೆಬಾಗಿ ಕೈಮುಗಿದುಕೋ!

(ಇಬ್ಬರೂ ಕತ್ತಿಯನ್ನು ಹಿಡಿದು ಒಬ್ಬರಿಗೊಬ್ಬರು ಹೊಡೆಯುವುದಕ್ಕೆ ಆರಂಭಿಸುವರು.)

ದುರ್ಯೋಧನ:—(ಅಶ್ವತ್ಥಾಮನನ್ನು ತಡೆದು) ಆಚಾರ್ಯ ಪುತ್ರನೇ, ಸಾಕು, ಸುಮ್ಮನಿರು.

ಕೃಪ:—(ಕರ್ಣನನ್ನು ತಡೆದು) ಸೂತಪುತ್ರನೇ, ಸಾಕು ಸುಮ್ಮನಿರು.

ಅಶ್ವತ್ಥಾಮ:—ಮಾವನೇ, ಏಕೆ ತಡೆಯುವೆ ಬಿಡು. ತಂದೆಯನ್ನು ದೂಷಿಸುತ್ತಾ, ಈ ಪಾಪನು ದೃಷ್ಟದ್ಯುಮ್ನನ ಕಡೆಯವನೇ ಆಗಿರುವನು.

ಕರ್ಣ:—ರಾಜನೇ, ಇವನನ್ನು ಬಿಡು ಬಿಡು. ನಾಶಮಾಡಿಬಿಡುತ್ತೇನೆ.

ಅಶ್ವತ್ಥಾಮ:—ಬಿಡು ಬಿಡು, ನನ್ನ ಎದೆಯಿಂದ ಉಕ್ಕಿ ಪ್ರಾಣವನ್ನು ಕಳೆಯುವೆನು. ರಾಜನೇ, ಸ್ನೇಹದಿಂದಲೋ ಅಥವಾ ಕೆಲಸದಿಂದಲೋ ತಂದೆಯನ್ನು ಧಿಕ್ಕರಿಸುವ ಈ ದುರಾತ್ಮನನ್ನು ನೀನು ರಕ್ಷಿಸುವುದಕ್ಕೆ ಅಪೇಕ್ಷಿಸುತ್ತೀಯೆ. ಇದೆರಡೂ ವ್ಯರ್ಥವು. ನೋಡು, ಈ ಪಾಪಿಯು ಗುಣಶಾಲಿಯಾದ ನಿನಗೆ ಹೇಗೆ ಸ್ನೇಹಿತನು! ಸೂತವಂಶದವನು ಚಂದ್ರವಂಶದಲ್ಲಿ ಹುಟ್ಟಿದ ನಿನಗೆ ಹೇಗೆ ಸಹಾಯಕನು? ಇವನು ಹೇಗೆ ತಾನೇ ಅರ್ಜುನನನ್ನು ಸಂಹರಿಸುವನು? ನೋಡುತ್ತಿರು, ಬಿಡು. ಈ ಕರ್ಣನನ್ನೂ, ಅರ್ಜುನನನ್ನೂ ಇಬ್ಬರನ್ನೂ ಇಲ್ಲದಂತೆ ಮಾಡುತ್ತೇನೆ. (ಕತ್ತಿಯನ್ನು ಬೀಸುವನು.)

ಕರ್ಣ:—(ಕತ್ತಿಯನ್ನು ಎತ್ತಿ) ಎಲೈ ವ್ಯರ್ಥ ಪ್ರಲಾಪಿಯೇ, ಇನ್ನು ನೀನು ಉಳಿಯುವುದಿಲ್ಲ. ದೊರೆಯೇ ಬಿಡು, ಧೀರರಾದವರು ಅಸಡ್ಡೆಯಿಂದ ಮೂಢರಾದವರನ್ನು ಹೆದರಿಸದೆ ಸುಮ್ಮನೆ ಬಿಟ್ಟರೆ, ಹೀಗೆ ಹರಟುವರು. (ಹೊಡೆಯುವುದಕ್ಕೆ ಹೋಗುವನು.)

ದುರ್ಯೋಧನ:—ಕರ್ಣನೇ, ಗುರುಪುತ್ರನೇ, ಏನಿದು? ನಿಮ್ಮ ವ್ಯಾಮೋಹವು.

ಕೃಪ:—ವತ್ಸನೇ, ಆರಂಭಿಸಿದ್ದೇನು? ಮಾಡುವ ಕೆಲಸವೇನು? ಇದೇನು ವ್ಯಾಮೋಹ! ಈ ಕಾಲದಲ್ಲಿ ಸ್ವಬಲ ವ್ಯಸನವು ರಾಜ್ಯ ಕುಲದಲ್ಲಿ ನಿಮ್ಮಿಂದಲೇ ಉಂಟಾಗುತ್ತಿರುವುದು ವಿರುದ್ಧವಾದ ಮಾರ್ಗವು.

ಅಶ್ವತ್ಥಾಮ:—ಮಾವನೇ, ಹೀನವಾಗಿ ಮಾತಾಡುವ ರಥಕಾರಕುಲಕಳಂಕನ ದರ್ಪವನ್ನು ಮುರಿಯುವುದಕ್ಕೆ ಅವಕಾಶ ಕೊಡುವುದಿಲ್ಲವೇ!

ಕೃಪ:—ವತ್ಸನೇ, ಇದು ವಿರೋಧಕ್ಕೆ ಕಾಲವಲ್ಲ.

ಅಶ್ವತ್ಥಾಮ:—ಮಾವನೇ, ಹಾಗಾದರೆ ಈ ಸೂತನು ಎಲ್ಲಿಯವರೆಗೆ ಶತ್ರುಗಳ ಬಾಣಗಳಿಂದ ಸಾಯುವುದಿಲ್ಲವೋ ಅಲ್ಲಿಯವರೆಗೂ, ಯುದ್ಧದಲ್ಲಿ ನನಗಿಷ್ಟವಾದಾಗ್ಯೂ ಅಸ್ತ್ರವನ್ನು ಹಿಡಿಯುವುದಿಲ್ಲ. ಇಗೋ ತ್ಯಾಗ ಮಾಡುತ್ತೇನೆ. ಇವನು ಸೇನಾಪತಿಯಾಗಿ ಕುಪಿತರಾದ ಭೀಮಾರ್ಜುನರುಗಳ ಭಯವು ಉಂಟಾದರೆ, ರಾಜನು ಇವನನ್ನು ಯುದ್ಧದಲ್ಲಿ ಪ್ರಿಯಮಿತ್ರನೆಂದು ತಿಳಿದುಕೊಳ್ಳುತ್ತಾನೆ (ಎಂದು ಅಸ್ತ್ರವನ್ನು ಬಿಟ್ಟುಬಿಡುವನು.)

ಕರ್ಣ:—(ನಕ್ಕು) ನಿಮ್ಮಂಥವರು ಆಯುಧವನ್ನು ಬಿಡದೇ ಇದ್ದರೂ, ಬಿಟ್ಟಂತೆಯೇ. ನಾನು ಎಲ್ಲಿಯವರೆಗೂ ಆಯುಧವನ್ನು ಧರಿಸುತ್ತೇನೆಯೋ ಅಲ್ಲಿಯವರೆಗೆ ಇತರರು ಆಯುಧಗಳನ್ನು ಹಿಡಿದು ತಾನೇ ಏನು! ನನ್ನ ಅಸ್ತ್ರಗಳಿಂದ ಆಗದೇ ಇರುವುದು ಇನ್ಯಾತರಿಂದಾಗುವುದು!

(ತೆರೆಯಲ್ಲಿ) ಎಲೈ ದುರಾತ್ಮನೇ, ದ್ರೌಪದಿಯ ಕೇಶಾಂಬರಗಳನ್ನು ಹಿಡಿದ ಪಾತಕಿಯೇ, ನೀಚ ಧಾರ್ತರಾಷ್ಟ್ರನೇ, ಬಹುಕಾಲಕ್ಕೆ ಯುದ್ಧದಲ್ಲಿ ಸಿಕ್ಕಿರುವೆ. ಕ್ಷುದ್ರಪಶುವೇ, ಈಗ ಎಲ್ಲಿ ಹೋಗುವಿ? ಮತ್ತು ಎಲೈ ಕರ್ಣ, ದುರ್ಯೋಧನ, ಶಕುನಿ ಮೊದಲಾದ ಮಹಾ ರಥಿಕರಾದ ಧನುರ್ಧಾರಿಗಳಾದ ಪಾಂಡವ ದ್ವೇಷಿಗಳಿರಾ! ನೀವುಗಳೆಲ್ಲರೂ ಕೇಳಿರಿ ಯಾವ ನರ

ಪಶುವು ದ್ರುಪದರಾಜ ನಂದಿನಿಯಾದ ಪಾಂಚಾಲಿಯ ಕೇಶವನ್ನು ಹಿಡಿದೆಳೆದನೋ, ಕುರುರಾಜರುಗಳ ಎದುರಿಗೆ ಅವಳ ವಸ್ತ್ರವನ್ನು ಎಳೆದನೋ, ಯಾವನ ಎದೆಯ ರಕ್ತವನ್ನು ಪಾನಮಾಡುತ್ತೇನೆಂದು ನಾನು ಪ್ರತಿಜ್ಞೆ ಮಾಡಿದೆನೋ, ಇಗೋ ಅವನು ನನ್ನ ಭುಜಪಂಜರದಲ್ಲಿ ಸಿಕ್ಕಿಬಿದ್ದಿರುವನು. ಕೌರವನು ಕಾಪಾಡಲಿ. (ಎಲ್ಲರೂ ಕೇಳುವರು.)

ಅಶ್ವತ್ಥಾಮ:—ಅಂಗರಾಜನೇ, ಸೇನಾಪತಿಯೇ, ಭುಜಬಲದಿಂದ ಸಮಸ್ತ ಲೋಕವನ್ನೂ ಕಾಪಾಡತಕ್ಕವನೇ, ಪರಶುರಾಮನ ಶಿಷ್ಯನೇ, ದ್ರೋಣಾಪಹಾಸಿಯೇ, ರಾಜನ ಪ್ರಿಯಮಿತ್ರನೇ. ನಾನು ಆಯುಧವನ್ನು ಧರಿಸಿರುವಾಗ, ಇನ್ಯಾರಾಯುಧವೂ ಬೇಕಿಲ್ಲೆಂದು ಈಗತಾನೇ ಹೇಳಿದೆಯಲ್ಲಾ, ಭೀಮನ ಕೈಗೆ ಸಿಕ್ಕಿರುವ ದುಶ್ಶಾಸನನನ್ನು ಕಾಪಾಡು.

ಕರ್ಣ:—ನಾನು ಬದುಕಿರುವಾಗ ಯುವರಾಜನ ನೆರಳನ್ನು ತಾನೇ ಆಕ್ರಮಿಸುವುದಕ್ಕೆ ತಾನೇ ಭೀಮನಿಗೆ ಶಕ್ತಿಯುಂಟೇ ? ಯುವರಾಜನೇ, ಹೆದರಬೇಡ, ಹೆದರಬೇಡ. ಇಗೋ ಬಂದೆನು (ಎಂದು ಹೋಗುವನು.)

ಅಶ್ವತ್ಥಾಮ:—ರಾಜನೇ, ದುರ್ಯೋಧನನೇ, ಭೀಷ್ಮದ್ರೋಣರಿಂದ ರಹಿತವಾದ ಕೌರವ ಸೈನ್ಯವನ್ನು ಸಂಹರಿಸುತ್ತಿರುವ ಭೀಮಾರ್ಜುನರನ್ನು ಕರ್ಣನಾಗಲೀ, ಅವನಂತಿರುವ ಇತರರಾಗಲೀ ತಡೆಯುವುದಕ್ಕೆ ಸಮರ್ಥನಾಗುವುದಿಲ್ಲ. ನೀನೇ ಸಹಾಯಕ್ಕೆ ಹೋಗು.

ದುರ್ಯೋಧನ:—ಆಯುಧಪಾಣಿಯಾಗಿ ನಾನು ಜೀವಿಸುತ್ತಿರುವಾಗ, ದುರಾತ್ಮನಾದ ಭೀಮನಾಗಲೀ, ಇತರರಾಗಲೀ ನನ್ನ ನೆರಳನ್ನಾದರೂ ಆಕ್ರಮಿಸುವುದಕ್ಕೆ ಶಕ್ತನಾಗುವನೇ? ವತ್ಸ ದುಶ್ಶಾಸನ ಹೆದರಬೇಡ, ಹೆದರಬೇಡ. ರಥ, ರಥ. (ಎಂದು ಹೊರಟು ಹೋಗುವನು.)

ಅಶ್ವತ್ಥಾಮ:—(ಮುಂದೆ ನೋಡಿ) ಹಾಹಾ, ಅಯ್ಯೋ ಕಷ್ಟ! ಕಷ್ಟ! ಈ ಅರ್ಜುನನು ತನ್ನ ಅಣ್ಣನಾದ ಭೀಮನ ಪ್ರತಿಜ್ಞೆಗೆ ಭಂಗ ಬರುವುದೆಂಬ ಹೆದರಿಕೆಯಿಂದ ಕರ್ಣ-ದುರ್ಯೋಧನರನ್ನು ಬಾಣವರ್ಷಗಳಿಂದ ಏಕಕಾಲದಲ್ಲಿ ಹೊಡೆಯುತ್ತಲಿದ್ದಾನೆ. ಕಷ್ಟ! ಕಷ್ಟ! ಸರ್ವಕ್ಷತ್ರಕಾರರಲ್ಲಿಯೂ ದುಶ್ಶಾಸನನ ರಕ್ತವನ್ನು ಭೀಮನು ಕುಡಿದೇ ಕುಡಿವನು. ದುರ್ಯೋಧನನ

ತಮ್ಮನ ಈ ವಿಪತ್ತನ್ನು ನಾನು ನೋಡಿ ಸಹಿಸಲಾರೆ! ಮಾವನೇ, ನನ್ನ ಪ್ರತಿಜ್ಞೆಯು ಹಾಳಾಗಲಿ. ಆಯುಧ! ಆಯುಧ! ಸತ್ಯಕ್ಕಿಂತಲೂ ಸುಳ್ಳೇ ಒಳ್ಳೇದು. ನನಗೆ ಸ್ವರ್ಗವೂ ಬೇಡ. ನರಕವೇ ಇರಲಿ. ಭೀಮನಿಂದ ದುಶ್ಶಾಸನನನ್ನು ಕಾಪಾಡುವುದಕ್ಕೆ ನಾನು ಆಯುಧವನ್ನು ಬಿಟ್ಟರೂ ಬಿಡಲಿಲ್ಲ.

(ತೆರೆಯಲ್ಲಿ) ಮಹಾತ್ಮನಾದ ಭಾರದ್ವಾಜ ಪುತ್ರನೇ, ಹಿಂದೆ ಯಾವಾಗಲೂ ಸತ್ಯಕ್ಕೆ ತಪ್ಪದಿರುವ ನೀನು ಈಗ ಸತ್ಯಕ್ಕೆ ತಪ್ಪಬಾರದು.

ಕೃಪ:—ವತ್ಸ, ಅಶರೀರವಾಕ್ಕು ನಿನ್ನನ್ನು ಆ ಸತ್ಯದಿಂದ ಕಾಪಾಡುತ್ತದೆ.

ಅಶ್ವತ್ಥಾಮ:—ಅಶರೀರವಾಕ್ಕಿಗೂ ನಾನು ಯುದ್ಧಕ್ಕೆ ಹೋಗುವುದು ಇಷ್ಟವಿಲ್ಲವೆ? ದೇವತೆಗಳೂ ಕೂಡ ಪಾಂಡವರಲ್ಲಿ ಪಕ್ಷಪಾತವುಳ್ಳವರು. ಸರ್ವಪ್ರಕಾರದಲ್ಲಿಯೂ ದುಶ್ಶಾಸನನ ರಕ್ತವು ಭೀಮನಿಂದ ಪಾನಮಾಡಲ್ಪಟ್ಟಿತು. ಕಷ್ಟ! ಕಷ್ಟ! ದುಶ್ಶಾಸನನ ರಕ್ತವು ಕುಡಿಯಲ್ಪಟ್ಟಾಗಲೂ ಸುಮ್ಮನೇ ಇರುವ ನಾನು ದುರ್ಯೋಧನನಿಗೆ ಯುದ್ಧದಲ್ಲಿ ಇನ್ನಾವ ಪ್ರಿಯವನ್ನುಂಟುಮಾಡುವೆನು? ಮಾತುಲನೇ, ಕರ್ಣನ ಮೇಲಿನ ಕೋಪದಿಂದ ಅನಿಷ್ಟ ಕೆಲಸವನ್ನು ಮಾಡಿದೆನು. ನೀನಾದರೂ ರಾಜನ ಪಕ್ಷದಲ್ಲಿರು.

ಕೃಪ:—ನಾನು ಹೊರಡುವೆನು. ಶಿಬಿರ ಸ್ಥಾನಕ್ಕೆ ಹೋಗು. (ಎಂದು ಹೊರಟು ಹೋಗುವರು.

ಇತಿ ತೃತೀಯಾಂಕ.

## ಚತುರ್ಥಾಂಕಂ

(ಯುದ್ಧದಲ್ಲಿ ಪ್ರಹಾರದಿಂದ ಮೂರ್ಛೆಗೊಂಡಿರುವ ದುರ್ಯೋಧನನನ್ನು ರಥದಲ್ಲಿ ಕೂರಿಸಿಕೊಂಡು, ಬಹಳ ಭಯದಿಂದ ಸಾರಥಿಯು ಬರುವನು.)

(ತೆರೆಯಲ್ಲಿ) ಎಲೈ ಬಾಹುಬಲದ ಗರ್ವದಿಂದ ಯುದ್ಧದಲ್ಲಿ ಉತ್ಸಾಹವುಳ್ಳ

ಕೌರವ ಪಕ್ಷಪಾತಿಗಳಾದ ರಾಜರುಗಳಿರಾ, ಪಾನಮಾಡಿ ಉಳಿದ ದುಶ್ಶಾಸನನ ರಕ್ತವನ್ನು ಶರೀರದಲ್ಲೆಲ್ಲಾ ಲೇಪಿಸಿಕೊಂಡು, ವಿಕಾರ ವೇಷದಿಂದ ಓಡುತ್ತಿರುವ ಭೀಮನನ್ನು ನೋಡಿ, ಕೈಯಲ್ಲಿರುವ ಆಯುಧಗಳು ಬಿದ್ದು ಹೋಗುವುದನ್ನೂ ಕಾಣದೆ, ಓಡುತ್ತಿರುವ ಸೈನ್ಯಗಳನ್ನು ಸ್ಥಿರಪಡಿಸಿರಿ.

ಸಾರಥಿ:—(ನೋಡಿ)ಬಿಳಿಯ ಚಾಮರಗಳಿಂದಲೂ, ಚಿನ್ನದ ಕಮಂಡಲುವಿನ ಚಿಹ್ನೆಯುಳ್ಳ ಧ್ವಜದಿಂದಲೂ, ಸತ್ತುಬಿದ್ದಿರುವ ಗಜತುರಗಪದಾತಿಗಳ ಶರೀರಗಳಿಂದ ಉಬ್ಬು-ತಗ್ಗಾದ ಭೂಮಿಗಳಲ್ಲಿ ಧ್ವನಿಮಾಡುತ್ತಿರುವ ಘಂಟೆಗಳ ಸಮೂಹದಿಂದಲೂ ಕೂಡಿರುವ ರಥದಲ್ಲಿ ಕುಳಿತು, ಶತ್ರುಗಳ ಸೈನ್ಯಗಳೆಲ್ಲವನ್ನೂ ಬಾಣವರ್ಷಗಳಿಂದ ಸ್ತಬ್ಧರನ್ನಾಗಿ ಮಾಡುತ್ತಾ, ತನ್ನ ಸೈನ್ಯವನ್ನು ಸಮಾಧಾನಗೊಳಿಸುತ್ತಾ, ಕೃಪಾಚಾರ್ಯನು ಅರ್ಜುನನೊಡನೆ ಯುದ್ಧಕ್ಕೆ ತೊಡಗಿರುವ ಅಂಗರಾಜನ ಸಹಾಯಕ್ಕಾಗಿ ಬರುತ್ತಿರುವನು. ಆಹಾ! ನಮ್ಮ ಸೈನ್ಯಕ್ಕೆ ಅವಲಂಬನವು ದೊರೆಯಿತು.

(ತೆರೆಯಲ್ಲಿ) ಕೈಯಲ್ಲಿ ಹಿಡಿದಿರುವ ತೋಮರ, ಧನುಸ್ಸು, ಕತ್ತಿ, ಶಕ್ತಿ ಇವುಗಳನ್ನು ಭಯದಿಂದ ಬೀಳಿಸುತ್ತಾ ಓಡುವ ಎಲೈ ಕೌರವ ಸೈನಿಕರುಗಳಿರಾ, ಮತ್ತು ಪಾಂಡವ ಪಕ್ಷಪಾತಿಗಳಿರಾ! ಹೆದರಬೇಡಿರಿ. ಇಗೋ, ನಾನು ದುಶ್ಶಾಸನನನ್ನು ಕೊಂದು, ಅವನ ವಿಶಾಲವಾದ ಎದೆಯಲ್ಲಿದ್ದ ರಕ್ತವನ್ನು ಕುಡಿದು ಮದದಿಂದ ಬರುತ್ತಿದ್ದೇನೆ. ನನ್ನ ಪ್ರತಿಜ್ಞಾ ಮಹೋತ್ಸವವು ಸ್ವಲ್ಪವೇ ಉಳಿದಿರುವುದು. ನಾನು ಕೌರವನ ದ್ಯೂತನಿರ್ಜಿತನಾದ ದಾಸನು, ಪಾಂಡವರಲ್ಲಿ ಮಧ್ಯಮನಾದ ಭೀಮಸೇನನು. ನಿಮ್ಮೆಲ್ಲರನ್ನೂ ಸಾಕ್ಷಿಯನ್ನಾಗಿ ಮಾಡಿ ಹೇಳುತ್ತೇನೆ, ಕೇಳಿರಿ. ಮಹಾ ಮಾನಿಯಾಗಿ ಬಿಲ್ಲನ್ನು ಧರಿಸಿ, ಯುದ್ಧದಲ್ಲಿ ನಿಂತಿದ್ದ ದುರ್ಯೋಧನನ ಮುಂದುಗಡೆಯಲ್ಲಿಯೇ ಕುರುಬಾಂಧವರುಗಳ ಎದುರಿಗೆ ಕರ್ಣನೂ, ಶಲ್ಯನೂ ನೋಡುತ್ತಿರುವಾಗಲೇ ಪಾಂಡವ ಪತ್ನಿಯಾದ ದ್ರೌಪದಿಯ ಕೇಶಾಂಬರಗಳನ್ನು ಎಳೆದ ದುಶ್ಶಾಸನನ ಪ್ರಾಣವನ್ನು ಇರುವಾಗಲೇ ತೀಕ್ಷ್ಣವಾದ ಉಗುರುಗಳಿಂದ ಅವನ ಎದೆಯನ್ನು ಬಗೆದು, ಬಿಸಿಬಿಸಿಯಾದ ರಕ್ತವನ್ನು ಈಗ ಪಾನಮಾಡಿದೇನೆ.

**ಸಾರಥಿ:**—(ಭಯದಿಂದ) ದುರಾತ್ಮನಾದ ಭೀಮನು ಸಮೀಪಕ್ಕೆ ಬಂದನಲ್ಲಾ! ಇನ್ನೂ ನಮ್ಮ ಮಹಾರಾಜನು ಎಚ್ಚರಗೊಳ್ಳಲಿಲ್ಲ. ರಥವನ್ನು ದೂರವಾಗಿ ತೆಗೆದುಕೊಂಡು ಹೋಗುತ್ತೇನೆ. ಒಂದು ವೇಳೆ ದುಶ್ಶಾಸನನಲ್ಲಿ ಮಾಡಿದ ಹಾಗೆ ಈ ದುಷ್ಟನು ಈ ಮಹಾರಾಜನಲ್ಲಿಯೂ ಕೆಟ್ಟದ್ದನ್ನು ಮಾಡಿಯಾನು. (ಬಹು ಜಾಗ್ರತೆಯಾಗಿ ಓಡಿಸಿ ನೋಡಿ) ಇಲ್ಲಿ ಈ ಕೊಳದ ಸಮೀಪದಲ್ಲಿ ಕೊಳದಲ್ಲಿರುವ ತಾವರೆಗಳ ಮೇಲೆ ಬೀಸುವ ವಾಸನೆಯುಳ್ಳದ್ದಾಗಿಯೂ, ಶೀತಲವಾಗಿಯೂ ಇರುವ ಗಾಳಿಯು ಬೀಸುತ್ತಲಿದೆ. ಎಳೆದಾದ ಚಿಗುರುಗಳಿಂದ ಕೂಡಿರುವ ಈ ಆಲದ ಮರವು ಯುದ್ಧದಲ್ಲಿ ಬಳಲಿದ ವೀರಜನರಿಗೆ ವಿಶ್ರಾಂತಿಯನ್ನು ಹೊಂದುವುದಕ್ಕೆ ಯೋಗ್ಯವಾದ ಭೂಮಿಯಾಗಿದೆ. ಇಲ್ಲಿ ಆಯಾಸವು ದೇವೀ ಬೀಸಣಿಗೆಯಿಂದ ಬೀಸಿದಂತೆ ಮಂದವಾಗಿಯೂ, ಪರಿಮಳವುಳ್ಳದ್ದಾಗಿಯೂ ಬೀಸುವ ಗಾಳಿಯಿಂದ ನಮ್ಮ ಮಹಾರಾಜನ ಆಯಾಸವೆಲ್ಲವೂ ಹೋಗುವುದು. ಯುದ್ಧದಲ್ಲಿ ಧ್ವಜವು ಮುರಿದುಹೋಗಿರುವುದರಿಂದ, ಮರದ ಕೆಳಕ್ಕೆ ಹೋಗುವುದಕ್ಕೆ ತೊಂದರೆಯೇನೂ ತೋರುವುದಿಲ್ಲ. (ಪ್ರವೇಶಿಸಿ) ಯಾರಲ್ಲಿ! ಏನು ಪರಿಜನರು ಕಾಣುವುದಿಲ್ಲ. ಆ ಭೀಮನನ್ನು ನೋಡಿ ನಮ್ಮ ಮಹಾರಾಜನು ಮೂರ್ಛಿತನಾಗಿರುವುದನ್ನೂ ನೋಡಿ, ಪರಿಜನರೆಲ್ಲರೂ ಸಿಬಿರಕ್ಕೆ ಹೋಗಿರಬೇಕು. ಕಷ್ಟ! ಕಷ್ಟ! ದ್ರೋಣಾಚಾರ್ಯನು ಅಭಯವನ್ನು ಕೊಟ್ಟಿದ್ದೂ ಕೂಡ ಅರ್ಜುನನಿಂದ ಸಿಂಧುರಾಜನನ್ನು ಕಾಪಾಡದೇ ಹೋದನು. ಭೀಮಸೇನನು ಜಿಂಕೆಯ ಮರಿಯನ್ನು ಹಿಡಿದುಕೊಳ್ಳುವಂತೆ ದುಶ್ಶಾಸನನನ್ನು ಹಿಡಿದುಕೊಂಡು, ಬಹು ಕ್ರೂರಕರ್ಮವನ್ನು ಮಾಡಿದನು. ಕುರುಕುಲ ವಿಮುಖವಾದ ದೈವವು ಯುದ್ಧದಲ್ಲಿ ಶತ್ರುಗಳ ಅಸಾಧ್ಯವಾದ ಪ್ರತಿಜ್ಞೆಯನ್ನೂ ಕೂಡ ಸುಲಭವಾಗಿ ಪೂರೈಸುತ್ತಲಿದೆ. ಇಷ್ಟಾದರೂ ದೈವಕ್ಕಿನ್ನೂ ತೃಪ್ತಿಯಿಲ್ಲ. ಕಷ್ಟ! ಕಷ್ಟ! ಮದಿಸಿದ ಆನೆಯು ಕಾಡನ್ನೆಲ್ಲವನ್ನೂ ಮುರಿದು, ಒಂದು ಮರ ಮಾತ್ರ ಉಳಿಸಿರುವಂತೆ ಈ ವಂಶದಲ್ಲಿ ಸಕಲ ಕುಮಾರರೂ ಹತರಾಗಿ, ಮಹಾರಾಜನೇ, ನೀನೊಬ್ಬ ಉಳಿದಿರುತ್ತೀಯೆ. ದೈವವು ನಿನ್ನನ್ನೂ ಕಟಾಕ್ಷದಿಂದ ನೋಡುತ್ತಿದೆ. ಭರತ

ಕುಲ ವಿಮುಖವಾದ ಹಾಳು ವಿಧಿಯೇ, ಗದಾಪಾಣಿಯಾಗಿ ಸ್ವಲ್ಪವೂ ಘಾಯ ಹೊಂದದೆ ಸಂಶಯ ಪಡೆದ ಹಾಗೆಯೇ ಭೀಮಸೇನನ ಪ್ರತಿಜ್ಞೆಯನ್ನೂ ಕೂಡ ನೀನು ಪೂರ್ತಿಮಾಡಿಬಿಡುವೆಯಾ?

ದುರ್ಯೋಧನ:—(ಸ್ವಲ್ಪ ಸ್ವಲ್ಪವಾಗಿ ಜ್ಞಾನವನ್ನು ಹೊಂದಿ) ದುರ್ಯೋಧನನಾದ ನಾನು ಬದುಕಿರುವಾಗ, ದುರಾತ್ಮನಾದ, ನೀಚನಾದ ಭೀಮನಿಗೆ ಪ್ರತಿಜ್ಞೆಯನ್ನು ಪೂರ್ತಿಮಾಡಿಕೊಳ್ಳುವುದಕ್ಕೆ ಶಕ್ತಿಯಿದೆಯೇ? ವತ್ಸ, ದುಶ್ಯಾಸನ ಹೆದರಬೇಡ, ಹೆದರಬೇಡ, ಇಗೋ ನಾನು ಬಂದೆನು. ಸಾರಥಿಯೇ, ವತ್ಸನ ಸಮೀಪಕ್ಕೆ ರಥವನ್ನು ಬಿಡು.

ಸಾರಥಿ:—ಆಯುಷ್ಮಂತನೇ, ನಿನ್ನ ಕುದುರೆಗಳು ರಥವನ್ನು ಎಳೆಯುವುದಕ್ಕೆ ಅಸಮರ್ಥಗಳಾಗಿವೆ. (ತನ್ನಲ್ಲಿ ತಾನು) ನಾನೂ ಕೂಡ ನನ್ನ ಮನೋರಥವನ್ನು ಪೂರ್ತಿಮಾಡಿಕೊಳ್ಳುವುದಕ್ಕೆ ಹಾಗೇನೆ.

ದುರ್ಯೋಧನ:—(ಗರ್ವದಿಂದ ರಥದಿಂದಿಳಿದು) ರಥವನ್ನು ಕಾಯುವುದೇಕೆ?

ಸಾರಥಿ:—(ಆಶ್ಚರ್ಯದಿಂದಲೂ, ಕರುಣೆಯಿಂದಲೂ) ಆಯುಷ್ಮಂತನೇ, ಸೈರಿಸು, ಸೈರಿಸು. ಈ ವಿಧವಾದ ಸ್ವಾಮಿತ್ವವೇಕೆ?

ದುರ್ಯೋಧನ:—ಏ ಸಾರಥಿಯೇ, ರಥವೇಕೆ? ಶತ್ರುಗಳ ಸಂದಣಿಯಲ್ಲಿ ನಿರ್ಭಯವಾಗಿ ಸಂಚರಿಸುವ ಸ್ವಭಾವವುಳ್ಳ ದುರ್ಯೋಧನನಲ್ಲವೇ ನಾನು?

ಸಾರಥಿ:—ಅದಕ್ಕೇನು ಸಂದೇಹ?

ದುರ್ಯೋಧನ:—ಹಾಗಾದರೆ ಏಕೆ ಹೀಗೆ ಮಾತನಾಡುವಿ? ಈ ಪಾಪಿಯಾದಂಥ ಭೀಮನು ಆಯುಧವನ್ನು ಕೈಯಲ್ಲಿ ಧರಿಸಿ, ನನ್ನ ಎದುರಿಗೆ ಸ್ವಭಾವದಿಂದಲೇ ಉದ್ಧತನಾದ ಬಾಲನ ವಿಷಯದಲ್ಲಿ ಪಾಪವನ್ನು ಮಾಡಲು ಉದ್ಯೋಗಿಸಿರುತ್ತಾನೆ. ಆ ವಿಷಯದಲ್ಲಿ ಪ್ರತಿಕ್ರಿಯೆಯನ್ನು ಮಾಡುವುದಕೆ ಪ್ರಯತ್ನಪಟ್ಟಿರುವ ನನ್ನನ್ನು ತಡೆಯುವೆಯಲ್ಲಾ, ನಿನಗೆ ಕೋಪವಿಲ್ಲವೇ? ಕರುಣೆಯಿಲ್ಲವೇ! ನಾಚಿಕೆಯಿಲ್ಲವೇ?

ಸಾರಥಿ:—ಅಯುಷ್ಮಂತನೇ, ಆ ನೀಚನಾದ ಭೀಮನು ಪ್ರತಿಜ್ಞೆಯನ್ನು ಪೂರೈಸಿಕೊಂಡು ಹಿಂತಿರುಗಿರಬಹುದು. ಆದ್ದರಿಂದ ಹೀಗೆ ಹೇಳುತ್ತೇನೆ.

ದುರ್ಯೋಧನ:—(ಆ ಕ್ಷಣವೇ ಭೂಮಿಯಲ್ಲಿ ಬಿದ್ದು) ಅಯ್ಯೋ ವತ್ಸನೇ, ದುಶ್ಶಾಸನನೇ, ನನ್ನ ಆಜ್ಞೆಯಿಂದ ಪಾಂಡವರಲ್ಲ ವಿರೋಧವನ್ನು ಕಟ್ಟಿಕೊಂಡೆಯಲ್ಲಾ, ಅಯ್ಯೋ, ನಿನ್ನಲ್ಲಿ ಪರಾಕ್ರಮವು ತುಂಬಿ ಇತ್ತಲ್ಲಾ. ನನ್ನ ತೊಡೆಯ ಮೇಲೆಯೇ ಲಾಲನೆಯಿಂದ ಬೆಳದೆಯಲ್ಲಾ, ಹಾ! ಶತ್ರುಕುಲಗಳೆಂಬ ಆನೆಗಳಿಗೆ ಸಿಂಹಪ್ರಾಯನಾದ ಯುವರಾಜನೇ! (ಎಂದು ದೀರ್ಘವಾಗಿ ನಿಟ್ಟುಸುರು ಬಿಟ್ಟು) ನಾನು ನಿನ್ನನ್ನು ಲಾಲಿಸಿದಾಗ್ಯೂ, ನೀನು ಯಥೇಷ್ಟವಾಗಿ ಉಪಭೋಗ ಸುಖಗಳನ್ನು ಅನುಭವಿಸಲಿಲ್ಲ. ಈಗ ನಿನಗೆ ಉಂಟಾದ ವಿಪತ್ತಿಗೆ ನಾನೇ ಕಾರಣನು. ಅದಕ್ಕೆ ತಕ್ಕ ದುಷ್ಕೃತ್ಯಗಳನ್ನು ನಾನೇ ನಿನ್ನಿಂದ ಮಾಡಿಸಿದೆನು. ಈಗ ನಾನು ನಿನ್ನನ್ನು ಕಾಪಾಡದೇ ಹೋದೆನು. (ಎಂದು ಕೆಳಗೆ ಬೀಳುವನು.)

ಸಾರಥಿ:—ಆಯುಷ್ಮಂತನೇ, ಸಮಾಧಾನ ಹೊಂದು. ಇದು ದೈನ್ಯಕ್ಕೆ ಕಾಲವಲ್ಲವು.

ದುರ್ಯೋಧನ:—ಛೀ ಸೂತನೇ, ಛೀ ನಾಗಭೂಯೇ, ಏನು ಕೆಲಸ ಮಾಡಿದೆ? ನನ್ನ ಆಜ್ಞೆಗೆ ಅಧೀನನಾಗಿದ್ದ ಬಾಲನಾದ ತಮ್ಮನಾದ ದುಶ್ಶಾಸನನನ್ನು ಸಂರಕ್ಷಿಸಬೇಕಾಗಿರುವಾಗ, ಆ ಸಮಯದಲ್ಲಿ ನನ್ನನ್ನು ಇಲ್ಲಿಗೆ ತಂದು ರಕ್ಷಿಸಿದೆ.

ಸಾರಥಿ:—ಮಹಾರಾಜನೇ, ಮರ್ಮಭೇದಿಗಳಾದ ಬಾಣಗಳು, ತೋಮರಗಳು, ಶಕ್ತಿಗಳು, ಪ್ರಾಸಗಳು ಇವುಗಳ ಮಹಾವರ್ಷಗಳಿಂದ ಮಹಾರಥಿಕರೆಲ್ಲರೂ ಮೂರ್ಛಿತರಾಗಿ ಹೋಗಿದ್ದುದರಿಂದ, ಮೂರ್ಛಿತರಾಗಿದ್ದ ತಮ್ಮನ್ನ ಇಲ್ಲಿಗೆ ಕರತರಬೇಕಾಯಿತು.

ದುರ್ಯೋಧನ:—ವಿಪರೀತ ಕೆಲಸವನ್ನು ಮಾಡಿದೆ. ನಾನಾಗಲೀ, ಭೀಮನಾಗಲೀ ದುಶ್ಶಾಸನನ ರಕ್ತದಿಂದ ತೋಯ್ದು ಹೋಗಿರುವ ಹಾಸಿಗೆಯಲ್ಲಿ ಮಲಗಬೇಕಾಗಿತ್ತು. ಅದನ್ನು ತಪ್ಪಿಸಿ, ದುಶ್ಶಾಸನನ ದ್ವೇಷಿಯಾದ ಪಾಂಡವಪಶುವಿನ ಸಮೀಪದಿಂದ ಇಲ್ಲಿಗೆ ನೀನು ಕರತಂದೆ. (ಹಾಗೆಯೇ ಆಕಾಶವನ್ನು ನೋಡಿ) ಭರತಕುಲ ವಿಮುಖನಾದ ಹಾಳು ವಿಧಿಯೇ, ನನಗೆ ಮೃತ್ಯುವು ಬರಬಾರದೆ? ಭೀಮನಾದರೂ ನನ್ನನ್ನು ಕೊಂದುಬಿಡಬಾರದೇ?

ಸಾರಥಿ:—ಶಾಂತಂ ಪಾಪಂ, ಶಾಂತಂ ಪಾಪಂ. ಮಹಾರಾಜನೇ ಇದೇನು?

ದುರ್ಯೋಧನ:—ಸಮಸ್ತ ಬಂಧುಗಳನ್ನೂ ಕೊಲ್ಲಿಸಿದ ನನಗೆ ರಾಜ್ಯವೇಕೆ? ಜಯವು ತಾನೇ ಏಕೆ?

(ಪೆಟ್ಟು ತಿಂದಿರುವ ಒಬ್ಬ ಪುರುಷನು ಪ್ರವೇಶಿಸುವನು.)

ಪುರುಷ:—ಇಲ್ಲಿ ಯಾರಾದರೂ ಸಾರಥಿಯೊಡನೆ ಇದ್ದ ಮಹಾರಾಜನನ್ನು ಕಂಡಿರಾ? ಏನು! ಯಾರು ಏನೂ ಹೇಳುವುದೇ ಇಲ್ಲವಲ್ಲಾ. ಇರಲಿ. ಇಲ್ಲಿ ಯಾರೋ ಕೆಲವರು ಸೊಂಟ ಕಟ್ಟಿಕೊಂಡು ಗುಂಪಾಗಿ ಸೇರಿದಾರೆ. ಇವರನ್ನು ಕೇಳೋಣ? ಓಹೋ, ಇವರು ತಮ್ಮ ಯಜಮಾನನಿಗೆ ದೃಢವಾಗಿ ಪ್ರಹಾರ ಮಾಡಿದ್ದರಿಂದ, ಶರೀರದಲ್ಲಿ ನೆಟ್ಟುಹೋಗಿರುವ ಬಾಣಗಳನ್ನು ಚಿಮುಟಗಳಿಂದ ತೆಗೆಯುತ್ತಲಿದಾರೆ. ಇವರು ಏನೂ ಕಾಣರು. ಇಲ್ಲಿ ಯಾರೋ ಕೆಲವರು ಮುಂದುಗಡೆ ಕಾಣುವರು. ಅವರನ್ನು ಕೇಳುವೆನು. ಇದೇನು! ಅವರು ಅಳುತ್ತಾರೆ. ಓಹೋ ಇಲ್ಲಿ ಬಹಳ ಕಷ್ಟ. ಯುದ್ಧದಲ್ಲಿ ಮಗನು ಸತ್ತನೆಂದು ಕೇಳಿ, ಅವನ ತಾಯಿಯು ಅಲಂಕೃತೆಯಾದ ಸೊಸೆಯೊಂದಿಗೆ ಸಾಯುತ್ತಲಿದಾಳೆ. ವೀರಮಾತೆಯೇ, ನಿನ್ನ ಕೆಲಸವು ಶ್ಲಾಘನೀಯವಾದದ್ದು. ಇನ್ನೊಂದು ಜನ್ಮದಲ್ಲಿ ನಿನ್ನ ಮಗನು ಸಾಯುವುದಿಲ್ಲ. ಇರಲಿ, ಇನ್ನೊಂದು ಕಡೆ ಹುಡುಕುವೆನು. ಇಲ್ಲಿ ಕೆಲವರು ಬಹಳ ಗಾಯಪಟ್ಟವರಾಗಿ, ಗಾಯಗಳಿಗೆ ಯಾವ ಚಿಕಿತ್ಸೆಯನ್ನೂ ಮಾಡಿಕೊಳ್ಳದೆ, ಬರೀ ಕುದುರೆಯನ್ನು ಕಟ್ಟಿಕೊಂಡು ಅಳುತ್ತಲಿದಾರೆ. ಬಹುಶ ಇವರ ಪ್ರಭುಗಳು. ಇಲ್ಲಿಯೇ ಸತ್ತಿರಬಹುದು. ಎಲ್ಲಿ ನೋಡಿದರೂ ಹೀಗೆಯೇ ಎಲ್ಲರೂ ದುಃಖದಿಂದಲೇ ಕೂಡಿಕೊಂಡಿರುವರಲ್ಲಾ! ಯಾರನ್ನ ಕೇಳಲಿ? ಅಯ್ಯೋ, ಹಾಳು ವಿಧಿಯೇ, ಹನ್ನೊಂದು ಅಕ್ಷೋಹಿಣಿಗೆ ಅಧಿಪತಿಯಾದ ನೂರು ಜನ ಸಹೋದರರಲ್ಲಿ ಜ್ಯೇಷ್ಠನಾದ, ಗಾಂಗೇಯ, ದ್ರೋಣಾಂಗರಾಜ, ಕೃಪ, ಕೃತವರ್ಮಾಶ್ವತ್ಥಾಮರೇ ಮೊದಲಾದ ಮಹಾವೀರರುಗಳಿಗೆ ಪ್ರಭುವಾದ ಸಕಲ ಭೂಮಂಡಲೈಕನಾಥನಾದ ದುರ್ಯೋಧನನ್ನ ಹುಡುಕಬೇಕಾದ ಅವಸ್ಥೆ ಬಂತೇ! ಯಾವ ಸ್ಥಳದಲ್ಲಿದ್ದಾನೆಯೋ ತಿಳಿಯಲಿಲ್ಲ. ಅಥವಾ ದೈವವನ್ನು ಏಕೆ ನಿಂದಿಸಲಿ. ವಿದುರನ ಮಾತನ್ನು ಗಮನಿಸಿ, ಭೀಷ್ಮಾಚಾರ್ಯನ ಹಿತವಚನವನ್ನು ಅಲಕ್ಷ್ಯ ಮಾಡಿದ್ದರಿಂದ

ಅಂಕುರಿಸಿ, ನೀಚ ಶಕುನಿಯ ಪ್ರೋತ್ಸಾಹದಿಂದ ಬೆಳದು, ಪ್ರಬಲವಾದ ದ್ಯೂತವೆಂಬ ವಿಷವೃಕ್ಷದಲ್ಲಿ ಹುಟ್ಟಿದ ದ್ರೌಪದಿಯ ಕೇಶಗ್ರಹಣವೆಂಬ ಹೂವಿಗೆ ಇದು ಫಲ. [ಇನ್ನೊಂದು ಕಡೆ ನೋಡಿ] ಇಲ್ಲಿ ಮುರಿದು ಹೋದ ಧ್ವಜದ ರಥ ಕಾಣುತ್ತದೆ. ಆದ್ದರಿಂದ ಮಹಾರಾಜ ದುರ್ಯೋಧನನ ವಿಶ್ರಾಂತಿ ಸ್ಥಳವು ಇದೇ ಆಗಿರಬಹುದೆಂದು ಊಹಿಸುತ್ತೇನೆ. [ಸಮೀಪಕ್ಕೆ ಬಂದು ನೋಡಿ] ಮಹಾರಾಜನಿಗೆ ಜಯವಾಗಲಿ.

ಸಾರಥಿ:—(ನೋಡಿ) ಆಯುಷ್ಮಂತನೇ, ಯುದ್ಧದಿಂದ ಸುಂದರಕನು ಬಂದಿರುವನು.

ದುರ್ಯೋಧನ:—(ನೋಡಿ) ಸುಂದರಕನೇ ಅಂಗರಾಜನಿಗೆ ಕುಶಲವೇ?

ಸುಂದರಕ:—ಮಹಾರಾಜನೇ, ಶರೀರ ಒಂದು ಮಾತ್ರ ಕುಶಲ.

ದುರ್ಯೋಧನ:—ಅರ್ಜುನನು ಅವನ ರಥದ ಕುದುರೆಗಳನ್ನೂ, ಸಾರಥಿಯನ್ನೂ ಸಂಹರಿಸಿ ರಥವನ್ನು ಮುರಿದುಬಿಟ್ಟನೋ?

ಸುಂದರಕ:—ರಥವು ಮಾತ್ರವೇ ಅಲ್ಲ, ಮನೋರಥವೂ ಕೂಡ ಭಗ್ನವಾಯಿತು.

ದುರ್ಯೋಧನ:—ಎಲೈ ಸುಂದರಕನೇ, ಸ್ಪಷ್ಟವಾಗಿ ಹೇಳದನೊದಲೇ ಖೇದಗೊಂಡಿರುವ ನನ್ನ ಮನಸ್ಸನ್ನು ಇನ್ನೂ ಖೇದಗೊಳಿಸುವೆಯಲ್ಲಾ. ಎಲ್ಲವನ್ನೂ ಸ್ಪಷ್ಟವಾಗಿ ಹೇಳು.

ಸುಂದರಕ:—ಮಹಾರಾಜನೇ, ಕೇಳಬೇಕು. ಕುಮಾರ ದುಶ್ಶಾಸನನ ವಧ ಎಂದು ಅರ್ಧೋಕ್ತಿಯಲ್ಲಿ ಹೇಳಿ, ಬಾಯನ್ನು ಮುಚ್ಚಿಕೊಳ್ಳುವನು.

ಸಾರಥಿ:—ಸುಂದರಕನೇ, ದೈವವು ಮೊದಲೇ ಹೇಳಿದೆ, ಹೇಳು.

ದುರ್ಯೋಧನ:—ನಾವು ಕೇಳಿದ್ದೇವೆ, ಮುಂದೆ ಹೇಳು.

ಸುಂದರಕ:—ದುಶ್ಶಾಸನನ ವಧದಿಂದ ಕುಪಿತನಾದ ಅಂಗರಾಜನು ಹಣೆಯಲ್ಲಿ ಭೀಷಣವಾದ ಭ್ರೂಭಂಗವನ್ನು ಮಾಡಿಕೊಂಡು, ಬಾಣವನ್ನು ಸೇರಿಸುವುದೂ, ಬಿಡುವುದೂ ಸಹ ಗೋಚರವಾಗದಂತೆ ದುರಾಚಾರಿಯಾದ ಭೀಮನನ್ನು ಅರ್ಜುನನ ಎದುರಿಗೇನೇ ಬಹುವಾಗಿ ಬಾಣಗಳನ್ನು ಸುರಿದು ಮುಚ್ಚಿಬಿಟ್ಟನು.

ದುರ್ಯೋಧನ:—ಆಮೇಲೆ.

ಸುಂದರಕ:—ಅನಂತರದಲ್ಲಿ ಅವರಿಬ್ಬರೂ ಸಿಂಹನಾದದಿಂದಲೂ, ವಿವಿಧವಾದ ಬಾಣಪ್ರಹಾರಗಳಿಂದಲೂ, ಧನುಸ್ಸನ್ನು ಎಳೆಯುವುದರಲ್ಲಿ ಉಂಟಾದ ಧನುಷ್ಟಂಕಾರಗಳಿಂದಲೂ, ಮಳೆಗರೆದಂತೆ ಬಾಣಗಳನ್ನು ಕರೆಯುತ್ತಾ, ಬಾಣಗಳು ತಗುಲಿ, ಅವರುಗಳ ಕವಚಗಳಿಂದ ಕಿಡಿಗಳು ಉದುರುವಂತೆ ಯುದ್ಧಮಾಡಿದರು. ಈ ಮಧ್ಯದಲ್ಲಿ ಅಣ್ಣನಿಗೆ ಪರಾಜಯವಾಗುವುದೆಂಬ ಹೆದರಿಕೆಯಿಂದ ಅರ್ಜುನನು ಸಿಡಿಲಿನಂತೆ ಧ್ವನಿಮಾಡುವ ಕಪಿಯಿಂದ ಕೂಡಿದ ಧ್ವಜವುಳ್ಳವನಾಗಿ ಶಂಖ, ಚಕ್ರ, ಗದಾ ಖಡ್ಗಗಳಿಂದ ಕೂಡಿದ ನಾಲ್ಕು ಭುಜಗಳುಳ್ಳ ಕೃಷ್ಣನೊಡಗೂಡಿ ಪಾಂಚಜನ್ಯ, ದೇವದತ್ತಗಳ ಧ್ವನಿಗಳಿಂದ ದಿಕ್ತಟಗಳನ್ನು ಮೊಳಗುತ್ತಾ, ಆ ಸ್ಥಳಕ್ಕೆ ರಥವನ್ನು ಓಡಿಸಿಕೊಂಡು ಬಂದನು.

ದುರ್ಯೋಧನ:—ಆಮೇಲೆ.

ಸುಂದರಕ:—ಅನಂತರದಲ್ಲಿ ಭೀಮಸೇನಾರ್ಜುನರಿಬ್ಬರೂ ಅಂಗರಾಜನ ಮೇಲೆ ಬಿದ್ದುದನ್ನು ನೋಡಿ, ಕುಮಾರ ವೃಷಸೇನನು ಕಠಿನವಾದ ಧನುಸ್ಸನ್ನು ಹಿಡಿದು, ಬಿಲ್ಗೈಯಿಂದ ಬಾಣಗಳನ್ನು ಹಿಡಿಹಿಡಿಯಾಗಿ ತೆಗೆದುಕೊಂಡು, ತಂದೆಯಾದ ಕರ್ಣನ ಸಮೀಪಕ್ಕೆ ಬಂದನು. ಆ ಕುಮಾರ ವೃಷಸೇನನು ಬರುತ್ತಾ, ಇಂದ್ರನೀಲಗಳಂತೆ ಕಪ್ಪಾದ ಹಿಡಿಗಳುಳ್ಳದ್ದಾಗಿ, ಸಾಣೆ ಹಿಡಿದು ಥಳಥಳಿಸುತ್ತಿರುವ ಬಾಣಗಳಿಂದ ಅರ್ಜುನನ ರಥವನ್ನು ಮುಚ್ಚಿಬಿಟ್ಟನು.

ದುರ್ಯೋಧನ:—(ಸಂತೋಷದಿಂದ) ಆಮೇಲೆ.

ಸುಂದರಕ:—ಅನಂತರದಲ್ಲಿ ಅತಿ ಶೀಘ್ರವಾಗಿ ಬಾಣಗಳನ್ನು ಬಿಡುವುದರಲ್ಲಿ ಸಮರ್ಥನಾದ ಅರ್ಜುನನು ತನ್ನ ಬಾಣಗಳಿಂದ ಈ ಬಾಣಗಳನ್ನು ಛೇದಿಸಿ, ಸ್ವಲ್ಪ ನಕ್ಕು, "ಎಲೈ ವೃಷಸೇನನೆ, ನಿನ್ನ ತಂದೆಯೂ ಕೂಡ ನನ್ನ ಎದುರಿಗೆ ನಿಲ್ಲಲು ಸಮರ್ಥನಲ್ಲ. ಹುಡುಗನಾದ ನೀನು ಹೇಗೆ ನಿಲ್ಲುವಿ? ಇತರ ಹುಡುಗರೊಂದಿಗೆ ಯುದ್ಧಕ್ಕೆ ಹೋಗು" ಎಂದನು. ಇದನ್ನು ಕೇಳಿ, ಗುರುಜನರನ್ನು ಧಿಕ್ಕರಿಸಿ ಮಾತನಾಡಿದನೆಂಬ ಕೋಪದಿಂದ ಕೆಂಪಾದ ಮುಖವುಳ್ಳ ವೃಷಸೇನನು ಮುಖದಲ್ಲಿ ಹುಬ್ಬು ಗಂಟಿಕ್ಕಿಕೊಂಡು, ಸಮರ್

ಛೇದಕಗಳಾದ ಬಾಣಗಳನ್ನು ಅರ್ಜುನನಿಗೆ ಪ್ರಯೋಗಿಸಿದನು. ದುರ್ವಚನಗಳನ್ನು ಪ್ರಯೋಗಿಸಲಿಲ್ಲ.

ದುರ್ಯೋಧನ:—ವತ್ಸನೇ, ವೃಷಸೇನನೇ? ಉತ್ತಮವಾದ ಕೆಲಸವನ್ನು ಮಾಡಿದೆ, ಅನಂತರ ಮೇಲೆ.

ಸುಂದರಕ:—ಮಹಾರಾಜನೇ, ಅನಂತರದಲ್ಲಿ ತೀಕ್ಷ್ಣವಾದ ಬಾಣಗಳ ಪೆಟ್ಟಿನಿಂದ ಅರ್ಜುನನು ಕುಪಿತನಾಗಿ, ಗಾಂಡೀವದಲ್ಲಿ ಬಾಣಗಳನ್ನು ಹೂಡಿ, ಎಳೆಯುವ ಗಾಂಡೀವ ಧ್ವನಿಗಳಿಂದ ಕಿವಿಗಳನ್ನು ಕುರುಡಾಗಿಯೂ, ಬಾಣಗಳನ್ನು ಬಿಡುವುದರಿಂದ ಕಣ್ಣುಗಳು ಕಾಣದಂತೆಯೂ, ತಿಕ್ಕೆಗೂ, ಬಲಕ್ಕೂ ಅನುರೂಪವಾಗಿ ಅತ್ಯಾಶ್ಚರ್ಯವನ್ನು ತೋರಿಸಿದನು. ಇದನ್ನು ನೋಡಿ, ಬತ್ತಳಿಕೆಯಿಂದ ಬಾಣಗಳನ್ನು ತೆಗೆಯುವುದೂ, ಧನುಸ್ಸಿನಲ್ಲಿ ಹೂಡುವುದೂ, ಇವುಗಳು ಯಾವುದೂ ಗೋಚರವಾಗದಷ್ಟು ಚಾತುರ್ಯದಿಂದ ಕುಮಾರ ವೃಷಸೇನನು ಯುದ್ಧಕಾರ್ಯವನ್ನಾರಂಭಿಸಿದನು. ಆ ಸಮಯದಲ್ಲಿ ಕುರುಪಾಂಡವ ಸೇನೆಗಳಲ್ಲಿರುವ ವೀರಜನರು ಯುದ್ಧದ ಕೆಲಸವನ್ನೆಲ್ಲವನ್ನೂ ಬಿಟ್ಟು, ಪರಸ್ಪರ ವೈರಸಂಬಂಧವನ್ನು ತೊರೆದು, ವೃಷಸೇನನನ್ನು ಹೊಗಳಲಾರಂಭಿಸಿದರು.

ದುರ್ಯೋಧನ:—(ಆಶ್ಚರ್ಯದಿಂದ) ಆಮೇಲೆ.

ಸುಂದರಕ:—ಅನಂತರದಲ್ಲಿ ಸಮಸ್ತ ಧನುರ್ಧಾರಿಗಳ ಪರಾಕ್ರಮವನ್ನು ಮೀರಿ ಕೆಲಸ ಮಾಡುತ್ತಲಿರುವ ಮಗನನ್ನು ನೋಡಿ, ಸಂತೋಷ, ಕೋಪ, ಭಯ ಇವುಗಳಿಂದ ಕೂಡಿದ ಕರ್ಣನು ಬಾಣಗಳನ್ನು ಭೀಮಸೇನನ ಮೇಲೆ ಬಿಡುತ್ತಾ, ಬಾಷ್ಪಪೂರಿತವಾದ ಕಣ್ಣನ್ನು ವೃಷಸೇನನ ಮೇಲೆ ಬಿಟ್ಟನು. ಅನಂತರದಲ್ಲಿ ಉಭಯ ಸೈನ್ಯಗಳಲ್ಲಿಯೂ, ವೃಷಸೇನನನ್ನ ಹೊಗಳುತ್ತಿರುವುದನ್ನು ಅರ್ಜುನನು ಸಹಿಸದೆ, ಏಕಕಾಲದಲ್ಲಿ ಕುದುರೆಗಳ ಮೇಲೆಯೂ, ಸಾರಥಿಯ ಮೇಲೆಯೂ, ರಥದ ಮೇಲೆಯೂ, ಬಿಲ್ಲಿನ ಮೇಲೆಯೂ, ಛತ್ರದ ಮೇಲೆಯೂ, ಕುಮಾರ ವೃಷಸೇನನ ಮೇಲೆಯೂ ಬಾಣಗಳನ್ನು ಪ್ರಯೋಗಿಸಿದನು.

ದುರ್ಯೋಧನ:—ಆಮೇಲೆ.

ಸುಂದರಕ:—ಮಹಾರಾಜನೇ, ಅನಂತರದಲ್ಲಿ ವೃಷಸೇನನ ರಥವು ಹೋಯಿತು. ಬಿಲ್ಲಿನ ಹೆದೆಯೂ ಕತ್ತರಿಸಿಹೋಯಿತು. ಆಗ ಕುಮಾರನು ಕೇವಲ ಸಂಚಾರದ ಕೌಶಲದಿಂದಲೇ ಬಾಣಗಳ ಪೆಟ್ಟುಗಳು ತನಗೆ ಆಗದಂತೆ ಮಂಡಲಾಕಾರವಾಗಿ ಸಂಚರಿಸಲಾರಂಭಿಸಿದನು. ಅನಂತರದಲ್ಲಿ ಮಗನ ರಥವು ಧ್ವಂಸವಾದದ್ದನ್ನು ನೋಡಿ, ಕೋಪೋದ್ದೀಪಿತನಾದ ಕರ್ಣನು ಎದುರಿಗಿರುವ ಭೀಮನನ್ನು ಲಕ್ಷ್ಯಮಾಡದೆ, ಅರ್ಜುನನ ಮೇಲೆ ಬಾಣಧಾರೆಗಳನ್ನು ಸುರಿಯಲಾರಂಭಿಸಿದನು. ಕುಮಾರ ವೃಷಸೇನನೂ ಕೂಡ ಪರಿಜನರಿಂದ ಸಿದ್ಧಪಡಿಸಿದ ಮತ್ತೊಂದು ರಥವನ್ನು ಹತ್ತಿ, ಅರ್ಜುನನನ್ನು ಕುರಿತು, "ಎಲೈ ತಂದೆಯನ್ನು ಧಿಕ್ಕರಿಸಿ ಮಾತನಾಡುವುದರಲ್ಲಿ ಉದ್ಯುಕ್ತನಾಗಿರುವ ಮಧ್ಯಮ ಪಾಂಡವನೇ, ನನ್ನ ಬಾಣಗಳು ನಿನ್ನ ಶರೀರವನ್ನು ಬಿಟ್ಟು ಬೇರೆ ಕಡೆಯಲ್ಲಿ ಬೀಳುವುದಿಲ್ಲ"ವೆಂದು ಹೇಳಿ, ಸಾವಿರ ಬಾಣಗಳಿಂದ ಅರ್ಜುನನ ಶರೀರವನ್ನು ಮುಚ್ಚಿ ಸಿಂಹನಾದವನ್ನು ಮಾಡಿದನು.

ದುರ್ಯೋಧನ:—(ಆಶ್ಚರ್ಯದಿಂದ) ಬಾಲಕನ ಪರಾಕ್ರಮವು ಅತ್ಯಾಶ್ಚರ್ಯಕರವಾಗಿದೆ. ಆಮೇಲೆ.

ಸುಂದರಕ:—ಅನಂತರದಲ್ಲಿ ಅರ್ಜುನನು ಆ ಬಾಣಗಳನ್ನು ಕೊಡಹಿ, ಚಿನ್ನದ ಗಂಟೆಗಳನ್ನು ಕಟ್ಟಿರುವ ಇಂದ್ರನೀಲಮಣಿಯಂತೆ ಶ್ಯಾಮಲವರ್ಣ ಮುಖವುಳ್ಳ ಮೋಡವಿಲ್ಲದ ಆಕಾಶದಂತೆ ನಿರ್ಮಲವಾಗಿರುವ, ರತ್ನಗಳ ಕಾಂತಿಗಳಿಂದ ಸುಂದರವಾಗಿಯೂ, ಭಯಂಕರವಾಗಿಯೂ ಕಾಣುವ ರಥದಲ್ಲಿದ್ದ ಒಂದು ಶಕ್ತಿಯನ್ನು ಎತ್ತಿ, ಕುಮಾರನ ಮೇಲೆ ಬಿಟ್ಟನು. ಆ ಸಮಯದಲ್ಲಿ ಅಂಗರಾಜನಾದ ಕರ್ಣನಿಗೆ ಕೈಯಿಂದ ಧನುಸ್ಸು ಬಿದ್ದುಹೋಯಿತು. ಹೃದಯದಿಂದ ಉತ್ಸಾಹವು ಹೋಯಿತು. ಕಣ್ಣಿನಿಂದ ನೀರು ಸುರಿಯುವುದಕ್ಕಾರಂಭಿಸಿತು. ಅರ್ಜುನನೂ, ಭೀಮನೂ ಸಿಂಹನಾದವನ್ನು ಮಾಡಿದರು. ಕುರುಸೈನ್ಯದಲ್ಲಿದ್ದವರೆಲ್ಲರೂ ದುಷ್ಕರ ಕರ್ಮವು ಮಾಡಲ್ಪಟ್ಟಿತೆಂದು ಕೂಗಿದರು.

ದುರ್ಯೋಧನ:—(ದುಃಖದಿಂದ) ಆಮೇಲೆ. ಮಹಾರಾಜನೇ, ಅನಂತರದಲ್ಲಿ ವೃಷಸೇನನೂ ಕೂಡ ತೀಕ್ಷ್ಣವಾದ ಬಾಣಗಳನ್ನು ಹೂಡಿ, ಕಿವಿಯವರೆಗೂ

ಎಳೆದು, ಚೆನ್ನಾಗಿ ಗುರಿಯಿಟ್ಟು, ಆ ಶಕ್ತಿಯನ್ನು ಅರ್ಧ ದಾರಿಯಲ್ಲೇ ಮೂರು ತುಂಡಾಗಿ ಕತ್ತರಿಸಿಬಿಟ್ಟನು.

ದುರ್ಯೋಧನ:—ವತ್ಸನೇ, ಸಾಧುವಾದ ಕೆಲಸವನ್ನು ಮಾಡಿದೆ. ಆ ಮೇಲೆ.

ಸುಂದರಕ:—ಈ ಮಧ್ಯದಲ್ಲಿ ಕೋಲಾಹಲಧ್ವನಿಯಿಂದ ಕೂಡಿದ ವೃಷಸೇನನಿಗೋಸ್ಕರ ಮಾಡಿದ ವೀರಜನರ ಸಾಧುವಾದವು ರಣವಾದ್ಯದ ಧ್ವನಿಯನ್ನೆಲ್ಲವನ್ನೂ ಮುಚ್ಚಿಬಿಟ್ಟಿತು. ಸಿದ್ಧಚಾರಣರು ಮಳೆಗರೆದ ಹೂವುಗಳ ಸಮೂಹದಿಂದ ಸಮರಾಂಗಣವೆಲ್ಲವೂ ಮುಚ್ಚಿಹೋಯಿತು. ಆ ಸಮಯದಲ್ಲಿ ಕರ್ಣನು ಭೀಮನನ್ನು ಕುರಿತು,—"ಎಲೈ ಭೀಮನೇ, ನನಗೂ, ನಿನಗೂ ಇನ್ನೂ ಯುದ್ಧವು ಪೂರೈಸಿಲ್ಲ. ಆದ್ದರಿಂದ ನೀನು ಒಪ್ಪುವುದಾದರೆ, ವತ್ಸನಾದ ವೃಷಸೇನನ ಚಾತುರ್ಯವನ್ನೂ, ನಿನ್ನ ತಮ್ಮನಾದ ಅರ್ಜುನನ ಚಾತುರ್ಯವನ್ನೂ ಒಂದು ಮುಹೂರ್ತಕಾಲ ನೋಡೋಣ. ನೀನು ನೋಡತಕ್ಕದ್ದೇ" ಎಂದು ಹೇಳಿದನು. ಅನಂತರದಲ್ಲಿ ಅವರಿಬ್ಬರೂ ಒಂದು ಮುಹೂರ್ತದವರೆಗೂ ಯುದ್ಧವನ್ನು ಬಿಟ್ಟು, ಇವರಿಬ್ಬರೂ ಯುದ್ಧವನ್ನು ನೋಡುತ್ತಾ ನಿಂತರು. ಈ ಸಮಯದಲ್ಲಿ ತನ್ನ ಶಕ್ತಿಯನ್ನ ಕತ್ತರಿಸಿದ ಕೋಪದಿಂದ ಅರ್ಜುನನು "ಎಲೈ ದುರ್ಯೋಧನನೇ ಮೊದಲಾದ" (ಎಂದು ಭಯದಿಂದ ಸುಮ್ಮನಾದನು.)

ದುರ್ಯೋಧನ:—ಸಂಕೋಚವೇನು ಹೇಳು. ಇತರರ ಮಾತು ತಾನೇ ಇದು.

ಸುಂದರಕ:—ಕೇಳಬೇಕು. "ಎಲೈ ದುರ್ಯೋಧನನೇ ಮೊದಲಾದ ಕುರುಕುಲ ಸೇನಾಪತಿಗಳಿರಾ, ಅವಿನಯ ಸಮುದ್ರಕ್ಕೆ ಕರ್ಣಧಾರನಾದ ಎಲೈ ಕರ್ಣನೇ, ನೀವುಗಳು ಮಹಾರಥರಾಗಿದ್ದುಕೊಂಡು, ನಾನಿಲ್ಲದ ವೇಳೆಯಲ್ಲಿ ಒಬ್ಬನೇ ಆದ ಅಭಿಮನ್ಯುವನ್ನು ನೀವುಗಳೆಲ್ಲರೂ ಸೇರಿ ಕೊಂದಿರಿ. ನಾನಾದರೋ ನೀವುಗಳು ನೋಡುತ್ತಿರುವ ಹಾಗೆಯೇ ಈ ಕುಮಾರ ವೃಷಸೇನನನ್ನು ಸಂಹರಿಸುವೆನು" ಎಂದು ಹೇಳಿ, ಸಿಡಿಲಿನಂತೆ ಧ್ವನಿಮಾಡುವ ಗಾಂಡೀವ ಧನುಸ್ಸನ್ನು ಆಸ್ಫಾಲನ ಮಾಡಿದನು. ಕರ್ಣನೂ ಕೂಡ ತನ್ನ ಕಾಲವೃಷ್ಟವೆಂಬ ಧನುಸ್ಸನ್ನು ಸಿದ್ಧಪಡಿಸಿಕೊಂಡನು. ಅನಂತರದಲ್ಲಿ ಅರ್ಜುನನು ಭೀಮನನ್ನು ತಡೆದು, ತಾನೇ ವೃಷಸೇನ-ಕರ್ಣರೊಂದಿಗೆ ಯುದ್ಧಮಾಡಲಾ

ರಂಭಿಸಿದನು. ಆ ಸಮಯದಲ್ಲಿ ಅರ್ಜುನನು ಗಾಂಡೀವ ಧನುಸ್ಸಿನ ಸ್ಪರ್ಶದ ಮಾತ್ರದಿಂದಲೇ ತೀರಿದುಕೊಳ್ಳಬಹುದಾದ ಬಾಣವರ್ಷಗಳನ್ನು ಮಾಡಿದನು. ಆ ಬಾಣಗಳಿಂದ ಆಕಾಶವೂ ಕಾಣಲಿಲ್ಲ, ಅಂಗರಾಜನೂ ಕಾಣಲಿಲ್ಲ. ರಥ ಕಾಣಲಿಲ್ಲ, ಭೂಮಿ ಕಾಣಲಿಲ್ಲ, ಕುಮಾರ ಕಾಣಲಿಲ್ಲ, ಕೇತುದಂಡವು ಕಾಣಲಿಲ್ಲ, ಸೈನ್ಯಗಳೂ ಕಾಣಲಿಲ್ಲ, ಕುದುರೆಗಳೂ ಕಾಣಲಿಲ್ಲ, ದಿಕ್ಕುಗಳೂ ಕಾಣಲಿಲ್ಲ, ವೀರಜನರೂ ಸಹ ಕಾಣಲಿಲ್ಲ.

ದುರ್ಯೋಧನ:—(ಆಶ್ಚರ್ಯದಿಂದ) ಆಮೇಲೆ.

ಸುಂದರಕ:—ಅನಂತರದಲ್ಲಿ ಕ್ಷಣಕಾಲದಲ್ಲಿ ಉಂಟಾದ ಆ ಬಾಣಗಳ ಪರಂಪರೆಗಳಿಂದ ಪಾಂಡವ ಸೈನ್ಯವೆಲ್ಲವೂ ಹರ್ಷದಿಂದಲೂ, ಕೌರವ ಸೈನ್ಯವೆಲ್ಲವೂ ದುಃಖದಿಂದಲೂ ಕೂಡಿರಲಾಗಿ, ಕುಮಾರ ವೃಷಸೇನನು ಹತನಾದನು ಎಂಬ ದೊಡ್ಡ ಕೋಲಾಹಲವು ಎದ್ದಿತು.

ದುರ್ಯೋಧನ:—(ಕಣ್ಣೀರು ಬಿಡುತ್ತಾ, ಕೋಪದಿಂದ) ಆಮೇಲೆ.

ಸುಂದರಕ:—ದಾಸನೇ, ಅನಂತರದಲ್ಲಿ ಸಾರಥಿ, ಕುದುರೆ, ಇವುಗಳು ಹತವಾಗಿ, ಹೃದಯಮರ್ಮಭೇದಕವಾದ ಒಂದು ಬಾಣದಿಂದ ದೇಹವು ಭೇದಿಸಲ್ಪಟ್ಟು, ರಥದಲ್ಲಿ ಬಿದ್ದಿದ್ದ ಸ್ವರ್ಗದಿಂದ ಕೆಳಗೆ ಬಿದ್ದ ದೇವಕುಮಾರನಂತಿದ್ದ ಕುಮಾರನನ್ನು ನೋಡಿದೆನು. ಛತ್ರ, ಚಾಮರ, ಧ್ವಜ ಎಲ್ಲವೂ ಕತ್ತರಿಸಿಬಿದ್ದಿತ್ತು.

ದುರ್ಯೋಧನ:—(ಕಣ್ಣೀರು ತುಂಬಿಕೊಂಡು) ಅಹಹಾ! ಇನ್ನು ಮುಂದಕ್ಕೆ ಕೇಳುವುದಕ್ಕಾಗುವುದಿಲ್ಲ. ಹಾ! ವತ್ಸನೇ, ವೃಷಸೇನನೇ, ನನ್ನ ಉತ್ಸಂಗದಲ್ಲಿ ಬೆಳೆದವನೇ, ನನ್ನ ಆಜ್ಞೆಯನ್ನು ನಡೆಸತಕ್ಕವನೇ, ಗದಾಯುಧನ ಪ್ರಿಯಶಿಷ್ಯನೇ, ರಾಧೇಯ ವಂಶಕ್ಕೆ ಅಂಕುರವಾಗಿದ್ದ ನೀನು ಶೌರ್ಯಕ್ಕೆ ಸಮುದ್ರವಾಗಿದ್ದೆಯಲ್ಲಾ! ದುಶ್ಯಾಸನನಿಗೂ, ನಿನಗೂ ನಾನು ಭೇದವನ್ನೇ ತಿಳಿದಿರಲಿಲ್ಲವಲ್ಲಾ! ಸರ್ವ ಗುರುವತ್ಸಲನೇ, ಪ್ರಿಯದರ್ಶನನೇ, ನನಗೊಂದು ಪ್ರತ್ಯುತ್ತರವನ್ನು ಕೊಡು. ಕಷ್ಟ! ಕಷ್ಟ! ಆ ವಿಸ್ತಾರವಾದ ಕಣ್ಣಿನಿಂದ ಕೂಡಿ ಜಗತ್ತನ್ನೇ ಉದಯಿಸಿದ ಚಂದ್ರನಂತೆ ಪ್ರಕಾಶಿ

ಸುತ್ತ, ಯೌವನವು ಆಗ ತಾನೆ ಉಂಟಾಗಿದ್ದುದರಿಂದ, ಮನೋಹರವಾದ ಕಾಂತಿಯುಳ್ಳ ಆ ಕುಮಾರನ ಮುಖವನ್ನು ಆ ಕರ್ಣನು ಹೇಗೆ ನೋಡಿದನೋ ಕಾಣೆ.

ಸಾರಥಿ:—ಆಯುಷ್ಮಂತನೇ, ಶೋಕಾವೇಗವು ಸಾಕು.

ದುರ್ಯೋಧನ:—ಸಾರಥಿಯೇ, ಪುಣ್ಯವಂತರೇ, ದುಃಖಭಾಗಿಗಳು ನಮಗೊ ಅಂದರೆ, ಪ್ರತ್ಯಕ್ಷವಾಗಿ ಬಂಧುಗಳು ಹತವಾಗಿ, ಈ ಅವಮಾನವೆಂಬ ಬೆಂಕಿಯಿಂದ ಹೃದಯವು ಸುಟ್ಟುಹೋಗುತ್ತಲಿದೆ. ದುಃಖವೆಲ್ಲಿ? ವ್ಯಥೆಯೆಲ್ಲಿ? (ಎಂದು ಮೂರ್ಛಿತನಾಗುವನು.)

ಸಾರಥಿ:—ಸಮಾಧಾನ ಹೊಂದು, ಸಮಾಧಾನ ಹೊಂದು.

ದುರ್ಯೋಧನ:—(ಹಾಗೆಯೇ ಚೇತರಿಸಿಕೊಂಡು) ಸುಂದರಕನೇ, ಮಿತ್ರನಾದ ಅಂಗರಾಜನು ಏನು ಮಾಡಿದನು?

ಸುಂದರಕ:—ಮಹಾರಾಜನೇ, ಆ ವಿಧವಾದ ಮಗನನ್ನು ನೋಡಿದ ಒಡನೆಯೇ ಅಳುವುದನ್ನು ಬಿಟ್ಟು, ಶತ್ರುಗಳ ಪ್ರಹಾರವನ್ನು ಲಕ್ಷ್ಯೀಕರಿಸದೆ, ಕರ್ಣನು ಅರ್ಜುನನ ಮೇಲೆ ಬಿದ್ದನು. ಹೀಗೆ ಪುತ್ರವಧದಿಂದ ರೇಗಿ, ದುಃಖವನ್ನೂ, ಭಯವನ್ನೂ ತೊರೆದು ಕರ್ಣನು ಹಾಗೆ ಮೇಲೆ ಬೀಳುವುದನ್ನು ನೋಡಿ, ಭೀಮ, ನಕುಲ, ಸಹದೇವ, ಪಾಂಚಾಲರುಗಳು ಅರ್ಜುನನ ರಥವನ್ನು ಮರೆ ಮಾಡಿಬಿಟ್ಟರು. ಅನಂತರದಲ್ಲಿ ಅರ್ಜುನನ ಬಿಲ್ಲಿನಿಂದ ಪ್ರಳಯ ಕಾಲದ ಮೇಘದಿಂದ ಹೊರಡುವ ಜಲಧಾರೆಗಳಂತೆ ಬಾಣಗಳು ಹೊರಟು, ಹತ್ತು ದಿಕ್ಕುಗಳನ್ನೂ ಮುಚ್ಚಿಬಿಟ್ಟವು. ಆಗ ಶಲ್ಯನು ಕರ್ಣನನ್ನು ಕುರಿತು,—''ಅಂಗರಾಜನೇ, ರಥದ ಕುದುರೆಗಳು ಸಂಹೃತಗಳಾಗಿವೆ. ಚಕ್ರದ ಪಟ್ಟಿಯು ಬಿಟ್ಟುಹೋಗಿಬಿಟ್ಟಿದೆ. ಆದ್ದರಿಂದ ಈ ಸಮಯದಲ್ಲಿ ಭೀಮಾರ್ಜುನರ ಎದುರಿಗೆ ನಿಲ್ಲುವುದು ಕಷ್ಟ'' ಎಂದು ಹೇಳಿ, ರಥವನ್ನು ತಿರುಗಿಸಿದನು. ಅನಂತರದಲ್ಲಿ ರಥದಿಂದಿಳಿದು, ಕರ್ಣನನ್ನು ಬಹಳವಾಗಿ ಸಮಾಧಾನಗೊಳಿಸಿದನು. ಅನಂತರದಲ್ಲಿ ಕರ್ಣನು ಬಹಳ ಹೊತ್ತು ಸುಮ್ಮನಿದ್ದು, ಇನ್ನೊಂದು ರಥವನ್ನು ತರುವಂತೆ ಶಲ್ಯನಿಗೆ ಹೇಳಿದನು. ಪರಿಜನರು ಇನ್ನೊಂದು ರಥವನ್ನು ತಂದಾಗ, ನನ್ನನ್ನು ನೋಡಿ, ಸಮೀಪಕ್ಕೆ

ಕರೆದು, ಒಂದು ಪತ್ರವನ್ನು ತೆಗೆದುಕೊಂಡು ಬಾಣದ ತುದಿಯನ್ನು ರಕ್ತದಲ್ಲಿ ಅದ್ದಿ, ಒಂದು ಕಾಗದವನ್ನು ಬರೆದು ಕಳುಹಿಸಿದನು. (ಎಂದು ಕೊಡುವನು.)

(ದುರ್ಯೋಧನನು ತೆಗೆದುಕೊಂಡು ಓದುವನು.)

ಸ್ವಸ್ತಿ, ಶ್ರೀಮತ್ ಮಹಾರಾಜ ದುರ್ಯೋಧನನಿಗೆ ಕರ್ಣನು ಕತ್ತುಕಟ್ಟಿಕೊಂಡು, ಈ ವೃತ್ತಾಂತವನ್ನು ವಿಜ್ಞಾಪಿಸಿಕೊಳ್ಳುತ್ತಾನೆ. ಶಸ್ತ್ರಾಸ್ತ್ರಗಳಲ್ಲಿ ಸಮರ್ಥನಾದವನು ಇವನು ಹೊರತು, ಇನ್ನಾರೂ ಇಲ್ಲವು. ಇವನು ನನ್ನ ಸಹೋದರರಿಗಿಂತಲೂ ನನಗೆ ಬಹಳ ಇಷ್ಟನು. ಇವನು ಕುಂತೀಪುತ್ರರನ್ನು ಜಯಿಸುವನು ಎಂದು ನೀನು ನನ್ನನ್ನು ಬಹಳವಾಗಿ ಗೌರವಿಸುತ್ತಿದ್ದೆ. ಈ ನಾನು ದುಶ್ಶಾಸನನ ಶತ್ರುವಾದ ಭೀಮನನ್ನು ಕೊಲ್ಲಲಿಲ್ಲ. ನಿನ್ನ ಭುಜಬಲದಿಂದಲಾಗಲೀ, ಕಣ್ಣೀರಿನಿಂದಲಾಗಲೀ ದುಃಖಕ್ಕೆ ಪ್ರತಿಕ್ರಿಯೆಯನ್ನು ಮಾಡಿಕೋ.

ದುರ್ಯೋಧನ:—ಮಿತ್ರನೇ, ಕರ್ಣನೇ ಇದು ಏನು? ನೂರು ತಮ್ಮಂದಿರುಗಳನ್ನು ಕಳೆದುಕೊಂಡು ದುಃಖಪಡುತ್ತಿರುವ ನನ್ನನ್ನು ಈ ವಾಗ್ಬಾಣದಿಂದ ಹೊಡೆಯುವೆಯಲ್ಲಾ! ಸುಂದರಕನೇ, ಈಗ ಕರ್ಣನೇನು ಮಾಡುತ್ತಿರುವನು?

ಸುಂದರಕ:—ಮಹಾರಾಜನೇ, ಶರೀರದ ಆವರಣವನ್ನು ತೆಗೆದು ಬಿಸುಟು, ಆತ್ಮವಧದಲ್ಲಿ ಕೃತಸಂಕಲ್ಪನಾಗಿ, ತಾನೇ ಯುದ್ಧವನ್ನು ಹುಡುಕುತ್ತಿದ್ದಾನೆ.

ದುರ್ಯೋಧನ:—(ಕೋಪ ಚಾಂಗ್ರತೆ ಎದ್ದು) ಸಾರಥಿಯೇ, ರಥವನ್ನು ತೆಗೆದುಕೊಂಡು ಬಾ. ಸುಂದರಕನೇ, ನೀನು ಹೋಗಿ ಕರ್ಣನನ್ನು ಕುರಿತು "ನೀನು ಈಗ ಯುದ್ಧದಲ್ಲಿ ಜಯಾಕಾಂಕ್ಷಿಯಲ್ಲ. ನಮ್ಮಿಬ್ಬರ ಸಂಕಲ್ಪವೂ ಒಂದೇ ಆಗಿರುವುದು. ಆದರೆ ಪಾಂಡವರನ್ನು ಕೊಂದು, ಬಂಧುವರ್ಗಕ್ಕೆ ತರ್ಪಣವನ್ನು ಕೊಟ್ಟು, ಕಳೆದುಹೋದ ಬಂಧುಗಳೊಡನೆಯೂ, ಮಂತ್ರಿಗಳೊಡನೆಯೂ ಕಣ್ಣೀರು ಸುರಿಸಿಕೊಂಡು, ಪರಸ್ಪರ ಆಲಿಂಗನವನ್ನು ಮಾಡಿಕೊಂಡು, ಈ ಪಾಳು ಶರೀರವನ್ನು ದುಃಖನನ್ನು ಹೊಂದಿಯಾಗಲೀ, ಸುಖ

ವನ್ನು ಹೊಂದಿಯಾಗಲೀ ತ್ಯಾಗ ಮಾಡೋಣ. ದುಃಖ ವಿಷಯದಲ್ಲಿ ನಾನು ನಿನಗೇನೂ ಹೇಳಿ ಕಳುಹಿಸಬೇಕಾಗಿಯೇ ಇಲ್ಲ. ಏಕೆಂದರೆ, ವೃಷಸೇನನು ನನ್ನ ಮಗನಲ್ಲವೇ? ದುಶ್ಶಾಸನನು ನಿನ್ನ ತಮ್ಮನಲ್ಲವೇ? ಹೀಗಿರುವಾಗ ನನಗೆ ನೀನೇನು ಬೋಧಿಸುವಿ? ನಾನು ನಿನಗೇನು ಬೋಧಿಸುವೆನು? ಎಂದು ಕರ್ಣನಿಗೆ ಹೇಳು.

ಸುಂದರಕ:—ಅಪ್ಪಣೆ (ಎಂದು ಹೊರಟುಹೋಗುವನು.)

ದುರ್ಯೋಧನ:—ಇದೇನು ರಥದ ಧ್ವನಿಯಾಗುವಂತಿದೆ.

ಸಾರಥಿ:—(ಕಿವಿಗೊಟ್ಟು) ಆಯುಷ್ಮಂತನೆ, ಕುದುರೆಗಳ ಧ್ವನಿಯೊಂದಿಗೆ ರಥದ ಧ್ವನಿ ಇದೆ. ಪರಿಜನರು ರಥವನ್ನು ತಂದಿರಬೇಕು.

ದುರ್ಯೋಧನ:—ಹೋಗು, ನೀನು ಸಿದ್ಧಪಡಿಸು. ಅಪ್ಪಣೆ (ಎಂದು ಸಾರಥಿಯು ಹೋಗಿ ಪುನಃ ಪ್ರವೇಶಿಸುವನು.)

ದುರ್ಯೋಧನ:—(ನೋಡಿ) ಏಕೆ ರಥವನ್ನು ಹತ್ತಲಿಲ್ಲ?

ಸಾರಥಿ:—ಮಹಾರಾಜನೆ, ನಿಮ್ಮ ತಂದೆಯಾದ ಧೃತರಾಷ್ಟ್ರನೂ, ಮಾತೆಯಾದ ಗಾಂಧಾರಿಯೂ, ಸಂಜಯನೂ ಸಹ ರಥದಲ್ಲಿ ಕುಳಿತುಕೊಂಡು ಬರುತ್ತಿರುವರು.

ದುರ್ಯೋಧನ:—ಕಷ್ಟ! ಕಷ್ಟ! ದೈವವು ಬಹಳ ಘೋರ ಕೆಲಸವನ್ನು ಮಾಡುತ್ತಿರುವುದು. ಸಾರಥಿಯೇ ಜಾಗ್ರತೆಯಾಗಿ ಹೋಗಿ ರಥವನ್ನು ತೆಗೆದುಕೊಂಡು ಬಾ. ನಾನು ತಂದೆಗೆ ಕಾಣದಂತೆ ಏಕಾಂತದಲ್ಲಿ ಎಲ್ಲಿಯಾದರೂ ಹೋಗಿ ಕುಳಿತುಕೊಳ್ಳುವೆನು?

ಸಾರಥಿ:—ಆಯುಷ್ಮಂತನೆ, ಅವರಿಬ್ಬರಿಗೂ ನೀನೊಬ್ಬನೇ ಉಳಿದಿರುವುದರಿಂದ ಅವರನ್ನು ಸಮಾಧಾನ ಪಡಿಸಬೇಡವೆ?

ದುರ್ಯೋಧನ:—ಸಾರಥಿಯೇ, ಅದೃಷ್ಟಹೀನನಾದ ನಾನು ಹೇಗೆ ತಾನೆ ಸಮಾಧಾನ ಪಡಿಸಲಿ? ನೋಡು, ಈಗ ತಾನೇ ನಾನೂ, ದುಶ್ಶಾಸನನೂ ಸಹ ತಾಯಿಯನ್ನೂ, ತಂದೆಯನ್ನೂ ನಮಸ್ಕರಿಸಿ, ಅವರು ನಮ್ಮ ಶಿರಸ್ಸನ್ನು ಆಘ್ರಾಣ ಮಾಡಿ, ಕಳುಹಿಸಿದ ಮೇಲೆ ಇಬ್ಬರೂ ಯುದ್ಧಕ್ಕೆ ಬಂದೆವು. ಆ

ಬಾಲಕನಾದ ದುಶ್ಶಾಸನನು ಶತ್ರುವಿನ ಕೈಯಿಂದ ಆ ವಿಧವಾದ ಅವಸ್ಥೆಯನ್ನು ಹೊಂದಿದ ಮೇಲೆ, ನಾಚಿಕೆ ಇಲ್ಲದೆ ತಾಯಿ ತಂದೆಗಳ ಸಮೀಪಕ್ಕೆ ಹೋಗಿ ಏನು ಹೇಳಲಿ? ಆದರೂ ಗುರುಗಳನ್ನು ಅವಶ್ಯಕವಾಗಿ ನಮಸ್ಕರಿಸಬೇಕು. (ಎಂದು ಹೊರಟುಹೋಗುವನು.)

ಇತಿ ಚತುರ್ಥಾಂಕ.

---

## ಪಂಚಮಾಂಕ

---

(ರಥಾರೂಢರಾಗಿ ಸಂಜಯನೂ, ಗಾಂಧಾರಿಯೂ, ಧೃತರಾಷ್ಟ್ರನೂ ಪ್ರವೇಶಿಸುವರು.)

ಧೃತರಾಷ್ಟ್ರ:—ಸಂಜಯನೆ, ಕುರುಕುಲದ ಕಾನನಕ್ಕೆ ಒಂದು ಚಿಗುರಂತಿರುವ ವತ್ಸ ದುರ್ಯೋಧನನು ಎಲ್ಲಿದಾನೆ? ಬದುಕಿದಾನೆಯೋ? ಇಲ್ಲವೇ? ಹೇಳು.

ಗಾಂಧಾರಿ:—ಸಂಜಯ, ವತ್ಸನು ನಿಜವಾಗಿಯೂ ಬದುಕಿದಾನೆಯೇ? ಎಲ್ಲಿದಾನೆ? ಹೇಳು.

ಸಂಜಯ:—ಮಹಾರಾಜನೇ, ಇಗೋ ಈ ಆಲದ ಮರದ ನೆರಳಿನಲ್ಲಿ ಒಬ್ಬನೇ ಕುಳಿತಿರುವನು.

ಗಾಂಧಾರಿ:—ಒಬ್ಬನೇ ಕುಳಿತಿರುವನೆಂದು ಹೇಳುವೆಯಲ್ಲಾ. ಅವನ ಪಕ್ಕದಲ್ಲಿ ಅವನ ನೂರು ಜನ ತಮ್ಮಂದಿರುಗಳಿಲ್ಲವೇ?

ಸಂಜಯ:—ತಂದೆಯೇ, ಮಾತೆಯೇ, ರಥದಿಂದ ನಿಧಾನವಾಗಿ ಇಳಿಯಿರಿ. (ಇಬ್ಬರೂ ಇಳಿಯುವರು.)

ಸಂಜಯ:—(ದುರ್ಯೋಧನನ ಸಮೀಪಕ್ಕೆ ಬಂದು) ಮಹಾರಾಜನಿಗೆ ಜಯವಾಗಲಿ. ತಂದೆಯೂ, ಮಾತೆಯೂ ನಿಮ್ಮ ಬಳಿ ಬಂದಿರುವರು. ನೀನು ನೋಡಿದಂತೆಯೇ ಕಾಣಿಸುವುದಿಲ್ಲವಲ್ಲಾ.

(ದುರ್ಯೋಧನನು ಅಸ್ಥೈರ್ಯವನ್ನು ಅಭಿನಯಿಸುವನು.)

ದೃತರಾಷ್ಟ್ರ:—ಈ ಯುದ್ಧದಲ್ಲಿ ವತ್ಸನು ಶತ್ರುಗಳನ್ನು ಗೆದ್ದು ಹಿಂತಿರುಗಿ ಬರುವನು, ಕವಚವನ್ನು ಶರೀರದಿಂದ ತೆಗೆಯುವನು, ದೇಹದಲ್ಲಿ ಹೊಕ್ಕಿಕೊಂಡಿರುವ ಬಾಣಗಳನ್ನು ಚಿಮುಟಗಳಿಂದ ತೆಗೆದು ಗಾಯಗಳಿಗೆ ಮುಲಾಮನ್ನು ಹಾಕಿ ಬಟ್ಟೆಯನ್ನು ಕಟ್ಟಿ ದಿಂಬನ್ನು ಒರಗಿಕೊಂಡು ಯುದ್ಧದಿಂದ ಜಯಿಸಿ ಬಂದ ರಾಜರುಗಳನ್ನು ವಿಲಾಸದಿಂದ ನೋಡುತ್ತಾ ಕುಳಿತಿರುವನು. ಆ ಸಮಯದಲ್ಲಿ ಮೃದುವಾದ ಮಾತಿನಿಂದ ವತ್ಸನೇ, ವೇದನೆಯು ಸಹ್ಯವಾಗಿದೆಯೇ ಎಂದು ಕಿವಿಯಲ್ಲಿ ಕೇಳಬೇಕೆಂದಿದ್ದೆನು. ಮಂದಭಾಗ್ಯನಾದ ನನಗೆ ಅದೃಷ್ಟವಿಲ್ಲದೇ ಹೋಯಿತು.

ದುರ್ಯೋಧನ:—(ದುಃಖವನ್ನು ತೋರಿಸುವನು.) (ಗಾಂಧಾರಿ ಧೃತರಾಷ್ಟ್ರರಿಬ್ಬರೂ ಅವನ ಶರೀರವನ್ನು ಮುಟ್ಟಿ ನೋಡಿ ಆಲಿಂಗಿಸಿಕೊಳ್ಳುವರು.)

ಗಾಂಧಾರಿ:—ವತ್ಸನೇ, ಯುದ್ಧದ ಪ್ರಹಾರದಿಂದ ವ್ಯಾಕುಲನಾದ ನಿನಗೆ ನಮ್ಮೊಂದಿಗೆ ಮಾತನಾಡುವುದಕ್ಕಾಗುವುದಿಲ್ಲವೇ?

ಧೃತರಾಷ್ಟ್ರ:—ವತ್ಸನೇ, ದುರ್ಯೋಧನನೇ, ಹಿಂದೆ ಯಾವಾಗಲೂ ನನ್ನಲ್ಲಿ ಮಾತನಾಡದೇ ಇರುತ್ತಿರಲಿಲ್ಲವಲ್ಲಾ!

ಗಾಂಧಾರಿ:—ವತ್ಸನೇ, ನೀನು ನಮ್ಮಲ್ಲಿ ಮಾತನಾಡದೆ ಹೋದರೆ ದುಶ್ಶಾಸನನು ಮಾತನಾಡಿಸುವನೇ? ದುರ್ಮರ್ಷಣನು ಮಾತನಾಡಿಸುವನೇ? ವಿಕರ್ಣನು ಮಾತನಾಡಿಸುವನೇ? (ಎಂದಳುವಳು.)

ದುರ್ಯೋಧನ:—ಮಾತೇ, ತಮ್ಮನು ನಾಶವಾಗುತ್ತಿರುವಾಗ ಯಾವ ಪ್ರತಿಕ್ರಿಯೆಯನ್ನೂ ಮಾಡದೆ, ಪಾಪಿಯಾದ ನಾನು ನೋಡುತ್ತಲೇ ಇದ್ದೆನು. ನಿನಗೂ ತಂದೆಗೂ ಸಹ ಕಣ್ಣೀರನ್ನು ಬಹಳವಾಗಿ ಹೆಚ್ಚಿಸಿದೆನು. ನಿರ್ಮಲವಾದ ಈ ಭರತವಂಶದಲ್ಲಿ ದುಷ್ಟನಾಗಿ ನಾನು ಹುಟ್ಟಿದೆನು. ಮಕ್ಕಳುಗಳೆಲ್ಲರನ್ನೂ ನಾಶಮಾಡುವ ನನ್ನನ್ನು ಮಗನೆಂದು ಏಕೆ ತಿಳಿದಿರುವಿ?

ಗಾಂಧಾರಿ:—ಪ್ರತಿಕ್ರಿಯೆ ಯೋಚನೆಯೇ ಬೇಡ. ನೀನು ಒಬ್ಬನಾದರೂ ಕುರುಡರಾದ ನಮ್ಮಿಬ್ಬರಿಗೆ ಮಾರ್ಗವನ್ನು ತೋರಿಸುತ್ತಾ ಬಹುಕಾಲ ಬದುಕು. ನಿನಗೆ ರಾಜ್ಯವು ಏಕೆ? ವೈರವು ಏಕೆ?

ದುರ್ಯೋಧನ:—ತಾಯಿಯೇ, ನೀನು ಸುಕ್ಷತ್ರಿಯೆಯಾಗಿ ಇಂತಹ ವಚನಗಳನ್ನಾಡಬಾರದು. ಇದು ನಿನಗೆ ತಕ್ಕದ್ದಲ್ಲ. ನೂರು ಮಕ್ಕಳುಗಳು ಇಂತಹ ವಿಪತ್ತನ್ನು ಹೊಂದಿರುವಾಗ ಅವರನ್ನು ನೀನು ಚಿಂತಿಸುವುದೇ ಇಲ್ಲ. ಅಯೋಗ್ಯನಾದ ನನ್ನನ್ನು ರಕ್ಷಿಸಲು ಪ್ರಯತ್ನಿಸುತ್ತೀಯೆ.

ಸಂಜಯ:—ಮಹಾರಾಜನೇ, ಬಿಂದಿಗೆಯು ಬಾವಿಗೆ ಬಿದ್ದರೆ ಹಗ್ಗವನ್ನು ಬಾವಿಗೆ ಎಸೆಯಬೇಕೆ? ಎಂದು ಲೋಕದಲ್ಲಿ ಗಾಥೆಯುಂಟು.

ದುರ್ಯೋಧನ:—ಈ ಗಾಥೆಯು ಯುಕ್ತಿಯುಕ್ತವಲ್ಲ. ಕಾರ್ಯನೇ ನಷ್ಟವಾದಾಗ ಕಾರಣಗಳಿಂದೇನು ಪ್ರಯೋಜನ?

ಧೃತರಾಷ್ಟ್ರ:—(ದುರ್ಯೋಧನನನ್ನು ತಬ್ಬಿಕೊಂಡು) ವತ್ಸನೇ, ಸಮಾಧಾನ ಹೊಂದು. ಸಮಾಧಾನ ಹೊಂದು. ನನ್ನನ್ನೂ, ನಿನ್ನ ತಾಯಿಯನ್ನೂ ಸಮಾಧಾನ ಪಡಿಸು.

ದುರ್ಯೋಧನ.—ಈಗ ನಿಮ್ಮಗಳಿಗೆ ಸಮಾಧಾನವು ದುರ್ಲಭವು.

ಧೃತರಾಷ್ಟ್ರ:—ಏಕೆ ?

ದುರ್ಯೋಧನ:—ಈಗ ನಾನು ಪಾಂಡವರುಗಳನ್ನು ಕೊಂದರೆ ಕುಂತಿಯೂ, ನೀವೂ ಪುತ್ರಶೋಕದಲ್ಲಿ ಸಮಾನರಾಗುವುದರಿಂದ ನಿಮ್ಮ ಮಕ್ಕಳ ವಿಷಯದಲ್ಲಿ ನೀವು ದುಃಖಪಡದಿರಬಹುದು.

ಗಾಂಧಾರಿ:—ಮಗನೇ, ನೀನೊಬ್ಬನಾದರೂ ಬದುಕಿದ್ದರೆ, ಅದೇ ಬಹಳವಾದದ್ದೆಂದು ನಾನು ಭಾವಿಸುವೆನು. ಇನ್ನಾರನ್ನು ಕುರಿತು ನಾನು ದುಃಖಿಸಲಿ! ಆದ್ದರಿಂದ ಯುದ್ಧ ವ್ಯಾಪಾರಕ್ಕೆ ನಿನಗೆ ಇದು ಕಾಲವಲ್ಲ. ಪ್ರಸನ್ನನಾಗು. ಕೈಮುಗಿದು ಕೇಳಿಕೊಳ್ಳುತ್ತೇನೆ. ಸಮರ ವ್ಯಾಪಾರವನ್ನು ಬಿಡು. ನನ್ನ ಮಾತನ್ನು ನಡಿಸು.

ಧೃತರಾಷ್ಟ್ರ:—ವತ್ಸನೇ, ನಿನ್ನ ತಾಯಿಯ ಮಾತನ್ನು ಕೇಳು. ಬಂಧುವರ್ಗವನ್ನೆಲ್ಲವನ್ನೂ ಕಳೆದುಕೊಂಡಿರುವ ನನ್ನ ಮಾತನ್ನು ಕೇಳು. ನೋಡು, ಯಾರ ಬಲದಿಂದ ನಿನ್ನ ಜ್ಞಾತಿಗಳನ್ನು ನೀನು ರಕ್ಷಿಸಲಿಲ್ಲವೋ ಆ ದ್ರೋಣ

ಭೀಷ್ಮರುಗಳು ಯುದ್ಧದಲ್ಲಿ ಹತರಾಗಿ ಹೋದರು. ಕರ್ಣನ ಮುಂದೆಯೇ ಅವನ ಮಗನಾದ ವೃಷಸೇನನನ್ನು ಸಂಹರಿಸಿದ ಅರ್ಜುನನಿಗೆ ಈ ಸಮಸ್ತ ಪ್ರಪಂಚವೂ ಭಯಪಡುತ್ತಲಿದೆ. ನನ್ನ ಮಕ್ಕಳನ್ನೆಲ್ಲ ನನ್ನು ಸಂಹರಿಸಿ ನಿನ್ನ ವಿಷಯದಲ್ಲಿ ಶತ್ರುವಿನ ಪ್ರತಿಜ್ಞೆಯು ಈಗ ಉಳಿದಿರುತ್ತದೆ. ಪ್ಯಾಂಗಳಲ್ಲಿ ಕೋಪವನ್ನು ಬಿಡು. ಕುರುಡರಾದ ತಂದೆ ತಾಯಿಗಳನ್ನು ಕಾಪಾಡು.

ದುರ್ಯೋಧನ:—ಯುದ್ಧವನ್ನು ತೊರೆದು ನಾನು ಏನು ಮಾಡಬೇಕು?

ಗಾಂಧಾರಿ:—ಮಗನೆ, ತಂದೆಯೂ, ವಿದುರನೂ ನಿನು ಹೇಳುವರೋ ಅದನ್ನು ಮಾಡು.

ಸಂಜಯ:—ಇದು ಹೀಗೆಯೇ.

ದುರ್ಯೋಧನ:—ಸಂಜಯನೇ, ಉಪದೇಶಮಾಡುವುದನ್ನು ಇದೆಯೋ?

ಸಂಜಯ:—ಬದುಕಿರುವವರಿಗೂ ಜಯಶೀಲರಾದ ರಾಜರುಗಳಿಗೆ ಪ್ರಾಜ್ಞರಾದವರುಗಳು ಉಪದೇಶ ಮಾಡುತ್ತಲೇ ಇರಬೇಕು.

ದುರ್ಯೋಧನ:—(ಕೋಪದಿಂದ) ಹಾಗಾದರೆ ಪ್ರಾಜ್ಞನಾದ ನಿನ್ನಿಂದಲೇ ನನಗೆ ಯೋಗ್ಯವಾದ ಉಪದೇಶವನ್ನು ಕೇಳೋಣ.

ಧೃತರಾಷ್ಟ್ರ:—ವತ್ಸನೆ, ಯುಕ್ತವಾದ ಮಾತನ್ನು ಹೇಳುವ ಸಂಜಯನಲ್ಲಿ ಕೋಪ ಮಾಡಬೇಡ. ಸಹಜವಾಗಿ ನೀನು ಕೇಳುವುದಾದರೆ ನಾನೇ ಸ್ವಲ್ಪ ಹೇಳುತ್ತೇನೆ ಕೇಳು.

ದುರ್ಯೋಧನ:—ಹೇಳಬಹುದು.

ಧೃತರಾಷ್ಟ್ರ:—ಹೆಚ್ಚಾಗಿ ಏನು? ನೀನು ಈವಾಗ ಧರ್ಮರಾಯನೊಂದಿಗೆ ಇಷ್ಟವಾದ ಪಣಬಂಧದಿಂದ ಸಂಧಿಯನ್ನು ಮಾಡಿಕೊ?

ದುರ್ಯೋಧನ:—ತಂದೆಯೇ, ತಾಯಿಯು ಮಗನ ಮೇಲಿನ ಮಮತೆಯಿಂದ ದೀನಳಾಗಿಯೂ, ಸಂಜಯನು ಬಾಲಭಾವದಿಂದಲೂ, ಬೇಕಾದುದನ್ನು ಹೇಳಬಹುದು. ನಿಮಗೂ ಈ ರೀತಿಯಾದ ವ್ಯಾಮೋಹವೆ? ಅಥವಾ ಪುತ್ರನಾಶದಿಂದ ಉಂಟಾದ ಶೋಕ ಸಂತಾಪವು ಹೀಗೆ ಹೇಳಿಸುತ್ತದೆ. ಮತ್ತೂ ತಂದೆಯೇ, ನೂರುಜನ ಸಹೋದರರೊಡನೆ ಕೂಡಿ ಇದ್ದಾಗಲೇ ವಾಸುದೇ

ಮನ ನಾನು ವಾಕ್ಯವನ್ನು ನಾನು ತಿರಸ್ಕಾರ ಮಾಡಿದೆನು. ಈಗ ಪಿತಾಮಹನಾದ ಭೀಷ್ಮನನ್ನೂ, ದ್ರೋಣಾಚಾರ್ಯನನ್ನೂ, ತಮ್ಮಂದಿರುಗಳನ್ನೂ, ಧಾರ್ಮಿಕ ರಾಜರುಗಳನ್ನೂ ಕಳೆದುಕೊಂಡು ನನ್ನ ಶರೀರವೊಂದರಲ್ಲಿ ಸ್ನೇಹವಿಟ್ಟಿರುವ ಶ್ರೇಷ್ಠರಾದ ಪುರುಷರುಗಳಿಗೆ ನಾಚಿಕೆಯನ್ನುಂಟುಮಾಡುವ ಸುಬುದ್ಧಿಯ ಸಂಧಿಯನ್ನು ಪಾಂಡವರೊಂದಿಗೆ ದುರ್ಯೋಧನನು ಹೇಗೆ ತಾನೆ ಮಾಡುವನು? ನೀತಿವಂತನಾದ ಸಂಜಯನೇ, ಕ್ಷಯವನ್ನು ಹೊಂದುತ್ತಿರುವ ಶತ್ರುಗಳೊಂದಿಗೆ ಜಯವನ್ನು ಪಡೆಯದೇ ಇರುವ ರಾಜರುಗಳು ಹೇಗೆ ತಾನೆ ಸಂಧಿಗೆ ಒಪ್ಪುವರು? ನಾನು ದುಶ್ಶಾಸನನನ್ನು ಕಳೆದುಕೊಂಡಿದ್ದೇನೆ. ಧರ್ಮರಾಯನು ತಮ್ಮಂದಿರುಗಳೊಡನೆ ಕೂಡಿದ್ದಾನೆ.

ಧೃತರಾಷ್ಟ್ರ:—ಹಾಗಿದ್ದರೂ, ನಾನು ಕೇಳಿಕೊಂಡರೆ, ಧರ್ಮರಾಯನು ಯಾವುದನ್ನೂ ಮಾಡದೇ ಇರುವುದಿಲ್ಲ. ಮತ್ತು ಧರ್ಮರಾಯನು ಯಾವಾಗಲೂ ತನ್ನನ್ನು ನಿಮಗಿಂತಲೂ ಕಡಿಮೆಯೆಂತಲೇ ತಿಳಿದುಕೊಂಡಿದ್ದಾನೆ.

ದುರ್ಯೋಧನ:—ಅದು ಹೇಗೆ?

ಧೃತರಾಷ್ಟ್ರ:—'ಒಬ್ಬ ತಮ್ಮನಿಗೆ ವಿಪತ್ತುಂಟಾದಾಗ್ಯೂ ನಾನು ಪ್ರಾಣವನ್ನು ಧರಿಸುವುದಿಲ್ಲ' ಎಂದು ಧರ್ಮರಾಯನು ಪ್ರತಿಜ್ಞೆ ಮಾಡಿರುವನು. ಯುದ್ಧದಲ್ಲಿ ಬಹಳ ಹೋರಾಡಿರುವುದರಿಂದ ತಮ್ಮಂದಿರಿಗೆ ಎಲ್ಲಿ ನಾಶ ಬರುವುದೋ ಎಂದು ಹೆದರಿ ನೀನು ಇಷ್ಟಪಟ್ಟ ಒಡನೆಯೇ ಸುಮ್ಮನಾಗಿ ಸಂಧಿಗೆ ಒಪ್ಪುವನು.

ಸಂಜಯ:—ಇದು ನಿಜ.

ಗಾಂಧಾರಿ:—ಮಗನೆ, ಯುಕ್ತಿಯುಕ್ತವಾದ ತಂದೆಯ ಮಾತನ್ನು ಒಪ್ಪಿಕೋ.

ದುರ್ಯೋಧನ:—ಮಾತೆಯೇ, ತಂದೆಯೇ, ಸಂಜಯನೇ, ಒಬ್ಬ ತಮ್ಮನು ನಷ್ಟವಾದರೆ ತಾನು ಸಾಯುವೆನೆಂದು ಧರ್ಮರಾಯನು ಪ್ರತಿಜ್ಞೆ ಮಾಡಿರುವನು. ನೂರು ಜನ ತಮ್ಮಂದಿರು ಸತ್ತು ಹೋದರೂ ಕೂಡ ದುರ್ಯೋಧನನು ಇನ್ನೂ ಜೀವಿಸಿದ್ದಾನೆ. ಆದ್ದರಿಂದ ದುಶ್ಶಾಸನನ ರಕ್ತವನ್ನು ಕುಡಿದ ಶತ್ರುವಾದ ಭೀಮನನ್ನು ಗದಾಘಾತದಿಂದ ಭೇದಿಸಿ ದಿಕ್ಕುಗಳಿಗೆ ಎಸೆಯದೆ ದೀನನಾಗಿ ನಾನು ಸಂಧಿಯನ್ನು ಮಾಡಿಕೊಳ್ಳಲೇ?

ಗಾಂಧಾರಿ:—ಹಾ ಮಗನೇ! ದುಶ್ಶಾಸನನೇ, ಹಾ ದುರ್ಮರ್ಷಣನೇ! ಹಾ ದುರ್ವಿನಯನೇ! ಹಾ ವಿಕರ್ಣನೇ! ಮಂದಭಾಗ್ಯಳಾದ ನನಗುಂಟಾದ ಈ ವಿಧವಾದ ವಿಪತ್ತನ್ನು ಲೋಕದಲ್ಲಿ ಹಿಂದೆ ಎಲ್ಲಿಯೂ ಕೇಳಿಯೇ ಇಲ್ಲವಲ್ಲಾ. ಅಯ್ಯೋ ಗಾಂಧಾರಿಯೇ, ನೀನು ನೂರು ಮಕ್ಕಳನ್ನು ಹೆರಲಿಲ್ಲ. ನೂರು ದುಃಖಗಳನ್ನು ಹೆತ್ತೆ. (ಎಲ್ಲರೂ ಅಳುವರು.)

ಸಂಜಯ:—(ಕಣ್ಣೀರು ಬಿಟ್ಟುಕೊಂಡು) ತಂದೆಯೇ, ಮಾತೆಯೇ, ಮಹಾರಾಜನನ್ನು ಸಮಾಧಾನ ಪಡಿಸುವುದಕ್ಕೆ ನೀವು ಇಲ್ಲಿಗೆ ಬಂದಿರಿ. ನೀವಾದರೂ ಸಮಾಧಾನವನ್ನು ಹೊಂದಬಾರದೆ?

ಧೃತರಾಷ್ಟ್ರ:—ವತ್ಸ, ದುರ್ಯೋಧನ, ಹೀಗೆ ದೈವವು ನಮಗೆ ವಿಮುಖವಾಗಿ ನೀನೂ ಶತ್ರುಗಳಲ್ಲಿ ದ್ವೇಷವನ್ನು ಬಿಡದೆ ಇದ್ದರೆ ನಿನ್ನ ಪ್ರಾಣ ಒಂದನ್ನೇ ಆಶ್ರಯಿಸಿಕೊಂಡಿರುವ ಗಾಂಧಾರಿಗೆ ಗತಿಯೇನು? ನನಗೇನು ಗತಿ?

ದುರ್ಯೋಧನ:—ಕೇಳಿರಿ. ಜಗತ್ತನ್ನೆಲ್ಲಾ ವಶಪಡಿಸಿಕೊಂಡು, ಯಥೇಷ್ಟವಾಗಿ ಐಶ್ವರ್ಯವನ್ನು ಅನುಭವಿಸಿ, ಶತ್ರುಗಳನ್ನು ತಿರಸ್ಕರಿಸಿ, ಅನೇಕ ರಾಜರುಗಳಿಂದ ನಮಸ್ಕಾರ ಮಾಡಿಸಿಕೊಂಡು, ಯುದ್ಧದಲ್ಲಿ ಶತ್ರುಗಳ ಎದುರಿಗೆ ಹೊಡೆದಾಡಿ, ನಿನ್ನ ನೂರು ಮಕ್ಕಳುಗಳೂ ಹತರಾದರು. ಆದ್ದರಿಂದ ಈಗ ನೀನು ನನ್ನ ತಾಯಿಯೊಂದಿಗೆ ಸಗರನಂತೆ ದುಃಖವನ್ನು ಸಹಿಸಿಕೊ. ಹಾಗೆ ನಾನು ಯುದ್ಧವನ್ನು ಮಾಡದೆ ನನ್ನ ಪ್ರಾಣವನ್ನು ನಾನು ಕಾಪಾಡಿಕೊಳ್ಳುವ ಪಕ್ಷದಲ್ಲಿ ಹಿಂದೆ ಯಾವಾಗಲೂ ಮೀರದೇ ಇರುವ ಕ್ಷಾತ್ರಧರ್ಮಕ್ಕೆ ತಪ್ಪಿದಂತಾಗುವುದು.

(ತೆರೆಯಲ್ಲಿ ಬಹು ಕೋಲಾಹಲವಾಗುವುದು.) ಗಾಂಧಾರಿಯು (ಭಯದಿಂದ) ಸಂಜಯನೇ, ಇದು ಏನು ಹಾ ಹಾಕಾರದೊಂದಿಗೆ ಕೂಡಿರುವ ವಾದ್ಯ ಘೋಷವು ಕೇಳಿಸುವುದು.

ಸಂಜಯ:—ಮಾತೆಯೇ, ಭೀರುಗಳಿಗೆ ಇದು ಸ್ಥಳವಲ್ಲ.

ಧೃತರಾಷ್ಟ್ರ:—ಸಂಜಯನೇ, ಭಯಂಕರವಾದ ಈ ಕಲಕಲಶಬ್ದವು ಯಾವುದೆಂದು ತಿಳಿದುಕೊಂಡು ಬಾ. ಇದಕ್ಕೆ ಕಾರಣವು ಬಲವಾಗಿರಬೇಕು.

ದುರ್ಯೋಧನ.—ತಂದೆಯೇ, ಪ್ರಸನ್ನನಾಗು. ನಮಗೆ ದೈವವು ಕುಟಿಲವಾಗಿದೆ. ಇನ್ನೊಂದು ದುಃಖವನ್ನು ಕೇಳುವುದಕ್ಕೆ ಮೊದಲೇನೇ ಯುದ್ಧಕ್ಕೆ ಹೋಗುಗುವುದಕ್ಕೆ ನನಗೆ ಸಮ್ಮತಿಯನ್ನು ಕೊಡು.

ಗಾಂಧಾರಿ:—ಮಗನೇ, ಒಂದು ಮುಹೂರ್ತವಾದರೂ ಅಂಧಳಾಗಿಯೂ, ಅನಾಥಳಾಗಿಯೂ ಇರುವ ನನ್ನನ್ನು ಸಮಾಧಾನಗೊಳಿಸು.

ಧೃತರಾಷ್ಟ್ರ:—ಮಗನೇ, ಯುದ್ಧದಲ್ಲಿ ಮಾಡಿರುವ ನಿಶ್ಚಯವನ್ನು ನೀನು ಬಿಡುವುದಿಲ್ಲ. ಆದರೂ ರಹಸ್ಯವಾಗಿ ಅವರನ್ನು ಕೊಲ್ಲುವ ಉಪಾಯವನ್ನು ಯೋಚಿಸು.

ದುರ್ಯೋಧನ:—ನನ್ನ ಎದುರಿಗೇನೇ ನನ್ನ ಸಮಸ್ತ ಬಂಧುಗಳನ್ನೂ ಕೊಂದಿರುವ ಶತ್ರುಗಳನ್ನು ರಹಸ್ಯವಾಗಿ ಕೊಲ್ಲುವುದು ಯೋಗ್ಯವಲ್ಲ. (ಪ್ರಕಾಶವಾಗಿ) ಅವರಂತೆಯೇ ನಾನೂ ನಡತೆ ಹೋದರೆ ಅಂಥಾ ಗೂಢವಾದ ಅಪಕಾರ ಪ್ರತೀಕಾರದಿಂದ ಪ್ರಯೋಜನವೇನು?

ಗಾಂಧಾರಿ:—ನೀನು ಒಬ್ಬನೇ ಆಗಿರುವಿ. ನಿನಗೆ ಸಹಾಯಕರಾರು?

ದುರ್ಯೋಧನ:—ಮಾತೆ, ನಾನು ಒಬ್ಬನು ಆದರೂ, ನಿನ್ನ ಮಕ್ಕಳುಗಳನ್ನು ನಾಶಮಾಡಿದ ಆ ಶತ್ರುಗಳು ಬಹಳವಾಗಿರುವರು. ದೈವವು ಮಾತ್ರ ಅನುಕೂಲವಾಗಲಿ. ಭೂಮಿಯಲ್ಲಿ ಪಾಂಡವರಿಲ್ಲದಂತೆ ಮಾಡುವೆನು.

(ತೆರೆಯಲ್ಲಿ) ಎಲೈ ಭಟರುಗಳಿರಾ, ಕೌರವೇಶ್ವರನಿಗೆ ತಿಳಿಸಿರಿ. ಈ ಮಹಾಯುದ್ಧವು ನಡೆಯಿತು. ಅನಿಷ್ಟವನ್ನು ಕೇಳುವುದರಲ್ಲಿ ಪರಾಙ್ಮುಖನಾಗದೇ ಕಾಲಾನುಗುಣವಾಗಿ ಪ್ರತಿಕ್ರಿಯೆಯನ್ನು ಮಾಡಬೇಕಾಗಿದೆ. ಯುದ್ಧದ ಮಧ್ಯದಿಂದ ಕೈಯಲ್ಲಿದ್ದ ಕೋದಂಡವು ಬಿದ್ದುಹೋಗಿ, ಕಡಿವಾಣವನ್ನೂ ಬಿಟ್ಟು ಅರ್ಜುನನ ಬಾಣಗಳು ಮೈಯಲ್ಲೆಲ್ಲಾ ಚುಚ್ಚಿಕೊಂಡು ಕುದುರೆಗಳು ತಾನಾಗಿಯೇ ಶಲ್ಯನ ಸಹಾಯದಿಂದ ಎಳೆದುಕೊಂಡು ಹೋಗುತ್ತಿರುವ ರಥದಲ್ಲಿ ಕರ್ಣನೆಲ್ಲೆಂದು ಕೇಳಿದವರಿಗೆ ಕಣ್ಣೀರಿನಿಂದಲೇ ಉತ್ತರವನ್ನು ಕೊಡುತ್ತಾ, ಶಲ್ಯನು ಬಹು ದುಃಖದಿಂದ ಶಿಬಿರಕ್ಕೆ ಬರುತ್ತಿದ್ದಾನೆ.

ದುರ್ಯೋಧನ.—ಯಾರು ಹೀಗೆ ಅಸ್ಪಷ್ಟವಾಗಿ ಮಾತನಾಡುವರು. ಯಾರಲ್ಲಿ ಏನೆಂದು ತಿಳಿದುಬಾ.

(ಗಾಬರಿಯಿಂದ ಸಾರಥಿಯು ಪ್ರವೇಶಿಸಿ) ಮಹಾರಾಜನೇ, ಹಾ! ಕೆಟ್ಟೆನು. (ಎಂದು ಕೆಳಗೆ ಬೀಳುವನು.)

ದುರ್ಯೋಧನ:—ಆಯುಷ್ಮಂತನೇ, ಇನ್ನೇನು ಹೇಳು.

ಸಾರಥಿ:—ಮಹಾರಾಜನೇ, ಇನ್ನೇನು? ಶೂನ್ಯವಾದ ಕರ್ಣನ ರಥದಲ್ಲಿ ಶೂನ್ಯವಾದ ಮನೋರಥದಂತೆ ಶಲ್ಯನು ಪ್ರವೇಶಿಸುತ್ತಾ ಜನಗಳಿಗೆ ಹೃದಯಕ್ಕೆ ಶಲ್ಯನಾಗಿ ಎಲ್ಲರನ್ನೂ ಮೂರ್ಛೆಗೊಳಿಸಿದನು.

ದುರ್ಯೋಧನ:—ಹಾ ಮಿತ್ರನೇ, ಕರ್ಣನೇ, (ಎಂದು ಮೂರ್ಛಿತನಾಗುವನು.)

ಗಾಂಧಾರಿ:—ಮಗನೇ, ಸೈರಿಸು, ಸೈರಿಸು.

ಸಂಜಯ:—ಮಹಾರಾಜನೇ, ಸಮಾಧಾನ ಹೊಂದು, ಸಮಾಧಾನ ಹೊಂದು.

ಧೃತರಾಷ್ಟ್ರ:—ಕಷ್ಟ! ಕಷ್ಟ! ಭೀಷ್ಮನೂ ದ್ರೋಣಾಚಾರ್ಯನೂ ಸತ್ತಮೇಲೆ ನನ್ನ ಮಗನಿಗೆ ಆಶ್ರಯಭೂತನಾಗಿ ಪರಮ ಮಿತ್ರನಾಗಿ ಇದ್ದ ಶೂರನಾದ ರಾಧೇಯನೂ ಸಹ ಸಂಹೃತನಾದನು. ವತ್ಸನೇ, ಸೈರಿಸು, ಸೈರಿಸು. ಭರತ ಕುಲಕ್ಕೆ ಪರಾಂಗ್ಮುಖವಾದ ಹಾಳು ವಿಧಿಯೇ? ಕುರುಡನಾದ ನಾನು ನೂರು ಜನ ಪುತ್ರರುಗಳನ್ನು ಕಳೆದುಕೊಂಡು ಮಹಾ ದುಃಖದ ದೆಶೆಯನ್ನು ಹೊಂದಿದೇನೆ. ಸಮಸ್ತರಾದ ಸ್ನೇಹಿತರನ್ನೂ, ಬಂಧುಗಳನ್ನೂ ಗುರುಗಳನ್ನೂ ಕಳೆದುಕೊಂಡಿರುವ ಈ ದುರ್ಯೋಧನನ ವಿಷಯದಲ್ಲಿಯೂ ನನ್ನನ್ನು ನಿರಾಶನನ್ನಾಗಿ ಮಾಡಿಬಿಟ್ಟೆ. ವತ್ಸನೇ, ದೀನಳಾದ ತಾಯನ್ನು ಸಮಾಧಾನ ಪಡಿಸು.

ದುರ್ಯೋಧನ:—(ಚೇತರಿಸಿಕೊಂಡು) ಅಯ್ಯೋ ಕರ್ಣನೇ? ಕಿವಿಗೆ ಸುಖವಾದ ಒಂದು ಮಾತನ್ನಾಡು. ನನ್ನಲ್ಲಿ ಸ್ಥಿರವಾದ ನಿನ್ನ ಸಂತೋಷವನ್ನು ತಿಳಿಸು. ಯಾವಾಗಲೂ ನಿನ್ನನ್ನು ಬಿಡದೇ ಯಾವಾಗಲೂ ಕೆಟ್ಟದ್ದನ್ನು ಮಾಡದೇ ಇರುವ ನನ್ನನ್ನು ಬಿಟ್ಟು ಏಕೆ ಹೋಗುವಿ? (ಎಂದು ಪುನಹ ಮೂರ್ಛೆ ಹೋಗುವನು. ಎಲ್ಲರೂ ಸಮಾಧಾನ ಪಡಿಸುವರು.)

ದುರ್ಯೋಧನ:—(ಪುನಃ ಎದ್ದು) ನನ್ನ ಪ್ರಾಣಕ್ಕಿಂತಲೂ ಹೆಚ್ಚಾದ ಅಂಗರಾಜನು ಹತನಾಗಿರುವಾಗ ಉಸಿರುಬಿಡುವುದಕ್ಕೂ ನಾನು ನಾಚಿಕೆ ಪಡುತ್ತಿದೇನೆ.

ತಂದೆಯೆ? ಸಮಾಧಾನದ ಕಥೆಯು ತಾನೇ ಎಲ್ಲಿ? ಮತ್ತು ಶತ್ರುಗಳಿಂದ ಹತನಾದ ದುಶ್ಶಾಸನನಿಗೋಸ್ಕರ ಅಳಬೇಕಾಗಿರುವಾಗಲೂ ನಾನು ಅಳುವುದಿಲ್ಲ. ಆ ಬಂಧುವರ್ಗಕ್ಕೂ ಕೂಡ ಈಗ ನಾನು ಅಳುವುದಿಲ್ಲ. ಕರ್ಣನ ವಿಷಯದಲ್ಲಿ ಕರ್ಣಕಠೋರವಾದ ನೃಶಂಸ ಕೆಲಸವನ್ನು ಮಾಡಿದ ದುಷ್ಟನನ್ನು ಯುದ್ಧದಲ್ಲಿ ಕೊಲ್ಲುವೆನು.

ಗಾಂಧಾರಿ:—ಮಗನೇ, ಒಂದು ಕ್ಷಣ ಕಾಲ ಕಣ್ಣೀರನ್ನು ತಡೆದುಕೊ.

ಧೃತರಾಷ್ಟ್ರ:—ವತ್ಸನೇ, ಕಣ್ಣೀರನ್ನು ಒಂದು ಕ್ಷಣ ಒರಸಿಕೋ.

ದುರ್ಯೋಧನ:—ತಂದೆಯೇ, ನನಗೋಸ್ಕರ ಪ್ರಾಣವನ್ನು ಬಿಡುತ್ತಲಿರುವ ಕರ್ಣನನ್ನು ಯಾರೂ ತಡೆಯಲಿಲ್ಲ. ಅವನಿಗೋಸ್ಕರ ಕಣ್ಣೀರನ್ನು ಬಿಡುವ ನನ್ನನ್ನು ಏಕೆ ತಡೆಯುತ್ತೀರಿ? ಸಾರಥಿಯೇ, ಈ ಅಸಂಭವವಾದ, ನಮ್ಮ ಕುಲಕ್ಕೆ ನಾಶಕವಾದ, ಈ ಕೆಲಸವನ್ನು ಯಾರು ಮಾಡಿರಬಹುದು?

ಸಾರಥಿ:—ಆಯುಷ್ಮಂತನೇ, ಕೃಷ್ಣ ಸಾರಥಿಯಾದ, ನಮ್ಮ ಸೈನ್ಯಕ್ಕೆ ಮೃತ್ಯುಪ್ರಾಯನಾದ, ಅರ್ಜುನನು ಕರ್ಣನ ರಥವು ಭೂಮಿಯಲ್ಲಿ ಹೂತುಹೋಗಿದ್ದ ಸಮಯದಲ್ಲಿ ಬಾಣಗಳಿಂದ ಕರ್ಣನನ್ನು ಕೊಂದನೆಂದು ಜನಗಳು ಹೇಳುವರು.

ದುರ್ಯೋಧನ:—ಸಮುದ್ರವು ಚಂದ್ರೋದಯದಲ್ಲಿ ಉಕ್ಕುವಂತೆ ಕರ್ಣನ ಮುಖವನ್ನು ನೆನಸಿಕೊಂಡರೆ ನನಗೆ ದುಃಖವು ಉಕ್ಕುತ್ತಲಿದೆ. ಬಡಬಾಗ್ನಿಯು ಆ ಸಮುದ್ರವನ್ನು ಕುದಿಯುವಂತೆ ಕೋಪಾಗ್ನಿಯು ದುಃಖವನ್ನು ನಾಶ ಮಾಡುತ್ತಲಿದೆ, ಮಾತೆಯೇ! ತಂದೆಯೇ! ನನ್ನ ವಿಷಯದಲ್ಲಿ ಪ್ರಸನ್ನರಾಗಿರಿ. ದುಃಖದಿಂದ ಹುಟ್ಟಿದ ಬೆಂಕಿಯು ಅಸಹ್ಯ ವೇಗದಿಂದ ನನ್ನನ್ನು ಸುಡುತ್ತಲಿದೆ. ನಾನು ಯುದ್ಧ ಮಾಡಿದರೂ, ಯುದ್ಧ ಮಾಡದೇ ಇದ್ದರೂ ವಿಪತ್ತು ಒಂದೇ ವಿಧವಾಗಿರುವುದು. ಯುದ್ಧದಲ್ಲಿ ಒಂದು ವೇಳೆ ಜಯವಾದರೂ ಆಗಬಹುದೆಂಬ ಸಂದೇಹವಿರುವುದರಿಂದ ಸುಮ್ಮನೆ ಸಾಯುವುದಕ್ಕಿಂತಲೂ ಯುದ್ಧ ಮಾಡುವುದೇ ಒಳ್ಳೆಯದಲ್ಲವೆ?

ಧೃತರಾಷ್ಟ್ರ:—(ದುರ್ಯೋಧನನನ್ನು ತಬ್ಬಿಕೊಂಡು) ವತ್ಸನೇ ನೀನು ಹೇಳುವುದು ನಿಜ. ಆದರೂ ಭೀಮನನ್ನು ನೆನಪಿಸಿಕೊಂಡರೆ ನನ್ನ ಮನಸ್ಸು ಹೆದರಿ

ಕರಗಿಹೋಗುವುದು. ಮಾನಶಾಲಿಯಾದ ನೀನು ವಂಚನೆಯನ್ನು ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಶತ್ರುಗಳ ಯುದ್ಧವು ಬಹು ವಂಚನೆಯುಳ್ಳದ್ದಾಗಿದೆ. ಅಯ್ಯೋ ನಾನು ಕೆಟ್ಟುಹೋದೆ.

ಗಾಂಧಾರಿ:—ಮಗನೇ, ನನ್ನ ನೂರು ಮಕ್ಕಳುಗಳನ್ನು ಕೊಂದ ಭೀಮನೊಂದಿಗೆ ಯುದ್ಧವನ್ನು ಹುಡುಕುವೆಯಲ್ಲ.

ದುರ್ಯೋಧನ:—ಮಾತೆಯೇ! ಆ ಭೀಮನು ಹಾಗಿರಲಿ. ನನ್ನ ಮನಸ್ಸಿಗೆ ಮನೋರಥಪ್ರಾಯನಾಗಿಯೂ, ದೇಹಕ್ಕೆ ಗಂಧಲೇಪನದಂತೆಯೂ, ಕಣ್ಣಿಗೆ ಚಂದ್ರಕಾಂತಿಯಂತೆಯೂ, ನಿನಗೆ ಮಗನಂತೆಯೂ ಇದ್ದ ತಂದೆಗೆ ನೀತಿಯಲ್ಲಿ ಮುಖ್ಯ ಶಿಷ್ಯನಾದ ಕರ್ಣನನ್ನು ಕೊಂದಿರುವ ಆ ಪಾಪಿಯ ಮೇಲೆ ನನ್ನ ಬಾಣಗಳು ಬೀಳುತ್ತವೆ. ಸಾರಥಿಯೇ ಇನ್ನು ಸಾವಕಾಶ ಮಾಡುವುದರಿಂದ ಪ್ರಯೋಜನವಿಲ್ಲ. ಸಿದ್ಧವಾದ ನನ್ನ ರಥವನ್ನು ತೆಗೆದುಕೊಂಡು ಬಾ. ಅಥವಾ ಪಾಂಡವರಿಗೆ ಹೆದರುವ ನೀನಿಲ್ಲಿಯೇ ಇರು. ಈ ಗದೆಯೊಂದನ್ನೇ ಹಿಡಿದುಕೊಂಡು ಯುದ್ಧಕ್ಕೆ ಹೋಗುವೆನು.

ಸಾರಥಿ:—ಆಯುಷ್ಮಂತನೇ, ಬೇರೆ ವಿಧವಾಗಿ ಯೋಚಿಸಬೇಡ. ಇಗೋ ಬಂದೆನು (ಎಂದು ಹೋಗುವನು.)

ಧೃತರಾಷ್ಟ್ರ:—ವತ್ಸ ದುರ್ಯೋಧನ, ನೀನು ಯುದ್ಧಕ್ಕೆ ಸ್ಥಿರನಾಗಿ ನಮ್ಮನ್ನು ನುಡುವುದಕ್ಕೆ ಈ ವ್ಯವಸಾಯವನ್ನು ಮಾಡುತ್ತಲಿದ್ದೀಯೆ. ಹಾಗಾದರೆ ಇರುವ ವೀರರುಗಳಲ್ಲಿ ಒಬ್ಬನಿಗೆ ಸೇನಾಪತಿಯ ಸ್ಥಾನದಲ್ಲಿ ಪಟ್ಟಾಭಿಷೇಕ ಮಾಡು.

ದುರ್ಯೋಧನ:—ಅಭಿಷೇಕ ಮಾಡಿಯೇ ಆಗಿದೆಯಲ್ಲ.

ಗಾಂಧಾರಿ:—ಮಗನೇ, ಅದು ಯಾರು? ಅವರಿಂದ ನಮ್ಮ ಜಯಾಶೆಯನ್ನು ಊಹಿಸೋಣ.

ಧೃತರಾಷ್ಟ್ರ:—ಶಲ್ಯನೋ? ಅಶ್ವತ್ಥಾಮನೋ?

ಸಂಜಯ:—ಭೀಷ್ಮನು ಸತ್ತುಹೋದನು. ದ್ರೋಣಾಚಾರ್ಯನು ಸತ್ತುಹೋದನು. ಆಶೆಯು ಪ್ರಬಲವಾಗಿದೆ. ಶಲ್ಯನು ಪಾಂಡವರನ್ನು ಜಯಿಸುವನು.

ದುರ್ಯೋಧನ:—ಶಲ್ಯನಾಗಲೀ, ಅಶ್ವತ್ಥಾಮನಾಗಲೀ ಏನು ಮಾಡುವರು? ಕರ್ಣನ ಆಲಿಂಗನವನ್ನು ಕೊಡುವುದಾಗಲೀ, ಅರ್ಜುನನ ಪ್ರಾಣವನ್ನು ತೆಗೆಯುವು ದಾಗಲೀ ಎರಡರಲ್ಲೊಂದನ್ನು ಮಾಡುವುದಕ್ಕೆ ಸಿದ್ಧವಾಗಿರುವ ಈ ಆತ್ಮ ವನ್ನು ಅಭಿಷೇಕ ಮಾಡಿದ್ದೇನೆ.

(ತೆರೆಯಲ್ಲಿ) ಎಲೈ ಕೌರವ ಸೈನ್ಯ ಪ್ರಧಾನ ಭಟರುಗಳಿರಾ! ನಮ್ಮನ್ನು ನೋಡಿ ಹೆದರಿ ಅಲ್ಲಿ ಇಲ್ಲಿ ಹೋಗಬೇಡಿರಿ, ದುರ್ಯೋಧನನೆಲ್ಲಿದಾನೆ ತಿಳಿಸಿರಿ

(ಎಲ್ಲರೂ ಕೇಳುತ್ತಾರೆ.)

ಸಾರಥಿ:—(ಗಾಬರಿಯಿಂದ ಪ್ರವೇಶಿಸಿ) ಆಯುಷ್ಮಂತನೇ, ಒಂದೇ ರಥದಲ್ಲಿ ಕೂತುಕೊಂಡು ಕರ್ಣನ ಶತ್ರುವಾದ ಅರ್ಜುನನೂ ಕ್ರೂರನಾದ ಭೀಮನೂ ಇಲ್ಲಿ ಅಲ್ಲಿ ನಿನ್ನನ್ನು ಕೇಳುತ್ತಾ ಬರುತ್ತಿರುವರು.

ಗಾಂಧಾರಿ:—(ಭಯದಿಂದ) ಮಗನೇ, ಈಗ ಏನು ಮಾಡಬೇಕು?

ದುರ್ಯೋಧನ:—ಮಾತೆಯೇ, ಗದೆಯು ಸಮೀಪದಲ್ಲಿಯೇ ಇದೆಯಲ್ಲವೇ?

ಗಾಂಧಾರಿ:—ಅಯ್ಯೋ ನಾನು ಕೆಟ್ಟೆನು.

ದುರ್ಯೋಧನ:—ಇನ್ನು ಸಾವಕಾಶ ಮಾಡಿ ಫಲವಿಲ್ಲ. ಸಂಜಯನೇ, ಇವರಿಬ್ಬ ರನ್ನೂ ರಥದಲ್ಲಿ ಕೂರಿಸಿಕೊಂಡು ಶಿಬಿರಕ್ಕೆ ಹೋಗು. ನಮ್ಮ ಶೋಕ ವನ್ನು ಹೋಗಲಾಡಿಸುವ ಯುದ್ಧವು ಒದಗಿ ಇದೆ.

ಧೃತರಾಷ್ಟ್ರ:—ವತ್ಸನೇ, ಒಂದು ಕ್ಷಣ ತಾಳು. ಇವರ ಭಾವವನ್ನು ತಿಳಿಯು ತ್ತೇನೆ.

ದುರ್ಯೋಧನ:—ತಂದೆಯೇ. ಭಾವವನ್ನು ತಿಳಿದು ಏನಾಗಬೇಕು?

ಧೃತರಾಷ್ಟ್ರನೂ, ಗಾಂಧಾರಿಯೂ ಸ್ವಲ್ಪ ದೂರಹೋಗಿ ನಿಲ್ಲುವರು. ರಥಾರೂಢರಾಗಿ ಭೀಮಾರ್ಜುನರು ಪ್ರವೇಶಿಸುವರು.)

ಭೀಮ:—ಎಲೈ ದುರ್ಯೋಧನನನ್ನು ಹೊಂದಿ ಬದುಕುವ ಜನಗಳಿರಾ, ಭಯದಿಂದ ಏಕೆ ಸಂಚರಿಸುವಿರಿ? ನಾವು ಬಂದಿರುವುದನ್ನು ತಿಳಿಸಿರಿ. ಮೋಸದ ಜೂಜಿಗೆ ಕಾರಣನಾಗಿಯೂ, ಅರಗಿನ ಮನೆಗೆ ಬೆಂಕಿಯನ್ನು ಹಾಕುವು ದಕ್ಕೆ ಪ್ರಯತ್ನಿಸಿದವನಾಗಿಯೂ, ದುರಭಿಮಾನಿಯಾಗಿಯೂ, ದ್ರೌಪದಿಯ

ಕೇಶಾಂಬರಗಳನ್ನು ಎಳೆಸಿದವನಾಗಿಯೂ, ದುಶ್ಶಾಸನಾದಿಗಳಿಗೆ ಧೊರೆಯಾಗಿಯೂ, ಅನುಜ ಶತಕ್ಕೆ ಜ್ಯೇಷ್ಠನಾಗಿಯೂ, ಅಂಗರಾಜನಿಗೆ ಪರಮ ಮಿತ್ರನಾಗಿಯೂ ಇರುವ ದುರ್ಯೋಧನನು ಎಲ್ಲಿರುವನು? ಕೋಪದಿಂದಲ್ಲ. ನೋಡುವುದಕ್ಕೆ ಬಂದಿದ್ದೇನೆ.

ಧೃತರಾಷ್ಟ್ರ:—ಸಂಜಯನೇ, ಈ ಪಾಪಿಯ ಅಧಿಕ್ಷೇಪವು ಎಷ್ಟು ಕ್ರೂರವಾಗಿರುವುದು.

ಸಂಜಯ:—ಕೆಲಸದಿಂದ ಅನೇಕ ವಿಪ್ರಿಯವನ್ನುಂಟುಮಾಡಿ ಈಗ ಮಾತಿನಿಂದ ನೋಯಿಸುತ್ತಿರುವನು.

ದುರ್ಯೋಧನ:—ಸಾರಥಿಯೇ, ಇವನಿಲ್ಲಿದಾನೆಂದು ಅವನಿಗೆ ಹೋಗಿ ಹೇಳು.

ಸಾರಥಿ:—ಎಲೈ ಭೀಮಾರ್ಜುನರುಗಳಿರಾ, ಇಗೋ ಮಹಾರಾಜನು ತಂದೆತಾಯಿಗಳೊಂದಿಗೆ ಆಲದ ಮರದ ನೆರಳಿನಲ್ಲಿ ಕುಳಿತಿರುವನು.

ಅರ್ಜುನ:—ಅಣ್ಣನೇ, ಪ್ರಸನ್ನನಾಗು, ಪುತ್ರಶೋಕದಿಂದ ಪೀಡಿತರಾದ ತಂದೆ ತಾಯಿಗಳನ್ನು ನಾವು ಕಾಣಿಸಿಕೊಂಡು ಇನ್ನೂ ಹೆಚ್ಚಾಗಿ ದುಃಖಪಡಿಸುವುದು ಯೋಗ್ಯವಲ್ಲ. ಆದಕಾರಣ ಹಿಂತಿರುಗಿ ಹೋಗೋಣ.

ಭೀಮ:—ಮೂಢನೇ, ಪೂರ್ವಾಚಾರವನ್ನು ಅತಿಕ್ರಮಿಸಬಾರದು. ಗುರುಗಳನ್ನು ನಮಸ್ಕಾರ ಮಾಡದೇ ಹೋಗುವುದು ಸರಿಯಲ್ಲ (ಎಂದು ರಥವಿಂದಿಳಿಯುವನು.)

ಭೀಮ:—ಸಂಜಯನೇ, ತಾಯಿ ತಂದೆಗಳಿಗೆ ನಮಸ್ಕಾರವನ್ನು ತಿಳಿಸು, ಅಥವಾ ಇರು. ನಾವೇ ತಿಳಿಸುತ್ತೇವೆ. ವತ್ಸನೇ, ನಮ್ಮ ಹೆಸರನ್ನೂ ನಮ್ಮ ಕೆಲಸವನ್ನೂ ಹೇಳಿ ಗುರುಗಳಿಗೆ ನಮಸ್ಕಾರ ಮಾಡಬೇಕು.

ಅರ್ಜುನ:—ಮಾತೆಯೇ, ತಂದೆಯೇ, ನಿನ್ನ ಮಕ್ಕಳುಗಳು ಸಮಸ್ತ ಶತ್ರುಗಳನ್ನೂ ಜಯಿಸುವೆನೆಂಬ ಆಶೆಯನ್ನು ಯಾರಲ್ಲಿ ಇಟ್ಟಿದ್ದರೋ, ಯಾವನು ತನ್ನ ಅಹಂಕಾರದಿಂದ ಲೋಕವನ್ನು ತಿರಸ್ಕಾರ ಮಾಡಿದ್ದನೋ, ಆ ರಾಧಾ ಪುತ್ರನಾದ ಕರ್ಣನನ್ನು ಯುದ್ಧದಲ್ಲಿ ಕೊಂದಿರುವ ಪಾಂಡುಪುತ್ರನಾದ ಅರ್ಜುನನು ನಿಮ್ಮಗಳಿಗೆ ನಮಸ್ಕಾರ ಮಾಡುವನು.

ಭೀಮ:—ಸಮಸ್ತ ಕೌರವರುಗಳನ್ನೂ ಪುಡಿ ಪುಡಿ ಮಾಡಿದ, ದುಶ್ಶಾಸನನ ರಕ್ತದಿಂದ ಮದಿಸಿರುವ, ಮುಂದೆ ದುರ್ಯೋಧನನ ತೊಡೆಗಳನ್ನು ಮುರಿಯುವ, ಭೀಮನು ನಿಮ್ಮಗಳಿಗೆ ತಲೆಬಾಗಿ ನಮಸ್ಕರಿಸುತ್ತಾನೆ.

ಧೃತರಾಷ್ಟ್ರ:—ದುರಾತ್ಮನೇ, ಭೀಮನೇ, ಶತ್ರುಗಳಿಗೆ ಅಪಕಾರಮಾಡತಕ್ಕವನು ನೀನೊಬ್ಬನೇ ಏನೋ? ಸಾಮಾನ್ಯವಾಗಿ ಕ್ಷತ್ರಿಯರೆಲ್ಲರಲ್ಲಿಯೂ ವೀರರೆಲ್ಲರೂ ಯುದ್ಧದಲ್ಲಿ ಜಯಿಸಿಯೇ ಜಯಿಸುವರು. ಸೋತೂ ಸೋಲುವರು. ಸತ್ತೂ ಸಾಯುವರು. ಸುಮ್ಮನೆ ಆತ್ಮ ಶ್ಲಾಘನೆಯಿಂದ ಏಕೆ ನಮ್ಮನ್ನು ಕ್ಷೋಭಪಡಿಸುತ್ತೀಯೆ?

ಭೀಮ:—ತಾತನೇ, ಕೋಪಿಸಬಾರದು. ನಿನ್ನ ಸಭೆಯಲ್ಲಿ ಪಾಂಡವ ಪತ್ನಿಯಾದ ದ್ರೌಪದಿಯ ಕೇಶಪಾಶಗಳನ್ನು ಹಿಡಿದು ಎಳೆದದ್ದನ್ನೂ ಯಾರು ಯಾರು ನೋಡಿದರೋ ಅವರೆಲ್ಲರೂ ಕೋಪಾಗ್ನಿಯಲ್ಲಿ ಪತಂಗದ ಹುಳುಗಳಂತೆ ಸತ್ತುಹೋದರು. ಅದನ್ನು ನಿಮಗೆ ತಿಳಿಸಿದೆನೇ ಹೊರತು ನನ್ನ ಭುಜಬಲವನ್ನು ಹೊಗಳಿಕೊಳ್ಳುವುದಕ್ಕಾಗಿಯೂ, ಅಹಂಕಾರಕ್ಕಾಗಿಯೂ ಅಲ್ಲ. ಮಕ್ಕಳು ಮೊಮ್ಮಕ್ಕಳುಗಳಿಂದ ಮಾಡಲ್ಪಟ್ಟ ದುಷ್ಕರ್ಮದ ಪರಿಣಾಮವು ಈ ರೀತಿಯಲ್ಲಿ ಆಯಿತು ಎಂಬುದಕ್ಕೆ ನೀನೇ ಸಾಕ್ಷಿಯಾಗಿರುತ್ತೀಯೆ ಎಂದು ಹೇಳಿದೆನು.

ದುರ್ಯೋಧನ:—(ಸಮೀಪಕ್ಕೆ ಬಂದು) ನೀಚನಾದ ಭೀಮನೇ, ವೃದ್ಧನಾದ ದೊರೆಯ ಮುಂದುಗಡೆ ಬಂದು ನಿಂತು ನಿಂದೆಗೆ ಯೋಗ್ಯವಾದ ನಿನ್ನ ಕೆಲಸವನ್ನು ಶ್ಲಾಘಿಸುತ್ತೀಯೆ. ಭುವನ ಪತಿಯಾದ ನನ್ನ ಅಪ್ಪಣೆಯಿಂದ ರಾಜರುಗಳ ಎದುರಿಗೆ ನಿನ್ನ, ನಿನ್ನ ಮತ್ತು ಆ ರಾಜಪಶುವಿನ ಹೆಂಡತಿಯಾದ ದ್ರೌಪದಿಯು ಕೇಶಪಾಶಗಳಲ್ಲಿ ಎಳೆಯಲ್ಪಟ್ಟಳು. ಈ ವೈರದ ಸಂಬಂಧದಲ್ಲಿ ನೀನು ಕೊಂದ ರಾಜರುಗಳು ಏನು ಅಪಕಾರ ಮಾಡಿದ್ದರು? ಬಾಹುಬಲದಿಂದ ಕೊಬ್ಬಿರುವ ನನ್ನನ್ನು ಜಯಿಸದೇನೇ ಇಷ್ಟು ಅಹಂಕಾರವೇ?

ಭೀಮ:—(ಗದೆಯನ್ನು ಎತ್ತಿ) ದುರಾತ್ಮನೇ, ಇಗೋ ಇನ್ನು ನೀನು ಉಳಿಯುವುದಿಲ್ಲ.

ಅರ್ಜುನ:—ಅಣ್ಣನೇ, ಇವನಲ್ಲಿ ಕೋಪನೇಕೆ? ಬಾಯಲ್ಲಿ ಅಪ್ರಿಯವಾದ ಮಾತುಗಳನ್ನಾಡುತ್ತಾನೆಯೇ ಹೊರತು ಕೆಲಸದಲ್ಲಿ ಶಕ್ತನಲ್ಲ. ನೂರು ತಮ್ಮಂದಿರುಗಳನ್ನು ಕಳೆದುಕೊಂಡು ದುಃಖಿತನಾಗಿರುವನು. ಇವನ ಪ್ರಲಾಪಗಳಿಂದ ಏಕೆ ವ್ಯಥೆಪಡಬೇಕು?

ಭೀಮ:—ಎಲೈ ಭರತ ಕುಲಕ್ಕೆ ಕಳಂಕಪ್ರಾಯನೇ, ನೀಚನೇ, ಈಗಲೇ ನನ್ನ ಗದೆಯಿಂದ ಛೇದಿಸಲ್ಪಟ್ಟು ಕಟಕಟ ಶಬ್ದವನ್ನು ಮಾಡುವ, ನಿನ್ನ ಶರೀರದ ವಿಷಯದಲ್ಲಿ ಗಾಂಧಾರಿ ಧೃತರಾಷ್ಟ್ರರು ವಿಘ್ನ ಮಾಡದೇ ಇದ್ದ ಪಕ್ಷದಲ್ಲಿ ಕ್ರೂರವಾಗಿ ಬಗಳುವ ನಿನ್ನನ್ನು ದುಶ್ಶಾಸನನ ಸಮೀಪಕ್ಕೆ ಕಳುಹಿಸುವುದಕ್ಕೆ ಸಂಪಾದಿಸುತ್ತಿದ್ದೇನು. ಮತ್ತು ಎಲೈ ಮೂಢನೇ, ಭೀಷ್ಮ ದ್ರೋಣಾದಿಗಳಿಗೆ ಪರಾಜಯವಾದಾಗ ಕೇವಲ ಸ್ತ್ರೀಯರಂತೆ ನೀನು ಅತ್ತದ್ದೂ ನಿನ್ನ ತಮ್ಮನಾದ ದುಶ್ಶಾಸನನ ಎದೆಯನ್ನು ಬಗೆದಾಗ ನೀನು ಪ್ರತ್ಯಕ್ಷವಲ್ಲಿ ಇದ್ದೂ ಸುಮ್ಮನೇ ಇದ್ದದ್ದೂ ಇತರರೂ ಕೋಪಗೊಂಡ ನನಗೆ ಹೆದರಿಯೂ, ದೀನನೂ ಆದ ನೀನು ನನ್ನ ಮನಸ್ಸಿನಲ್ಲಿ ದಯೆಯನ್ನು ಹುಟ್ಟಿಸಿದ್ದರಿಂದ ನೀನು ಬದುಕಿರುವುದಕ್ಕೆ ಕಾರಣವಾಗಿದೆ.

ದುರ್ಯೋಧನ:—ದುರಾತ್ಮನೇ, ಭರತಕುಲಾಧಮನೇ, ದುಷ್ಟ ಬಾಯಾಳಿ, ಬಂಡ ಪಶುವೇ, ನಿನ್ನ ಹಾಗೆ ಬಾಯಲ್ಲಿ ಹರಟುವುದಕ್ಕೆ ನಾನು ಅಷ್ಟು ಸಮರ್ಥನಲ್ಲ. ಯುದ್ಧಾಂಗಣದಲ್ಲಿ ನಿನ್ನ ಬಾಂಧವರುಗಳು ನನ್ನ ಗದೆಯಿಂದ ಎದೆ ಒಡೆದು ಭೂಮಿಯಲ್ಲಿ ಮಲಗಿದ ನಿನ್ನನ್ನು ಬಹು ಶೀಘ್ರದಲ್ಲಿಯೇ ನೋಡುವರು.

ಭೀಮ:—(ನಕ್ಕು) ಹೀಗಾದರೆ ನೀನು ನಂಬುವುದಿಲ್ಲ. ಇಲ್ಲಿಂದ ಇನ್ನು ಸ್ವಲ್ಪ ಕಾಲದಲ್ಲಿಯೇ ನಡೆಯುವ ಕೆಲಸವನ್ನು ಹೇಳುತ್ತೇನೆ, ನಮ್ಮ ಸಹೋದರರುಗಳ ನಿಶ್ಚಿತವಾದ ಉದ್ದೇಶವಿದು. ಸ್ಥೂಲವಾದ ನನ್ನ ಭುಜಗಳಿಂದ ವೇಗವಾಗಿ ತಿರುಗಿಸಲ್ಪಟ್ಟ ಭಾರವಾದ ಗದೆಯ ಪೆಟ್ಟಿನಿಂದ ಮುರಿದ ತೊಡೆಯುಳ್ಳ ನಿನ್ನ ತಲೆಯ ಮೇಲೆ ನಾಳಿನ ದಿವಸ ಬೆಳಿಗ್ಗೆ ಎಲ್ಲರೂ ನೋಡುವಂತೆ ನನ್ನ ಕಾಲನ್ನಿಟ್ಟು ನೀನೇ ಮೊದಲಾಗಿ ನಿನ್ನ ಭ್ರಾತೃವರ್ಗದ ರಕ್ತವನ್ನು ಉಗುರಿನ ತುದಿಯನ್ನಾರಂಭಿಸಿಕೊಂಡು ಅಂಗಾಂಗಗಳಿಗೆಲ್ಲಾ ಗಂಧದಂತೆ ಬಳಿದುಕೊಂಡು ಭೂಷಣವನ್ನು ಧರಿಸುವೆನು.

(ತೆರೆಯಲ್ಲಿ) ಎಲೈ ಭೀಮಾರ್ಜುನರುಗಳಿರಾ, ಸಮಸ್ತ ಶತ್ರುಗಳನ್ನೂ ಸಂಹರಿಸಿ ಪರಾಕ್ರಮದಿಂದ ಆಕ್ರಮಿಸಲ್ಪಟ್ಟ ಪರಶುರಾಮನಂತೆ ಮನೋಹರವಾದ ಯಶಸ್ಸುಳ್ಳ, ದಿಙ್ಮಂಡಲಗಳಲ್ಲಿರುವ ಉದ್ವೃತ್ತರಾದ ದಸ್ಯುಜನಗಳನ್ನು ಪರಾಕ್ರಮದಿಂದ ಸಂತಾಪ ಪಡಿಸುತ್ತಲಿರುವ, ಅಜಾತಶತ್ರುವಾದ ಮಹಾರಾಜ ಯುಧಿಷ್ಠಿರನು ಆಜ್ಞಾಪಿಸುವನು.

(ಇಬ್ಬರೂ ಕೇಳಿ) ಆರ್ಯನು ಏನಾಜ್ಞಾಪಿಸುವನು?

(ಪ್ರನಪ ತೆರೆಯಲ್ಲಿ) ಯುದ್ಧರಂಗದಲ್ಲಿ ಸತ್ತುಹೋದವರ ದೇಹಗಳನ್ನು ಅವರ ಆಪ್ತರುಗಳು ಅಗ್ನಿಯಲ್ಲಿ ದಹನ ಮಾಡಲಿ, ಬಂಧುಗಳು ಬಂಧುಗಳಿಗೆ ಕಣ್ಣೀರಿನೊಂದಿಗೆ ಕೂಡಿದ ತರ್ಪಣ ಜಲಗಳನ್ನು ಕೊಡಲಿ, ಜ್ಞಾತಿಗಳ ದೇಹಗಳನ್ನು, ಸತ್ತು ಬಿದ್ದಿರುವ ಹೆಣಗಳ ಸಮೂಹಗಳಲ್ಲಿ ಹುಡುಕಿ ತೆಗೆಯಲಿ, ಸೂರ್ಯನು ಅಸ್ತನಾದನು. ಸೈನ್ಯಗಳನ್ನು ಉಪಸಂಹರಿಸಿರಿ.

(ಇಬ್ಬರೂ) ಆರ್ಯನ ಅಪ್ಪಣೆಯಂತೆ (ಎಂದು ಹೊರಟು ಹೋಗುವರು.)

(ಪುನಪ ತೆರೆಯಲ್ಲಿ) ಎಲೈ ಗಾಂಢೀವ ಧನುಸ್ಸನ್ನು ಎಳೆಯುವುದರಿಂದ ಪ್ರಕಾಶಿಸುತ್ತಲಿರುವ ತೋಳುಗಳುಳ್ಳ ಅರ್ಜುನನೇ, ಎಲ್ಲಿ ಹೋಗುವಿ? ಕರ್ಣನ ಮೋಹನ ಕೋಪದಿಂದ ಇದುವರೆಗೆ ನಿಮ್ಮಗಳನ್ನು ಜಯಿಸತಕ್ಕ ಈ ಧನುಸ್ಸನ್ನು ತ್ಯಾಗಮಾಡಿದ್ದೆನು. ಶೂರರಿಲ್ಲದ ಈ ಯುದ್ಧದಲ್ಲಿ ನೀನು ನಿನ್ನ ಪರಾಕ್ರಮವನ್ನು ತೋರಿಸಿ, ತಂದೆಯ ತಲೆಯನ್ನು ಮುಟ್ಟಿದ್ದನ್ನು ನೆನೆಸಿಕೊಂಡು ಪಾಂಡವರಿಗೆ ಪ್ರಳಯ ಕಾಲದ ಬೆಂಕಿಯಂತೆ ದೃಷ್ಟದ್ಯುಮ್ನನ ಸೈನ್ಯವೆಲ್ಲವನ್ನೂ ಸಂಹಾರ ಮಾಡತಕ್ಕವನಾಗಿರುವ, ಅಶ್ವತ್ಥಾಮನಾದ ನಾನು ಯುದ್ಧಕ್ಕೆ ಬಂದಿರುವೆನು,

ಧೃತರಾಷ್ಟ್ರ:—(ಕೇಳಿ ಸಂತೋಷದಿಂದ) ವತ್ಸ ದುರ್ಯೋಧನ, ದ್ರೋಣಾಚಾರ್ಯನಿಗೆ ಉಂಟಾದ ಅವಮಾನಕ್ಕೆ ಮಹಾ ಕುಪಿತನಾಗಿರುವ, ತಂದೆಗಿಂತಲೂ ಹೆಚ್ಚು ಶಿಕ್ಷಿತನಾಗಿರುವ, ಮಹಾತ್ಮನಾದ ಅಶ್ವತ್ಥಾಮನು ಬಂದಿರುವನು, ಪ್ರತ್ಯುದ್ಗಮನದಿಂದ ಸಂಭಾವಿಸು,

ದುರ್ಯೋಧನ:—(ಅಲಕ್ಷ್ಯದಿಂದ) ತಂದೆಯೇ, ಮಾತೆಯೇ, ಕರ್ಣನ ಕೊಲೆಯನ್ನೇ ಆಶಿಸುತ್ತಲಿದ್ದ ವ್ಯರ್ಥವಾಗಿ ಯೌವನದ ಹೊರೆಯನ್ನೂ ಅಸ್ತ್ರ ಶಿಕ್ಷೆಯ ಹೊಗೆಯನ್ನೂ ಹೊತ್ತಿರುವ ಇವನಿಂದ ಪ್ರಯೋಜನವೇನು?

ಧೃತರಾಷ್ಟ್ರ:—ವತ್ಸ, ಈ ಕಾಲದಲ್ಲಿ ಪರಾಕ್ರಮವುಳ್ಳವರಿಗೆ ಮಾತಿನಿಂದಲೇ ಅಲಕ್ಷ್ಯವನ್ನುಂಟುಮಾಡುವುದು ಯೋಗ್ಯವಲ್ಲ.

ಅಶ್ವತ್ಥಾಮ:—(ಪ್ರವೇಶಿಸಿ) ಕುರುರಾಜನೇ, ಕರ್ಣನು ಕಿವಿಗಿಂಪಾಗಿರುವಂತೆ ಹೇಳಿದ್ದೂ, ಯುದ್ಧದಲ್ಲಿ ಮಾಡಿದ್ದೂ ಎರಡೂ ನಿನಗೆ ತಿಳಿಯಿತಷ್ಟೆ! ಈಗ ಸಿದ್ಧನಾದ ಧನುಸ್ಸಿನೊಡನೆ ಶತ್ರುವಿಗೆ ಅಭಿಮುಖನಾಗಿ ನಿಂತಿರುತ್ತೇನೆ. ದುಃಖವನ್ನು ಬಿಡು.

ದುರ್ಯೋಧನ:—(ಅಸೂಯೆಯಿಂದ) ಆಚಾರ್ಯಪುತ್ರನೇ, ಅಂಗರಾಜನು ಸತ್ತು ಹೋದನೆಂದೆಯಲ್ಲವೇ? ನೀನು ಯುದ್ಧಮಾಡತಕ್ಕದ್ದು. ಆದ್ದರಿಂದ ನನ್ನ ಅವಸಾನವನ್ನೂ ನಿರೀಕ್ಷಿಸು; ದುರ್ಯೋಧನನು ಯಾರು? ಕರ್ಣನು ಯಾರು? ಇಬ್ಬರೂ ಒಂದೇ.

ಅಶ್ವತ್ಥಾಮ:—ಏನು? ಈಗಲೂ ಕರ್ಣನ ಮೇಲಿನ ಪಕ್ಷಪಾತದಿಂದ ನಮ್ಮಲ್ಲಿ ತಿರಿಗಿ ಅದೇ ತಿರಸ್ಕಾರವೋ? ರಾಜನೇ, ಹಾಗೆಯೇ ಆಗಲಿ. ನಿನಗೆ ಒಳ್ಳೆಯದಾಗಲಿ (ಎಂದು ಹೊರಟು ಹೋಗುವನು.)

ಧೃತರಾಷ್ಟ್ರ:—ವತ್ಸನೇ, ಇದು ಏನು ನಿನ್ನ ವ್ಯಾಮೋಹ? ಈ ಕಾಲದಲ್ಲಿಯೂ ಕೂಡ ಮಹಾ ಯುದ್ಧದಲ್ಲಿ ಬಹು ಶೂರನಾದ ಅಶ್ವತ್ಥಾಮನಿಗೆ ಪರುಷವಚನಗಳಿಂದ ತಿರಸ್ಕಾರ ಮಾಡಿದೆಯಲ್ಲಾ.

ದುರ್ಯೋಧನ:—ಈ ವಿಷಯದಲ್ಲಿ ಕೆಟ್ಟದ್ದನ್ನಾಗಲೀ ಒಳ್ಳೆಯದನ್ನಾಗಲೀ ನಾನು ಏನು ಹೇಳಿದ್ದು? ಇದು ಕೋಪಕ್ಕೆ ಸ್ಥಾನವಲ್ಲವೋ? ಬಿಲ್ಲು ಹಿಡಿದ ಕ್ಷತ್ರಿಯರೂ ಕೂಡ ಅರಿಯದಷ್ಟು ಮಾಹಾತ್ಮ್ಯವುಳ್ಳ ಕರ್ಣನು ಯುದ್ಧದಲ್ಲಿ ಭಾಗ್ಯದೋಷದಿಂದ ವಿಪತ್ತನ್ನು ಹೊಂದಿದರೆ ನನ್ನ ಎದುರಿಗೆ ನನ್ನ ಮಿತ್ರನಾದ ಕರ್ಣನನ್ನು ಇವನು ದೂಷಿಸುತ್ತಾನೆ. ಹೀಗಿರುವಾಗ ಇವನಿಗೂ ಅರ್ಜುನನಿಗೂ ಭೇದವೇನು!

ಧೃತರಾಷ್ಟ್ರ:—ವತ್ಸನೇ, ನನ್ನ ದೋಷವು ತಾನೇ ಏನಿದೆ? ಭರತ ಕುಲಕ್ಕೆ ಕೊನೆಗಾಲ. ಗಾಂಧಾರಿಯೇ, ಸಂಜಯನೇ, ಮಂದಭಾಗ್ಯನಾದ ನಾನು ಏನು ಮಾಡಬೇಕು? (ಹಾಗೆಯೇ ಯೋಚಿಸಿ) ಇರಲಿ. ಸಂಜಯನೇ, ಅಶ್ವತ್ಥಾಮನಿಗೆ ನಾನು ಹೇಳಿದೆನೆಂದು ಹೇಳು. "ವತ್ಸನೇ, ಅಶ್ವತ್ಥಾಮನೇ,

ಈ ದುರ್ಯೋಧನನೊಂದಿಗೆ ಬಹುಕಾಲದವರೆಗೂ ಸ್ತನ್ಯ ಪಾನ ಮಾಡಿದ್ದು ನಿನಗೆ ಜ್ಞಾಪಕವಿರಬಹುದು. ನಿನ್ನ ಬಾಲ್ಯದಲ್ಲಿ ನೀನು ಹೊರಳಾಡಿದ್ದರಿಂದ ನಾನು ಉಟ್ಟಿದ್ದ ಪಟ್ಟೆ ಮಡಿಯು ಕೊಳೆಯಾದದ್ದನ್ನೂ ಸಹ ನೀನು ಮರೆತಿರಲಾರೆ. ತಮ್ಮಂದಿರುಗಳ ಮರಣದಿಂದ ಹೆಚ್ಚು ಶೋಕವುಳ್ಳವನಾಗಿ ದುರ್ಯೋಧನನು ನಿನ್ನಲ್ಲಿ ಅತಿ ಪ್ರೀತಿಯಿಂದ ವಿರುದ್ಧವಾದ ಮಾತನ್ನಾಡಿದ್ದಕ್ಕೆ ನೀನು ಬಹುಕಾಲ ಕೋಪಿಸಿಕೊಳ್ಳಬೇಡ. ಮತ್ತು ನಿನ್ನ ತಂದೆಯು ಸುಳ್ಳು ಮಾತನ್ನು ನಂಬಿ ಶಸ್ತ್ರವನ್ನು ತೊರೆದು ಯಾವ ವಿಧವಾದ ಅವಮಾನವನ್ನು ಹೊಂದಿದನೋ ಅದನ್ನೂ, ನಿನ್ನ ಪರಾಕ್ರಮವನ್ನೂ, ನೆನಸಿಕೊಂಡು ದುರ್ಯೋಧನನ ಮಾತನ್ನು ಬಿಟ್ಟು ಪರಾಕ್ರಮವನ್ನು ತೋರುತ್ತೀಯೆ ಎಂದು ನಂಬಿದ್ದೇನೆ'' ಎಂದು ತಿಳಿಸು.

ಸಂಜಯ:—ಅಪ್ಪಣೆ (ಎಂದು ಹೋಗುವನು.)

ದುರ್ಯೋಧನ:—ಸಾರಥಿಯೇ, ಯುದ್ಧಕ್ಕೆ ರಥವನ್ನು ತೆಗೆದುಕೊಂಡು ಬಾ.

ಸಾರಥಿ:—ಅಪ್ಪಣೆ (ಎಂದು ಹೋಗುವನು.)

ಧೃತರಾಷ್ಟ್ರ:—ಗಾಂಧಾರಿಯೇ, ಇಲ್ಲಿಂದ ನಾವು ಮದ್ರ ರಾಜನಾದ ಶಲ್ಯನ ಶಿಬಿರಕ್ಕೆ ಹೋಗೋಣ. ವತ್ಸನೇ, ನೀನೂ ಕೂಡ ಹೀಗೆ ಮಾಡು (ಎಂದು ಕಿವಿಯಲ್ಲಿ ಹೇಳಿ ಹೋಗುವನು.) ಎಲ್ಲರೂ ಹೊರಟುಹೋಗುವರು.

ಇತಿ ಪಂಚಮಾಂಕ.

## ಷಷ್ಠಾಂಕ

(ಯುಧಿಷ್ಠಿರ, ದ್ರೌಪದಿ, ಚೇಟಿ, ಪುರುಷ ಇವರುಗಳು ಪ್ರವೇಶಿಸುವರು.)

ಯುಧಿಷ್ಠಿರ:—[ಚಿಂತೆಯಿಂದ ನಿಟ್ಟುಸಿರು ಬಿಡುತ್ತಾ] ಭೀಷ್ಮನೆಂಬ ಮಹಾಸಮುದ್ರವನ್ನು ದಾಟಿಯಾಯಿತು. ದ್ರೋಣನೆಂಬ ಅಗ್ನಿಯನ್ನು ಆರಿಸಿ ಆಯಿತು.

ಕರ್ಣನೆಂಬ ಮಹಾ ವಿಷಮಯವಾದ ಸರ್ಪವು ಅಡಗಿಸಲ್ಪಟ್ಟಿತು. ಶಲ್ಯನು ಲೋಕಾಂತರವನ್ನು ಹೊಂದಿದನು. ಜಯವು ಅಲ್ಪಾವಶಿಷ್ಟವಾಗಿರುವಾಗ ಭೀಮನು ಸಾಹಸದಿಂದ ಆಲೋಚನೆ ಮಾಡದೆ "ನಾಳೆಯ ದಿವಸ ದುರ್ಯೋಧನನನ್ನು ಕೊಲ್ಲದಿದ್ದರೆ ಅಗ್ನಿಗೆ ಪ್ರವೇಶ ಮಾಡುತ್ತೇನೆ" ಎಂದು ಪ್ರತಿಜ್ಞೆ ಮಾಡಿ ನಮ್ಮನ್ನೆಲ್ಲರನ್ನೂ ಪ್ರಾಣಸಂಶಯದಲ್ಲಿ ಇರಿಸಿಬಿಟ್ಟನು.

ದ್ರೌಪದಿ:—[ಕಣ್ಣೀರು ಬಿಡುತ್ತಾ] ಮಹಾರಾಜನೇ, ದ್ರೌಪದಿಯು ಹಾಗೆ ಮಾಡಿದಳೆಂದು ಹೇಳಬೇಕು.

ಯುಧಿಷ್ಠಿರ:—ದ್ರೌಪದಿಯೇ, ನೀನಲ್ಲ. ಇದಕ್ಕೆ ನಾನೇ ಕಾರಣಭೂತನು. [ಪುರುಷನನ್ನು ನೋಡಿ] ಬುಧಕನೇ, ಕೋಪಗೊಂಡಿರುವ ಭೀಮಸೇನನ ದಾರುಣವಾದ, ಈಗಲೇ ನಿರ್ವಹಿಸಬೇಕಾಗಿರುವ ಪ್ರತಿಜ್ಞೆಯನ್ನು ತಿಳಿದು ಎಲ್ಲಿಯೋ ಅಡಗಿಕೊಂಡಿರುವ ನೀಚ ಕೌರವನ ಮಾರ್ಗವನ್ನು ತಿಳಿಯುವುದಕ್ಕಾಗಿ ಆಯಾಯಾಸ್ಥಾನಗಳಲ್ಲಿ ಯಥಾರ್ಥವನ್ನರಿಯತಕ್ಕ ಬುದ್ಧಿಶಾಲಿಗಳಾದ ಚಾರರನ್ನೂ, ಭಕ್ತಿಯುಳ್ಳ ಮಂತ್ರಿಗಳನ್ನೂ ಸುಯೋಧನನ ಹೆಜ್ಜೆಯ ಗುರುತನ್ನು ತಿಳಿದವರನ್ನೂ, ಸ್ಯಮಂತಪಂಚಕದ ಸುತ್ತಲೂ ಸಂಚರಿಸುವಂತೆ ಮಾಡಬೇಕೆಂದು ಸಹದೇವನಿಗೆ ತಿಳಿಸು. ಮತ್ತು ವಿಶೇಷವಾದ ಧನ ಪುರಸ್ಕಾರಗಳನ್ನು ಅವರುಗಳಿಗೆ ಕೊಡುವುದಾಗಿಯೂ, ಡಂಗೂರವನ್ನು ಹೊಡೆಸುವಂತೆ ತಿಳಿಸು. ಮತ್ತು ಕೆಸರಿನಲ್ಲಾಗಲೀ, ಮರಳಿನಲ್ಲಾಗಲೀ, ರಹಸ್ಯವಾದ ಹೆಜ್ಜೆಯ ಗುರುತನ್ನರಿಯಲು ಸಮರ್ಥರಾದ ಬೆಸ್ತರುಗಳನ್ನು ನೇಮಿಸಬೇಕು. ಹುಲ್ಲು ಹೊರೆಗಳಲ್ಲಿಯೂ, ಪೊದರುಗಳಲ್ಲಿಯೂ, ಹೆಜ್ಜೆ ಇಡುವಾಗ ತುಳಿದು ಬಾಡಿರುವ ಬಳ್ಳಿಗಳ ಸಮೂಹದಲ್ಲಿಯೂ ವಿಶೇಷ ಪರಿಚಯವುಳ್ಳ ಗೊಲ್ಲರನ್ನು ನೇಮಿಸಬೇಕು. ಸ್ವಜಾತಿ ಹೆಜ್ಜೆಗಳನ್ನು ತಿಳಿಯುವುದರಲ್ಲಿ ಸಮರ್ಥರಾದ ಬೇಡರನ್ನು ಹುಲಿಗಳಿಂದ ಕೂಡಿರುವ ಕಾಡುಗಳಲ್ಲಿ ನೇಮಿಸಬೇಕು. ಋಷಿಗಳು ವಾಸಮಾಡುವ ಸ್ಥಳಗಳಲ್ಲಿ ಬ್ರಾಹ್ಮಣವೇಷದಿಂದಲೂ, ಸಿದ್ಧರ ವೇಷಗಳಿಂದಲೂ, ಗೂಢಚಾರರು ಸಂಚರಿಸಲಿ.

ಪುರುಷ:—ಅಪ್ಪಣೆ [ಎಂದು ಹೋಗುವನು.]

ಯುಧಿಷ್ಠಿರ:—ಇಲ್ಲ, ಸಹದೇವನಿಗೆ ಇದನ್ನು ಹೇಳು. ಏಕಾಂತದಲ್ಲಿ ಹೆದರಿಕೊಂಡು ಪಾತನಾಡುತ್ತಲಿರುವ ಜನಗಳಲ್ಲಿಯೂ, ರೋಗಪೀಡಿತರಾಗಿ ಮಲಗಿರುವ ಜನಗಳಲ್ಲಿಯೂ, ಮೃಗಗಳು ಎಲ್ಲಿ ಹೆದರುತ್ತವೆಯೋ, ರಾಜಲಕ್ಷಣಗಳಿಂದ ಕೂಡಿದ ಗುರುತಿನ ಹೆಜ್ಜೆಯು ಎಲ್ಲಿದೆಯೋ, ಆಯಾಯಾ ಸ್ಥಳಗಳಲ್ಲಿಯೂ ಸಹ ಹುಡುಕಬೇಕೆಂದು ತಿಳಿಸು.

ಪುರುಷ:—ಅಪ್ಪಣೆ [ಎಂದು ಹೋಗಿ ಪುನಃ ಬಂದು ಸಂತೋಷದಿಂದ] ಮಹಾರಾಜನೇ, ಪಾಂಚಾಲಕನು ಬಂದಿರುವನು.

ಯುಧಿಷ್ಠಿರ:—ಜಾಗ್ರತೆಯಾಗಿ ಕರೆದುಕೊಂಡು ಬಾ.

ಪುರುಷ:—[ಪಾಂಚಾಲಕನನ್ನು ಕರೆದುಕೊಂಡು ಬಂದು] ಪಾಂಚಾಲಕನೇ, ಮಹಾರಾಜನಿಲ್ಲಿರುವನು.

ಪಾಂಚಾಲಕ:—ಮಹಾರಾಜನಿಗೆ ಜಯವಾಗಲಿ. ದೇವಿಗೂ, ಮಹಾರಾಜನಿಗೂ ಪ್ರಿಯವನ್ನು ಹೇಳುವೆನು.

ಯುಧಿಷ್ಠಿರ:—ಎಲೈ ಪಾಂಚಾಲಕನೇ, ದುರಾತ್ಮನಾದ ಕೌರವಾಧಮನ ದಾರಿಯು ದೊರಕಿತೋ?

ಪಾಂಚಾಲಕ:—ಮಹಾರಾಜನೇ, ದಾರಿಯೊಂದೇ ಅಲ್ಲ, ದೇವೀಕೇಶಾಂಬರಾಕರ್ಷಣದ ಘೋರ ಪಾತಕಕ್ಕೆ ಮುಖ್ಯ ಕಾರಣನಾದ ಆ ದುರಾತ್ಮನೇ ದೊರೆತನು.

ಯುಧಿಷ್ಠಿರ:—[ಸಂತೋಷದಿಂದ] ಬಹಳ ಸಂತೋಷ. ಕಣ್ಣೆದುರಿಗೆ ಬಂದನೋ?

ಪಾಂಚಾಲಕ:—ಯುದ್ಧಕ್ಕೆ ನಿಂತಿರುವ ಭೀಮನನ್ನು ಕೇಳಬೇಕು.

ದ್ರೌಪದಿ:—ನನ್ನ ನಾಥನು ಯುದ್ಧಕ್ಕೆ ನಿಂತಿರುವನೇ?

ಯುಧಿಷ್ಠಿರ:—[ಸ್ವಲ್ಪ ಸಂದೇಹದಿಂದ] ಮಹಾ ಪರಾಕ್ರಮಿಯಾದ ಭೀಮಸೇನನ ವಿಷಯದಲ್ಲಿ ಕಾರಣವಿಲ್ಲದೇಯೇ ಹೆದರುವ ನನ್ನ ಮನಸ್ಸು ಭೀಮಸೇನನು ಜಯಿಸುವನೋ ಇಲ್ಲವೋ ಎಂದು ಸಂದೇಹಿಸುತ್ತಿರುವುದು. ಎತ್ತಿದ ಗದೆಯುಳ್ಳ ಭೀಮನ ಬಲವನ್ನು ಬಲ್ಲೆನಾದರೂ, ಯುದ್ಧದಲ್ಲಿ ವಿಜಯದ ವಿಷಯದಲ್ಲಿ ಸಂದೇಹವುಳ್ಳವನಾಗಿದ್ದೇನೆ. [ದ್ರೌಪದಿಯನ್ನು ನೋಡಿ ಅವಳ ಮುಖದಲ್ಲಿರುವ ಕಣ್ಣೀರನ್ನು ಒರಸುತ್ತಾ] ಎಲೌ ಸುಕ

ಪ್ರಿಯನೇ, ಅಳಬೇಡ. ಗುರುಗಳು, ಬಂಧುಗಳು, ಅನೇಕ ರಾಜರು ಇವರುಗಳ ಮುಂದುಗಡೆಯಲ್ಲಿಯೇ ರಾಜಸಭೆಯಲ್ಲಿ ನಮ್ಮಗಳಿಗೆ ಯಾವ ಅವಮಾನ ಉಂಟಾಯಿತೋ ಆ ಅವಮಾನಕ್ಕೆ ಈಗ ನಡೆಯುವ ಯುದ್ಧದಲ್ಲಿ ಆ ಕೌರವ ಪಶುವಿನ ಪ್ರಾಣಗಳಿಗಾಗಲಿ, ನಮ್ಮಗಳ ಪ್ರಾಣಗಳಿಗಾಗಲೀ ನಾಶವನ್ನುಂಟುಮಾಡಿ ಭೀಮನು ಕೊನೆಗಾಣಿಸುವನು. ಅಥವಾ ಸಂದೇಹಪಡಬೇಕಾಗಿಲ್ಲ. ತನ್ನ ಪ್ರತಿಜ್ಞೆಗೆ ಭಂಗ ಬರುವುದೆಂಬ ಹೆದರಿಕೆಯುಳ್ಳ ಪರಾಕ್ರಮಶಾಲಿಯಾದ ಭೀಮಸೇನನು ದುರ್ಯೋಧನನ್ನು ಸಂಹರಿಸಿ ನಿನ್ನ ಕೇಶಪಾಶಗಳನ್ನು ಖಂಡಿತವಾಗಿಯೂ ಕಟ್ಟುವನು. ಪಾಂಚಾಲಕನೇ, ಆ ದುರಾತ್ಮನಾದ ಕೌರವನು ಹೇಗೆ ಸಿಕ್ಕಿದನು ಹೇಳು? ಯಾವ ಪ್ರದೇಶದಲ್ಲಿ ಈಗ ಏನು ನಡೆಯುತ್ತಲಿದೆ!

ದ್ರೌಪದಿ:—ಭದ್ರನೇ, ಹೇಳು, ಹೇಳು.

ಪಾಂಚಾಲಕ:—ಕೇಳಬೇಕು, ಶಲ್ಯನು ಮೃತನಾದ ಮೇಲೆ ಗಾಂಧಾರ ರಾಜರುಗಳೆಂಬ ಶಲಭಗಳು ಸಹದೇವನೆಂಬ ಬೆಂಕಿಯಲ್ಲಿ ಪ್ರವೇಶ ಮಾಡಿದ ಅನಂತರದಲ್ಲಿ, ಯುದ್ಧ ಭೂಮಿಯು ಸೇನಾಪತಿಯ ನಾಶದಿಂದ ಶೂನ್ಯವಾಗಿ ಅಳುತ್ತಲಿರುವ ಭಟರುಗಳಿಂದ ಶೂನ್ಯವಾಗಲು, ನಮ್ಮ ಸೈನ್ಯಗಳು ಶತ್ರುಗಳು ಸೋತದ್ದರಿಂದ ಗಟ್ಟಿಯಾಗಿ ಸಿಂಹನಾದವನ್ನು ಮಾಡುತ್ತ ತಿರುಗುತ್ತಿರುವುದನ್ನು ನೋಡಿ, ಕೃಪ, ಕೃತವರ್ಮ, ಅಶ್ವತ್ಥಾಮರುಗಳು ಪಲಾಯನ ಮಾಡಲು, ಕುಮಾರ ಭೀಮಸೇನನ ತೀವ್ರವಾದ ಪ್ರತಿಜ್ಞೆಯನ್ನು ತಿಳಿದು ದುರಾತ್ಮನಾದ ಕೌರವಾಧಮನು ಎಲ್ಲಿಯೋ ಹೋಗಿ ಮರೆಯಾದನು. ಎಲ್ಲಿಯೂ ಕಾಣಲಿಲ್ಲ.

ಯುಧಿಷ್ಠಿರ:—ಕಷ್ಟ! ಕಷ್ಟ! ಅನೀತಿ.

ದ್ರೌಪದಿ:—ಆರ್ಯನೇ ಮುಂದೆ ಹೇಳು.

ಪಾಂಚಾಲಕ:—ಅನಂತರದಲ್ಲಿ ಭೀಮಾರ್ಜುನರಿಬ್ಬರೂ ಕೃಷ್ಣನೊಂದಿಗೆ ಒಂದೇ ರಥದಲ್ಲಿ ಕುಳಿತುಕೊಂಡು, ಸಮಂತಪಂಚಕದ ಸುತ್ತಲೂ ಸುತ್ತಿದರು. ಎಲ್ಲಿಯೂ ಅವನು ಸಿಕ್ಕಲಿಲ್ಲ. ಅನಂತರದಲ್ಲಿ ಭೃತ್ಯರಾದ ನಾವೆಲ್ಲರೂ ದೌರ್ಭಾಗ್ಯವನ್ನು ಕುರಿತು ದುಃಖಿಸುತ್ತಿದ್ದೆವು. ಕುಮಾರನಾದ ಅರ್ಜುನ

ನನು ನಿಟ್ಟುಸಿರು ಬಿಡುತ್ತಿದ್ದನು. ಭೀಮನು ಮಿಂಚಿನ ಹುಳುಗಳಂತೆ ಹೊಂಬಣ್ಣಗಳಾದ ಬಿರು ನೋಟಗಳಿಂದ ಗದೆಯನ್ನು ನೋಡುತ್ತಿದ್ದನು. ಭಗವಂತನಾದ ಕೃಷ್ಣನು ದೈವದ ಸ್ವೇಚ್ಛಾಚರಣೆಯನ್ನು ನಿಂದಿಸುತ್ತಿದ್ದನು. ಆ ಸಮಯದಲ್ಲಿ ಪರಿಚಿತನಂತಿರುವ ಒಬ್ಬ ಪುರುಷನು ಆಗ ತಾನೇ ಕೊಂದ ಮೃಗಗಳ ರಕ್ತದಿಂದ ಕೆಂಪಾದ ಕೈಯಿ, ಕಾಲು, ಬಟ್ಟೆ ಇವುಗಳುಳ್ಳವನಾಗಿ ಮಾಂಸವನ್ನು ಹೊತ್ತುಕೊಂಡು ಕುಮಾರ ಭೀಮಸೇನನ ಸಮೀಪಕ್ಕೆ ಬಂದು ನಿಟ್ಟುಸಿರುಗಳಿಂದ ಅರ್ಧ ಅರ್ಧ ಮಾತುಗಳು ಕಿವಿಗೆ ಬೀಳುವಂತೆ ಕುಮಾರನನ್ನು ಕುರಿತು ಈ ದೊಡ್ಡ ಸರೋವರದ ದಡದಲ್ಲಿ ಇಬ್ಬರ ಹೆಜ್ಜೆಯ ಗುರುತುಗಳಿವೆ. ಒಂದು ಹೆಜ್ಜೆಯ ಗುರುತು ನೀರಿನಿಂದ ಮೇಲಕ್ಕೆ ಹತ್ತಿ ಬಂದಿದೆ. ಇನ್ನೊಂದು ಗುರುತು ಹತ್ತಿ ಬಂದಿಲ್ಲ ಎಂದು ಹೇಳಿದನು. ಅನಂತರದಲ್ಲಿ ನಾವೆಲ್ಲರೂ ಜಾಗ್ರತೆಯಾಗಿ ಅವನನ್ನೇ ಮುಂದಿಟ್ಟುಕೊಂಡು ಅದೇ ಕೊಳದ ಸಮೀಪಕ್ಕೆ ಹೋಗಿ ನೋಡಿದ್ದರಿಂದ, ಆ ದುರ್ಯೋಧನನ ಹೆಜ್ಜೆಯ ಗುರುತೆಂದು ತಿಳಿಯ ಬಂದಿತು. ಆಗ ಕೃಷ್ಣನು ಭೀಮನನ್ನು ಕುರಿತು, 'ವೀರನೇ ದುರ್ಯೋಧನನು ಜಲಸ್ತಂಭ ವಿದ್ಯೆಯನ್ನರಿತಿದ್ದಾನೆಯಲ್ಲವೆ? ಆ ವಿದ್ಯೆಯ ಬಲದಿಂದ ನಿನಗೆ ಹೆದರಿಕೊಂಡು ಈ ಕೊಳದಲ್ಲಿ ಆ ದುರ್ಯೋಧನನು ಮುಳುಗಿಕೊಂಡಿರಬೇಕು' ಎಂದು ಹೇಳಿದನು. ಕೃಷ್ಣನ ಈ ಮಾತನ್ನು ಕೇಳಿದ ಒಡನೆಯೇ, ಕುಮಾರ ಭೀಮನು ಸಮಸ್ತ ದಿಕ್ಕುಗಳೆಲ್ಲವೂ ಪ್ರತಿಧ್ವನಿ ಮಾಡುವಂತೆಯೂ, ಜಲಚರ ಪಕ್ಷಿಗಳೆಲ್ಲವೂ ಚೆದರಿ, ಮೀನು ಮೊಸಳೆಗಳೆಲ್ಲವೂ ಗಾಬರಿಯಿಂದ ಓಡಾಡುವಂತೆಯೂ, ಭಯಂಕರವಾಗಿ ಘರ್ಜಿಸುತ್ತಾ, ''ಎಲೈ ವ್ಯರ್ಥವಾಗಿ ಪೌರುಷಾಭಿಮಾನವನ್ನು ಇಟ್ಟುಕೊಂಡಿರತಕ್ಕವನೇ, ದ್ರೌಪದಿಯ ಕೇಶಾಂಬರಾಕರ್ಷಣ ಮಹಾ ಪಾತಕಿಯೇ, ನೀಚ ದುರ್ಯೋಧನನೇ, ನಿರ್ಮಲವಾದ ಚಂದ್ರವಂಶದಲ್ಲಿ ಹುಟ್ಟಿ ಇದ್ದೀಯೆ, ಕೈಯಲ್ಲಿ ಗದೆಯನ್ನು ಧರಿಸಿಕೊಂಡಿದ್ದೀಯೆ, ನನ್ನನ್ನು ದುಶ್ಶಾಸನನ ಬಿಸಿ ರಕ್ತವನ್ನು ಪಾನ ಮಾಡಿದ ಶತ್ರುವೆಂದು ಹೇಳುತ್ತೀಯೆ, ಅಹಂಕಾರದಿಂದ ಕೊಬ್ಬಿ ಕೃಷ್ಣನಲ್ಲಿಯೂ ಕೂಡ ಉಚ್ಛೃಂಕಲವಾಗಿ ನಡೆಯುತ್ತೀಯೆ, ಎಲೈ ನರಪಶುವೇ, ನನ್ನ ಹೆದರಿಕೆಯಿಂದ ಈಗ ಯುದ್ಧವನ್ನು ಬಿಟ್ಟು ಕೆಸರಿನಲ್ಲಿ ಅಡಗಿಕೊಂಡಿದ್ದೀಯೇ. ಮತ್ತು ಮಾನ

ಮದಗಳಿಂದ ಅಂಧನಾದ ಕೌರವಾಧಮನೇ, ಕೌರವಾಂತಃಪುರ ಸ್ತ್ರೀಯರು ದುಶ್ಶಾಸನಾದಿಗಳ ಸಂಹಾರದಿಂದ ಕೂದಲನ್ನು ಬಿಚ್ಚಿಕೊಂಡು ಇರುವುದರಿಂದ ದ್ರೌಪದಿಯ ಕೋಪಾಗ್ನಿಯು ಶಾಂತಪ್ರದವಾಗಿರುವುದು. ನಿನ್ನ ತಮ್ಮನಾದ ದುಶ್ಶಾಸನನ ರಕ್ತವನ್ನು ಕುಡಿಯುತ್ತಿರುವ ಭೀಮಸೇನನನ್ನು ನೀನು ನೋಡಿಯೂ ಕೂಡ ಈ ಸಮಯದಲ್ಲಿ ನಿನ್ನ ಅಭಿಮಾನವನ್ನು ಏಕೆ ಬಿಡುತ್ತೀಯೆ?

ದ್ರೌಪದಿ:—ನನ್ನ ಕೋಪವೆಲ್ಲವೂ ಶಾಂತವಾಯಿತು. ನಾಥನು ಪುನಃ ನನಗೆ ದರ್ಶನವನ್ನು ಕೊಟ್ಟರೆ ಸಾಕು.

ಯುಧಿಷ್ಠಿರ:—ದ್ರೌಪದಿಯೆ, ಈ ಕಾಲದಲ್ಲಿ ಅಮಂಗಳಗಳನ್ನು ಹೇಳಬೇಡ. ಆಮೇಲೆ.

ಪಾಂಚಾಲಕ:—ಅನಂತರದಲ್ಲಿ ಭೀಮನು ಹೀಗೆ ಹೇಳುತ್ತಾ, ಮಹಾ ಕೋಪದಿಂದ ವೇಗವಾಗಿ ತಿರುಗಿಸಿದ ಭಯಂಕರವಾದ ಗದೆಯನ್ನು ಕೈಯಲ್ಲಿ ಹಿಡಿದು, ಜಾಗ್ರತೆಯಾಗಿ ಆ ಕೊಳವನ್ನು ಅಲ್ಲೋಲಕಲ್ಲೋಲ ಮಾಡಿದ ಆ ವೇಗಕ್ಕೆ ನೀರು ಸುಮ್ಮನೆ ತಿರುಗುತ್ತಿತ್ತು. ಜಲಚರ ಪಕ್ಷಿಗಳೆಲ್ಲವೂ ಭಯದಿಂದ ಕೂಗುತ್ತಿದ್ದವು. ಮೀನು ಮೊಸಳೆಗಳೆಲ್ಲವೂ [illegible] [illegible]ದವು. ತಾವರೆ ಬಳ್ಳಿಗಳೆಲ್ಲವೂ ನಷ್ಟವಾಗಿ ಹೋದವು.

ಯುಧಿಷ್ಠಿರ:—ಭದ್ರನೇ, ಅದರೂ ಬರಲಿಲ್ಲವೋ!

ಪಾಂಚಾಲಕ:—ಅದು ಹೇಗೆ ಬರಲಿಲ್ಲ! ಮಹಾ ಕೋಪದಿಂದ ಕೂಡಿ, ಕಣ್ಣುಗಳಿಂದ ಕಿಡಿಗಳನ್ನು ಸುರಿಸುತ್ತಾ, ಮಂದರ ಪರ್ವತವನ್ನು ಹಾಕಿ ಕಡೆದದ್ದರಿಂದ ಕ್ಷೀರ ಸಮುದ್ರದಿಂದ ಮೇಲಕ್ಕೆ ಬಂದ ಕಾಲಕೂಟ ವಿಷದಂತೆ ಕೊಳದಿಂದ ದುರ್ಯೋಧನನು ಎದ್ದು ಬಂದನು.

ಯುಧಿಷ್ಠಿರ:—ಎಲೈ ಕ್ಷತ್ರಿಯನೇ, ಸಾಧು.

ದ್ರೌಪದಿ:—ನಾಥನು ಯುದ್ಧಕ್ಕೆ ನಿಂತನೆ!

ಯುಧಿಷ್ಠಿರ:—ಆಮೇಲೆ.

ಪಾಂಚಾಲಕ:—ಆ ಕೊಳದಿಂದ ಎದ್ದು ಎರಡು ಕೈಗಳಿಂದಲೂ ಮೇಲಕ್ಕೆ ಎತ್ತಿದ ಗದೆಯುಳ್ಳವನಾಗಿ "ಎಲೈ ಭೀಮನೇ, ದುರ್ಯೋಧನನು ನಿನ್ನ ಭಯದಿಂದ

ಅಡಗಿಕೊಂಡಿದ್ದನೆಂದು ತಿಳಿದಿದ್ದೀಯೋ? ಮೂರ್ಖ ಪಾಂಡವರನ್ನು ಕೊಲ್ಲದೆ ಪ್ರಕಾಶವಾಗಿ ಇರುವುದಕ್ಕೆ ನಾಚಿಕೆಪಟ್ಟು ವಿಶ್ರಾಂತಿಗೋಸ್ಕರ ಪಾತಾಳ ಮೂಲದಲ್ಲಿ ಇದ್ದೆನು" ಎಂದು ಹೇಳಿದನು. ಅನಂತರದಲ್ಲಿ ಕೃಷ್ಣಾರ್ಜುನರು ನೀವಿಬ್ಬರೊಳಗೆ ಯುದ್ಧ ಮಾಡಬೇಕೆಂದು ಇಬ್ಬರನ್ನೂ ಸ್ಥಲಕ್ಕೆ ಹತ್ತಿಸಿದರು. ಕೌರವ ರಾಜನು ಭೂಮಿಯಲ್ಲಿಯೇ ಕುಳಿತು ಕೊಂಡು ಗದೆಯನ್ನು ಭೂಮಿಯಲ್ಲಿಟ್ಟು ನೂರು ತಮ್ಮಂದಿರುಗಳೂ ಹತರಾಗಿರುವುದನ್ನೂ, ಆನೆ ಕುದುರೆಗಳ ಶರೀರಗಳು ಬಿದ್ದಿರುವುದನ್ನೂ, ಮನುಷ್ಯ ಶರೀರಗಳನ್ನೂ, ಆ ಹೆಣಗಳಿಗಾಗಿ ಹದ್ದು, ಕಾಗೆ, ನಾಯಿ ಮೊದಲಾದವುಗಳು ಬೀಳುತ್ತಿರುವುದನ್ನು, ನಮ್ಮ ವೀರರುಗಳು ಮಾಡುವ ಸಿಂಹನಾದವನ್ನು, ಜಯವಾದ್ಯಗಳನ್ನು, ಬಂಧುಗಳೆಲ್ಲರೂ ಸತ್ತಿರುವುದನ್ನೂ ಕೌರವರು ಯಾರೂ ಇಲ್ಲದಿರುವುದನ್ನೂ ನೋಡಿ, ದೀರ್ಘವಾಗಿ ಬಿಸಿಬಿಸಿಯಾಗಿ ನಿಟ್ಟುಸಿರು ಬಿಡುತ್ತಿದ್ದನು. ಆ ಸಮಯದಲ್ಲಿ ಭೀಮನು "ಎಲೈ ಕೌರವರಾಜನೇ, ಬಂಧುಗಳು ನಾಶವಾದದ್ದನ್ನು ನೋಡಿ ದುಃಖಪಡುವುದು ಸಾಕು. ಪಾಂಡವರೆಲ್ಲರು ಸೇರಿರುವುದರಿಂದಲೂ, ನಾನು ಒಬ್ಬನೇ ಆಗಿರುವುದರಿಂದಲೂ, ಅಸಹಾಯನಾಗಿದ್ದೇನೆ ಎಂದು ಯೋಚಿಸಬೇಡ. ನಮ್ಮ ಐದು ಜನಗಳೊಳಗೆ ಯಾರೊಂದಿಗೆ ನೀನು ಯುದ್ಧಮಾಡುವುದಕ್ಕೆ ಇಷ್ಟ ಪಡುತ್ತೀಯೋ ಅವನೊಬ್ಬನೊಂದಿಗೇನೇ ನಿನ್ನ ರಣೋತ್ಸವವು ನಡೆಯಲಿ" ಎಂದು ಭೀಮನು ಹೇಳಿದನು ಆಗ ಕೌರವನು ಈ ಮಾತುಗಳನ್ನು ಕೇಳಿ ಕಣ್ಣೀರಿನಿಂದ ಕೂಡಿದ ದೃಷ್ಟಿಯನ್ನು ಭೀಮಾರ್ಜುನರ ಮೇಲೆ ಇಟ್ಟು 'ನಿಮ್ಮಿಬ್ಬರಲ್ಲಿ ಒಬ್ಬನು ಕರ್ಣನನ್ನೂ, ಒಬ್ಬನು ದುಶ್ಶಾಸನನನ್ನು ಕೊಂದಿರುವುದರಿಂದ ನನಗೆ ನೀವಿಬ್ಬರೂ ಒಂದೇನೆ. ಭೀಮಸೇನನಾದ ನೀನು ಸಾಹಸದಲ್ಲಿ ಪ್ರೀತಿಯುಳ್ಳವನಾದ ಕಾರಣ ನಿನ್ನೊಂದಿಗೆ ಯುದ್ಧ ಮಾಡುವೆನು' ಎಂದು ಮೇಲೆ ಎದ್ದು ಪರಸ್ಪರವಾಗಿ ಆಕ್ಷೇಪ ವಚನಗಳಿಂದ ಮಾತಿನ ಜಗಳವನ್ನೆತ್ತಿ ಇಬ್ಬರೂ ಘೋರ ಯುದ್ಧವನ್ನು ಆರಂಭಿಸಿ ವಿಚಿತ್ರವಾದ ಗದೆಗಳಿಂದ ಪ್ರಕಾಶಿಸುವ ಭುಜಾಂತರಗಳುಳ್ಳವರಾಗಿ ಮಂಡಲಾಕಾರವಾಗಿ ಸಂಚರಿಸಲಾರಂಭಿಸಿದರು. ನಾನು ಕೃಷ್ಣನ ಅಪ್ಪಣೆಯಿಂದ ನಿನ್ನ ಸಮೀಪಕ್ಕೆ ಬಂದೆನು.

ಭೀಮನು ಶೀಘ್ರದಲ್ಲಿ ನಡಿಸಬೇಕಾದ ಪ್ರತಿಜ್ಞೆಯನ್ನು ಮಾಡಿದ್ದರಿಂದಲೂ, ಕೌರವನು ಕಾಣದೇ ಹೋದದ್ದರಿಂದಲೂ, ನಮಗೆ ಬಹಳ ದುಃಖವಾಗಿತ್ತು. ಈಗ ದುರ್ಯೋಧನನು ಭೀಮನ ಕೈಗೆ ಸಿಕ್ಕಿರುವುದರಿಂದ ಭೂಮಂಡಲವು ನಿಷ್ಕಂಟಕವಾಯಿತೆಂದು ನೀನು ತಿಳಿದುಕೊಳ್ಳಬಹುದು. ಅಭ್ಯುದಯಕ್ಕೆ ಯೋಗ್ಯವಾದ ಮಂಗಳ ಸಮಾರಂಭವು ನಡೆಸಲ್ಪಡಲಿ. ಸಂದೇಹವು ಬೇಕಿಲ್ಲ. ನಿನ್ನ ರಾಜ್ಯಾಭಿಷೇಕಕ್ಕಾಗಿ ರತ್ನ ಕಲಶಗಳಲ್ಲಿ ತೀರ್ಥವನ್ನು ಪೂರ್ಣಮಾಡಲಿ. ದ್ರೌಪದಿಯು ಬಹುಕಾಲದಿಂದಲೂ ಬಿಚ್ಚಿರುವ ಕೇಶಪಾಶಗಳಲ್ಲಿ ಸಂತೋಷ ಸೂಚಕವಾದ ಸಂಸ್ಕಾರಗಳನ್ನು ಮಾಡಲಿ. ಕ್ಷತ್ರಿಯರನ್ನು ಸಂಹರಿಸುವುದರಲ್ಲಿ ಅಪ್ರತಿಹತವಾದ ಕುಠಾರವುಳ್ಳ ಪರಶುರಾಮನಂತೆ ಭೀಮನು ಕುಪಿತನಾಗಿ ಯುದ್ಧದಲ್ಲಿ ನಿಂತಿರುವಾಗ ಸಂಶಯವೇಕೆ?

ದ್ರೌಪದಿ:—ತ್ರಿಭುವನನಾಥನಾದ ಕೃಷ್ಣನು ಹೇಗೆ ಅಪ್ಪಣೆ ಕೊಡಿಸಿದರ ಹಾಗಾಗುವುದು.

ಪಾಂಚಾಲಕ:—ಇದು ಕೇವಲ ಆಶೀರ್ವಾದ ಮಾತ್ರವಲ್ಲ. ಶ್ರೀಕೃಷ್ಣನ ಅಪ್ಪಣೆಯು.

ಯುಧಿಷ್ಠಿರ:—ಭಗವಂತನ ಅಪ್ಪಣೆಯನ್ನು ಯಾರು ತಾನೇ ಅನ್ಯಥಾ ಭಾವಿಸುವರು? ಎಲೈ ಕಂಚುಕಿಯೇ, ದೇವಕೀನಂದನನ ಬಹುಮಾನದಿಂದ ಪಾತ್ರನಾದ ಭೀಮಸೇನನಿಗೆ ವಿಜಯ ಮಂಗಳಕ್ಕೋಸ್ಕರ ಉಚಿತವಾದ ಸಮಾರಂಭಗಳು ನಡಿಸಲ್ಪಡಲಿ.

ಕಂಚುಕಿ:—ಅಪ್ಪಣೆ (ಎಂದು ಹೋಗಿ) ಎಲೈ ಅಧಿಕಾರ ಪ್ರಮುಖರುಗಳಿರಾ! ಅಂತಃಪುರಾಧಿಕಾರಿಗಳಿರಾ, ದ್ವಾರಪಾಲಕರೇ, ಪಾರಿಪಾರ್ಶ್ವಕರುಗಳಿರಾ, ಕೌರವರಿಂದುಂಟಾದ ಅವಮಾನವೆಂಬ ಮಹಾ ಸಾಗರವನ್ನು ಭುಜಬಲದಿಂದ ದಾಟಿ ಅಸಾಧ್ಯವಾದ ಪ್ರತಿಜ್ಞೆಯನ್ನು ನೆರವೇರಿಸಿ, ದುರ್ಯೋಧನನ ನೂರು ಜನ ಅನುಜರುಗಳನ್ನೂ ಉನ್ಮೂಲನ ಮಾಡಿ, ದುಶ್ಶಾಸನನ ಎದೆಯನ್ನು ಸೀಳುವುದರಲ್ಲಿ ನರಸಿಂಹನಾಗಿ, ದುರ್ಯೋಧನನ ತೊಡೆಗಳನ್ನು ಮುರಿಯುವುದರಲ್ಲಿ ಸಿಕ್ಷಯವಾದ ಜಯವುಳ್ಳ ವೀರನಾದ ಭೀಮಸೇನನಲ್ಲಿ ವಿಶೇ

ಜವಾದ ಸ್ನೇಹವುಳ್ಳ ಮಹಾರಾಜ ಯುಧಿಷ್ಠಿರನು ಮಂಗಳಾರಂಭದಲ್ಲಿ ಉದ್ಯುಕ್ತನಾಗಿದ್ದಾನೆ. ಏನು ಹೇಳುವಿರಿ? ಅದಕ್ಕಿಂತಲೂ ಹೆಚ್ಚಾಗಿ ಎಲ್ಲವನ್ನೂ ನಡೆಸಿರುವುದನ್ನು ನೋಡು ಎಂತಲೋ? (ಹಾಗೆಯೇ ನೋಡಿ) ಬಹಳ ಸಂತೋಷ. ಹೀಗೆ ಹೇಳದೇನೇ ಹಿತವನ್ನು ಮಾಡತಕ್ಕದ್ದು ಮನಸ್ಸಿನಲ್ಲಿರುವ ಸ್ವಾಮಿಭಕ್ತಿಯನ್ನು ಹೊರಪಡಿಸುತ್ತದೆ.

ಯುಧಿಷ್ಠಿರ:—ಆರ್ಯ ಜಯಂಧರನೇ,

**ಕಂಚುಕಿ:**—ಏನು ಅಪ್ಪಣೆ?

**ಯುಧಿಷ್ಠಿರ:**—ಸಂತೋಷ ಸಮಾಚಾರವನ್ನು ಹೇಳಿದ ಪಾಂಚಾಲಕನಿಗೆ ಪಾರಿತೋಷಕವನ್ನು ಕೊಟ್ಟು ಸಂತೋಷವನ್ನುಂಟುಮಾಡು ಹೋಗು.

ಕಂಚುಕಿ:—ಅಪ್ಪಣೆ (ಎಂದು ಪಾಂಚಾಲಕನನ್ನು ಕರೆದುಕೊಂಡು ಹೋಗುವನು.)

ದ್ರೌಪದಿ.—ನಾಥನೇ, ಭೀಮಸೇನನು ನಮ್ಮ ಐದು ಜನಗಳೊಳಗೆ ನಿನಗಿಷ್ಟಬಂದವರೊಂದಿಗೆ ಯುದ್ಧ ಮಾಡಬಹುದೆಂದು ಆ ದುರಾಚಾರನಾದ ದುರ್ಯೋಧನನಿಗೆ ಏಕೆ ಹೇಳಿದನು? ಒಂದು ವೇಳೆ ಅವರೊಳಗೆ ಭೀಮನನ್ನು ಬಿಟ್ಟು ಇನ್ನಾರೊಂದಿಗಾದರೂ ಯುದ್ಧ ಮಾಡುವುದಕ್ಕೆ ಅಪೇಕ್ಷಿಸಿದ್ದರೆ ಬಹಳ ಕಷ್ಟವಾಗುತ್ತಿತ್ತಲ್ಲವೇ?

ಯುಧಿಷ್ಠಿರ:—ಪಾಂಚಾಲ ರಾಜಪುತ್ರಿಯೇ, ಭೀಮನ ಅಭಿಪ್ರಾಯವೇ ಬೇರೆ. ಸಮಸ್ತರಾದ ಸ್ನೇಹಿತರೂ, ಬಂಧುಗಳೂ, ಶೂರರಾದ ಅನುಜರೂ ಇವರೆಲ್ಲರನ್ನೂ ಕಳೆದುಕೊಂಡು, ಕೃಪ, ಕೃತವರ್ಮ, ಅಶ್ವತ್ಥಾಮ ಇವರುಗಳ ಹೊರತು ಹನ್ನೊಂದಕ್ಷೋಹಿಣೀ ಸೈನ್ಯಗಳೂ ನಷ್ಟವಾಗಿ ಹೋದದ್ದರಿಂದ ಬಂಧುಹೀನನಾಗಿ ಶರೀರ ಮಾತ್ರದಿಂದ ಉಳಿದುಕೊಂಡಿರುವ ದುರ್ಯೋಧನನು ಒಂದು ವೇಳೆ ತನ್ನ ಅಹಂಕಾರವನ್ನು ಬಿಟ್ಟು ಶಸ್ತ್ರತ್ಯಾಗವನ್ನು ಮಾಡಬಹುದು. ತಪೋವನಕ್ಕಾದರೂ ಹೋಗಬಹುದು. ಅಥವಾ ತನ್ನ ತಂದೆಯ ಮೂಲಕ ಸಂಧಿಯನ್ನು ಪ್ರಾರ್ಥಿಸಿದರೂ ಪ್ರಾರ್ಥಿಸಬಹುದು. ಹಾಗಾದರೆ ಪ್ರತಿಜ್ಞಾಭಾರವು ತೊಡೆದುಹೋಗಿಬಿಟ್ಟೀತು. ಪ್ರತಿಜ್ಞೆಯು ಸಿದ್ಧಿಸಲಾಗಿ ಆಗದೇ ಹೋಯಿತೆಂದು ಯುದ್ಧವನ್ನು ಅವನು ಒಪ್ಪುವುದಕ್ಕಾಗಿ ನಮ್ಮೈವರೊಂದಿಗೆ ಯಾರೊಂದಿಗಾದರೂ ಯುದ್ಧ ಮಾ

ಡಬಹುದೆಂದು ಹೇಳಿದನು. ಇವನೊಂದಿಗೆ ಗದಾ ಯುದ್ಧವನ್ನು ಮಾಡಬೇಕಾದರೆ ಭೀಮನಿಗೆ ಹೊರತು ಇತರರಿಗೆ ಆಗುವದಿಲ್ಲವೆಂದು ನಾನು ಊಹಿಸುತ್ತೇನೆ. ಸುಕ್ಷತ್ರಿಯನೇ ನೋಡು. ಕೋಪದಿಂದ ಗದೆಯನ್ನು ತಿರುಗಿಸುವ ಭೀಮನಿಗೆ ಯುದ್ಧದಲ್ಲಿ ಯಾರೂ ಸಮರಲ್ಲ. ನಿಜ, ಆದರೆ ದುರ್ಯೋಧನನಲ್ಲಿ ಕರಕೌಶಲವು ಬಲರಾಮನಲ್ಲ ಹೇಗೋ ಹಾಗೆಯೇ ಇರುವುದು. ಧಾರ್ತರಾಷ್ಟ್ರರೆಲ್ಲರನ್ನೂ ನಾಶಮಾಡಿದ ಪಕ್ಷನಾದ ಭೀಮಸೇನನಿಗೆ ಸ್ವಸ್ತ್ಯಸ್ತು. ದುರ್ಯೋಧನನೊಂದಿಗೆ ಯುದ್ಧವು ಈತನಿಗೆ ಸರಿಯಾಗಿದೆ.

(ಅನಂತರದಲ್ಲಿ ಋಷಿಯ ವೇಷದಿಂದ ಚಾರ್ವಾಕನೆಂಬ ರಾಕ್ಷಸನು ಪ್ರವೇಶಿಸುವನು.)

ಚಾರ್ವಾಕ:—ಬಹಳ ಬಾಯಾರಿಕೆಯಾಗಿದೆ, ಇಲ್ಲಿರತಕ್ಕವರು ಯಾರಾದರೂ ನೀರು ನೆರಳನ್ನು ಕೊಟ್ಟು ನನ್ನನ್ನು ಗೌರವಿಸಬೇಕೆಂದು ರಾಜನ ಸಮೀಪಕ್ಕೆ ಬರುವನು.

(ಎಲ್ಲರೂ ಏಳುವರು.)

ಯುಧಿಷ್ಠಿರ:—ಮುನಿಗಳೇ, ನಮಸ್ಕರಿಸುತ್ತೇನೆ.

ಚಾರ್ವಾಕ:—ಅತಿಥಿ ಜನಗಳ ಸತ್ಕಾರಕ್ಕಿದು ಕಾಲವಲ್ಲ. ನೀರು ಕೊಟ್ಟರೆ ಸಾಕಾಗಿದೆ.

ಯುಧಿಷ್ಠಿರ:—ಈ ಆಸನದಲ್ಲಿ ಕುಳಿತುಕೊಳ್ಳಬೇಕು.

ಚಾರ್ವಾಕ:—(ಕುಳಿತುಕೊಂಡು) ನೀನೂ ಆಸನದಲ್ಲಿ ಕುಳಿತುಕೊ.

ಯುಧಿಷ್ಠಿರ:—ಜಯಂಧರನೇ, ಮುನಿಗಳು ಬಾಯಾರಿರುವರು, ನೀರು ತಂದು ಕೊಡು.

(ಎಲ್ಲರೂ ಕುಳಿತುಕೊಳ್ಳುವರು.)

ಕಂಚುಕಿ:—(ಹಾಗೆಯೇ) ಅಪ್ಪಣೆ (ಎಂದು ಹೋಗಿ) ತಣ್ಣಗಿರುವ ಪರಿಮಳ ವಿಶಿಷ್ಟವಾದ ನೀರು ತುಂಬಿದ ಚಿನ್ನದ ಗಿಂಡಿಯನ್ನೂ, ಕುಡಿಯುವ ಪಾತ್ರೆಯನ್ನೂ ತಂದಿಡುವನು.

ಯುಧಿಷ್ಠಿರ:—ಮುನಿಗಳೇ, ಬಾಯಾರಿಕೆಯನ್ನು ಪರಿಹರಿಸಿಕೊಳ್ಳಬಹುದು.

ಚಾರ್ವಾಕ:—(ಕಾಲುಗಳನ್ನು ತೊಳೆದುಕೊಂಡು ಹಾಗೆಯೇ ಯೋಚಿಸಿ) ನೀನು ಕ್ಷತ್ರಿಯನೆಂದು ತೋರುತ್ತದೆ.

ಯುಧಿಷ್ಠಿರ:—ಸರಿಯಾಗಿ ಊಹಿಸಿದಿರಿ.

ಚಾರ್ವಾಕ:—ಜನಗಳನ್ನು ನಾಶಮಾಡುವ ಯುದ್ಧದಲ್ಲಿ ರಾಜರುಗಳು ಯಾವಾಗಲೂ ಉದ್ಯುಕ್ತರಾಗಿರುವರು. ಆದ್ದರಿಂದ ನಿಮ್ಮ ನೀರನ್ನು ಕುಡಿಯಬಾರದು. ಇರಲಿ. ಈ ನೆರಳಿನಿಂದಲೂ, ಸರಸ್ವತೀನದಿಯ ನೀರಿನ ಮೇಲೆ ಬೀಸುವ ಗಾಳಿಯಿಂದಲೂ ಶ್ರಮವನ್ನು ಹೋಗಲಾಡಿಸಿಕೊಳ್ಳುವೆನು.

ದ್ರೌಪದಿ:—ಬುದ್ಧಿಮತಿಕೆಯೇ, ಬೀಸಣಿಗೆಯಿಂದ ಮಹರ್ಷಿಯನ್ನು ಬೀಸು.

ಚೇಟಿ:—ಅಪ್ಪಣೆ (ಎಂದು ಬೀಸುವಳು.)

ಚಾರ್ವಾಕ:—ಆಗಲಿ. ಈ ಸದಾಚಾರವು ಉಚಿತವಾದದ್ದು.

ಯುಧಿಷ್ಠಿರ:—ಹೀಗೆ ನೀವು ಪರಿಶ್ರಾಂತರಾಗಲು ಕಾರಣವೇನು?

ಚಾರ್ವಾಕ:—ಅಯ್ಯಾ, ಹುಡುಗರಿಗೆ ಬಾಲ್ಯ ಚಾಪಲ್ಯಕ್ಕೆ ಸರಿಯಾದ ಕುತೂಹಲ [illegible]ದಿಂದ ಕ[illegible]ದ ಯುದ್ಧವನ್ನು ನೋಡುವುದರಿಂದ ದೊಡ್ಡ [illegible] ಸಮಂತ ಪಂಚಕದ ಸುತ್ತಲೂ ಸುತ್ತುತ್ತಿದ್ದೇನೆ. ಈ ದಿವಸ ದಕ್ಕಾಗಿ ಸ್ಯಮಂತ ಪಂಚಕದ ಸುತ್ತಲೂ ಸುತ್ತುತ್ತಿದ್ದೇನೆ. ಈ ದಿವಸದಲ್ಲಿ ಅರ್ಜುನನಿಗೂ ದುರ್ಯೋಧನನಿಗೂ ನಡೆದ ಗದಾ ಯುದ್ಧವನ್ನು ನೋಡುತ್ತಿದ್ದು ಶರತ್ಕಾಲದ ಬಿಸಿಲು ಬಹಳವಾಗಿದ್ದುದರಿಂದ ನಿಲ್ಲಲಾರದೆ, ಯುತ್ತಪಿಲ್ಲದೆ ಅರ್ಧದಲ್ಲಿಯೇ ಬಂದು ಬಿಟ್ಟೆನು. (ಎಲ್ಲರೂ ದುಃಖಪಡುವರು )

ಕಂಚುಕಿ:—ಮಹರ್ಷಿಯೇ, ಹಾಗಲ್ಲ. ಭೀಮ ದುರ್ಯೋಧನರಿಗೆಂದು ಹೇಳು.

ಚಾರ್ವಾಕ:—(ಅಸೂಯೆಯಿಂದ) ಏನು? ಏನೂ ತಿಳಿಯದೇ ಇರುವವನಂತೆ ನನ್ನನ್ನು ಆಕ್ಷೇಪಿಸುತ್ತೀಯೋ?

ಯುಧಿಷ್ಠಿರ:—(ಕಣ್ಣೀರು ತುಂಬಿಕೊಂಡು) ಮುನಿಗಳೇ, ಹೇಳಿರಿ.

ಚಾರ್ವಾಕ:—ಒಂದು ಕ್ಷಣ ಮಾತ್ರ ಸುಧಾರಿಸಿಕೊಂಡು ಎಲ್ಲವನ್ನೂ ನಿನಗೆ ಹೇಳುತ್ತೇನೆ. ಈ ಮುದುಕನಿಗೆ ಹೇಳುವುದಿಲ್ಲ.

ಯುಧಿಷ್ಠಿರ:—ಪೂಜ್ಯರೇ ಇಷ್ಟು ಹೇಳಿರಿ. ಅರ್ಜುನ ದುರ್ಯೋಧನರಿಗೆ ಎಂತಲೆ.

ಚಾರ್ವಾಕ:—ಹೇಳಿದೆನಲ್ಲಾ, ಗದಾ ಯುದ್ಧವು ನಡಿಯುತ್ತಲಿದೆ ಎಂದು.

ಯುಧಿಷ್ಠಿರ:—(ಕಣ್ಣೀರು ಬಿಡುತ್ತಾ) ಭೀಮ ದುರ್ಯೋಧನರಿಗಲ್ಲವೇ?

ಚಾರ್ವಾಕ—ಅದು ಮುಗಿದು ಹೋಯಿತು. (ಯುಧಿಷ್ಠಿರನೂ ದ್ರೌಪದಿಯೂ ಮೂರ್ಛೆ ಹೋಗುವರು.)

ಕಂಚುಕಿ;—(ಅವರ ಮೇಲೆ ನೀರನ್ನು ಸಿಂಪಡಿಸುತ್ತಾ) ರಾಜನೇ ಸಮಾಧಾನ ಹೊಂದು. ದೇವಿಯೇ ಸಮಾಧಾನ ಹೊಂದು.

ಚೇಟಿ:—ದೇವಿಯೇ, ಸಮಾಧಾನ ಹೊಂದು.

(ಇಬ್ಬರೂ ಎಚ್ಚರಗೊಳ್ಳುವರು.)

ಯುಧಿಷ್ಠಿರ:—ಮುನಿಗಳೇ, ಭೀಮ ದುರ್ಯೋಧನರುಗಳಿಗೆ ಗದಾ ಯುದ್ಧವು ಮುಗಿದು ಹೋಯಿತೆಂದು ಹೇಳಿದಿರಾ?

ದ್ರೌಪದಿ:—ಪೂಜ್ಯರೇ, ಏನು ನಡೆಯಿತು, ಹೇಳಿರಿ.

ಚಾರ್ವಾಕ:—ಕಂಚುಕೀ, ಇವರು ಯಾರು?

ಕಂಚುಕಿ:—ಪೂಜ್ಯರೇ, ಇವನು ಧರ್ಮರಾಯನು, ಇವಳು ಪಾಂಚಾಲಿಯು.

ಚಾರ್ವಾಕ:—ಅಯ್ಯೋ, ಕ್ರೂರನಾದ ನಾನು ಏನು ಆರಂಭಿಸಿಬಿಟ್ಟೆ. ಕಷ್ಟ!

ದ್ರೌಪದಿ:—ನಾಥನೇ, ಮಂದಭಾಗಿನಿಯಾದ ನನಗೆ ಪ್ರತ್ಯುತ್ತರವನ್ನು ಕೊಡು (ಎಂದು ಮೂರ್ಛೆ ಹೋಗುವಳು.)

ಕಂಚುಕಿ:—ಇವನು ಏನು ಹೇಳಿಬಿಟ್ಟನು?

ಚೇಟಿ:—ದೇವಿಯೇ, ಸಮಾಧಾನ ಹೊಂದು.

ಯುಧಿಷ್ಠಿರ:—[ಕಣ್ಣೀರು ತುಂಬಿಕೊಂಡು] ಬ್ರಾಹ್ಮಣೋತ್ತಮನೇ ಹೇಳು, ಹೇಳು. ಈ ಸಂದೇಹದಲ್ಲಿಯೇ ಯುಧಿಷ್ಠಿರನಿಗೆ ಇಷ್ಟು ದುಃಖವಾಗಿದೆ. ವತ್ಸನಿಗೆ ಉಂಟಾದ ದುಃಖವು ನಿಶ್ಚಯವಾಗಿ ತಿಳಿದರೆ ಪ್ರಾಣತ್ಯಾಗದಿಂದಲೇ ಸುಖಪಡುವೆನು.

ಚಾರ್ವಾಕ:—[ಸಂತೋಷದಿಂದ ತನ್ನಲ್ಲಿ ತಾನು] ನನ್ನ ಪ್ರಯತ್ನವು ಅದಕ್ಕೇನೆ. [ಪ್ರಕಾಶವಾಗಿ] ಅವಶ್ಯವಾಗಿ ಹೇಳಬೇಕಾದ ಸಂದರ್ಭದಲ್ಲಿ ಸಂಕ್ಷೇಪವಾಗಿ ಹೇಳುತ್ತೇನೆ. ಬಂಧು ವ್ಯಸನವನ್ನು ವಿಸ್ತರಿಸಿ ಹೇಳುವುದು ಸರಿಯಲ್ಲ.

ಯುಧಿಷ್ಠಿರ:—ಸಂಕ್ಷೇಪವಾಗಿಯೋ, ವಿಸ್ತಾರವಾಗಿಯೋ, ಹ್ಯಾಗಾದರೂ ಹೇಳು. ವತ್ಸನಿಗೆ ಏನಾಗಿದ್ದರೂ ಕೇಳುವುದಕ್ಕೆ ಸಿದ್ಧನಾಗಿರುವೆನು.

ಚಾರ್ವಾಕ:—ಕೇಳು. ಕೌರವ ಭೀಮರುಗಳಿಗೆ ಭಯಂಕರವಾದ ಗದಾ ಯುದ್ಧವು ನಡೆದಾಗ—

ದ್ರೌಪದಿ:—[ಜಾಗ್ರತೆಯಾಗಿ ಎದ್ದು] ಆಮೇಲೆ.

ಚಾರ್ವಾಕ:—[ತನ್ನಲ್ಲಿ ತಾನು] ಪುನಃ ಇವರಿಗೆ ಮೂರ್ಛೆಯನ್ನುಂಟು ಮಾಡಲೇ? [ಪ್ರಕಾಶವಾಗಿ] ಜಾಗ್ರತೆಯಾಗಿ ಬಲರಾಮನು ಬಂದನು. ಅವನೆದುರಿಗೆ ಬಹುಕಾಲ ಯುದ್ಧವಾಯಿತು. ಅನಂತರದಲ್ಲಿ ಪ್ರಿಯಶಿಷ್ಯನಾದ ದುರ್ಯೋಧನನಿಗೆ ಬಲರಾಮನು ರಹಸ್ಯವಾಗಿ ಸನ್ನೆಯನ್ನು ಮಾಡಿದನು. ಅದನ್ನು ತಿಳಿದುಕೊಂಡು ದುರ್ಯೋಧನನು ದುಶ್ಯಾಸನನ ಶತ್ರುವನ್ನು ಹಗೆ ತೀರಿಸಿಕೊಂಡನು.

ಯುಧಿಷ್ಠಿರ:—ಹಾ ವತ್ಸ, ವೃಕೋದರ (ಎಂದು ಬೀಳುವನು.)

ದ್ರೌಪದಿ:—ನಾಥ, ಭೀಮಸೇನ, ನನ್ನ ಅವಮಾನಕ್ಕೆ ಪ್ರತೀಕಾರವನ್ನು ಮಾಡಲು ಜೀವವನ್ನು ಬಿಟ್ಟವನೇ, ಜಟಾಸುರ, ಹಿಡಿಂಬ, ಕಿರ್ಮ್ಮೀರ, ಕೀಚಕ, ಜರಾಸಂಧ, ಬಕ ಮೊದಲಾದವರನ್ನು ಸಂಹರಿಸಿದ ಶೂರನೇ, ಸೌಗಂಧಿಕಾ ಕುಸುಮವನ್ನು ತಂದ ವೀರನೇ, ಶೋಕಾಂಧಕಾರಕ್ಕೆ ಸೂರ್ಯನಂತಿದ್ದವನೇ, ಪ್ರತಿ ವಚನವನ್ನು ಕೊಡು (ಎಂದು ಮೂರ್ಛೆಹೋಗುವಳು.)

ಕಂಚುಕಿ:—(ಕಣ್ಣೀರು ಬಿಡುತ್ತಾ) ಹಾ ಕುಮಾರ ಭೀಮಸೇನನೇ, ತಾವರೆಯನ್ನು ಹಿಮವು ನಾಶಮಾಡುವಂತೆ ಧಾರ್ತರಾಷ್ಟ್ರಕುಲವನ್ನೆಲ್ಲವನ್ನೂ ನಾಶಮಾಡಿದವನೇ, ಮಹಾರಾಜನೇ! ಸಮಾಧಾನ ಹೊಂದು. ಬುದ್ಧಿಮತಿಕೆಯೇ ರಾಣಿಯನ್ನು ಸಮಾಧಾನ ಪಡಿಸು. ಮಹರ್ಷಿಯೇ, ನೀನೂ ರಾಜನನ್ನು ಸಮಾಧಾನಗೊಳಿಸು.

ಚಾರ್ವಾಕ:—(ಮನಸ್ಸಿನಲ್ಲಿ ಪ್ರಾಣವನ್ನು ಕಳೆಯುವುದಕ್ಕೆ ಸಮಾಧಾನ ಪಡಿಸುವೆನು) (ಪ್ರಕಾಶವಾಗಿ) ಎಲೈ ಭೀಮಾಗ್ರಜನೇ, ಒಂದು ಕ್ಷಣಕಾಲ ಸಮಾಧಾನವನ್ನು ತಂದುಕೋ.

ಯುಧಿಷ್ಠಿರ:—ಮುನಿಗಳೇ, ಕಥಾಶೇಷವಿನ್ನೇನಿದೆ?

ಚಾರ್ವಾಕ:—ಆ ಸುಕ್ಷತ್ರಿಯನು ಪತನಾಗಿ ವೀರಗತಿಯನ್ನು ಹೊಂದಿದ ನಂತರ ಅರ್ಜುನನು ಅಣ್ಣನ ವಧದಿಂದುಂಟಾದ ದುಃಖವನ್ನು ಬಿಟ್ಟು ಗಾಂಡೀವವ

ನ್ನೊಂದು ಕಡೆ ಇಟ್ಟು ವೈರಿರಕ್ತದಿಂದ ವ್ಯಾಪ್ತವಾದ ಅದೇ ಗದೆಯನ್ನು ಅಣ್ಣನ ಕೈಯಿಂದ ಪ್ರಯತ್ನಪುರಸ್ಸರವಾಗಿ ಎಳೆದು ಹಿಡಿದುಕೊಂಡು ಸಂಧಿಯನ್ನು ಬಯಸಿ ವಾಸುದೇವನು ತಡೆದಾಗ್ಯೂ ಗದೆಯನ್ನು ಕೈಯಲ್ಲಿ ಹಿಡಿದು ನಗುತ್ತಾ, ಅರ್ಜುನನೇ ಬಾ ಎಂಬದಾಗಿ ಕರೆಯುತ್ತಲಿರುವ ಕೌರವರಾಜನೊಡನೆ ಯುದ್ಧಕ್ಕೆ ನಿಂತನು. ಅನಂತರದಲ್ಲಿ ಗದಾ ಘಾತದಿಂದ ಅರ್ಜುನನು ಸಾಯುವನೆಂದೂಹಿಸಿ, ಬಲರಾಮನು ಅರ್ಜುನನ ಪಕ್ಷಪಾತಿಯಾದ ಕೃಷ್ಣನನ್ನು ಬಲಾತ್ಕಾರವಾಗಿ ತನ್ನ ರಥದಲ್ಲಿ ಕೂಡಿಸಿಕೊಂಡು ದ್ವಾರಕಿಗೆ ಕರೆದುಕೊಂಡು ಹೋದನು.

ಯುಧಿಷ್ಠಿರ:—ಅರ್ಜುನನೇ, ಗಾಂಡೀವವನ್ನು ಬಿಟ್ಟು ಭೀಮನನ್ನು ಅನುಸರಿಸಿ ಹೋಗುವ ಮಾರ್ಗವನ್ನು ದೈವಯೋಗದಿಂದ ನೀನು ಹೊಂದಿದೆ. ಒಳ್ಳೇ ಕೆಲಸ ಮಾಡಿದೆ. ನಾನು ಯಾವ ಪಥದಲ್ಲಿ ಪ್ರಾಣನಾಶಕ ಮಹೋತ್ಸವವನ್ನು ನಿರೀಕ್ಷಿಸಲಿ.

ದ್ರೌಪದಿ:—(ಎದ್ದು) ಹಾ ನಾಥನೇ! ಭ್ರಾತೃವತ್ಸಲನೇ, ಗದಾ ಯುದ್ಧದಲ್ಲಿ ಅಶಿಕ್ಷಿತನಾದ ಅರ್ಜುನನನ್ನು ಶತ್ರುವಿನ ಅಭಿಮುಖನಾಗಿ ಹೋಗುತ್ತಿರುವುದನ್ನು ಉದಾಸೀನ ಮಾಡುವುದು ಉಚಿತವಲ್ಲ (ಎಂದು ಮೂರ್ಛಿತಳಾಗುವಳು.)

ಚಾರ್ವಾಕ.—ಆಮೇಲೆ ನಾನು, —

ಯುಧಿಷ್ಠಿರ:—ಇರಲಿ, ಇನ್ನು ಮುಂದೆ ಏಕೆ ಕೇಳಬೇಕು? ಹಾ ಭೀಮನೇ, ಸಮುದ್ರದಹಾಗಿದ್ದ ಅರಗಿನ ಮನೆಯಿಂದ ದಾಟಿಸಿದವನೇ, ಕಿರ್ಮೀರ, ಜಟಾಸುರ, ಹಿಡಿಂಬ, ಬಕ, ಮಲ್ಲ, ಕೀಚಕರುಗಳನ್ನೂ, ದುರ್ಯೋಧನನ ತಮ್ಮಂದಿರುಗಳನ್ನೂ ಸಂಹರಿಸಿದ ಮಹಾ ವೀರನೇ, ದ್ಯೂತದಲ್ಲಿ ಸೋತು ಕಾಡಿಗೆ ಹೋದಾಗ ಸಹಾಯಕನಾಗಿದ್ದವನೇ, ನನ್ನ ಜೀವನ ಸ್ಥಿತಿಯಲ್ಲಿ ಸಂಭಾವಿತವಾದ ಸಮಸ್ತ ದುಃಖಗಳನ್ನೂ ನಿವಾರಣೆ ಮಾಡಿದವನೇ, ಕೌರವ ಸೈನ್ಯಕ್ಕೆ ದಾವಾನಲಪ್ರಾಯನಾದವನೇ, ನನ್ನ ಆಜ್ಞೆಯನ್ನು ಸ್ವಲ್ಪವೂ ಬಿಡದೇ ನಡೆಸುತ್ತಿದ್ದೆಯಲ್ಲಾ. ಬಾಲ್ಯದಲ್ಲಿ ಆಸಕ್ತನಾಗಿ ನಾಚಿಕೆಯಿಲ್ಲದೆ, ಇರುವ ನನ್ನಲ್ಲಿ ಭಕ್ತಿಯನ್ನಿಟ್ಟು ನೀನು ಹತ್ತು ಸಹಸ್ರ ಆನೆಯ ಬಲವುಳ್ಳವನಾದಾಗ್ಯೂ ದಾಸತ್ವವನ್ನಂಗೀಕರಿಸಿದೆಯಲ್ಲಾ. ಅಂತಹ ನೀನು ಅನಾಥ

ನಾಗಿಯೂ, ಬಂಧುಹೀನನಾಗಿಯೂ, ಇರುವ ನನ್ನನ್ನು ಬಿಟ್ಟು ಹೊರಟು ಹೋದೆಯಲ್ಲಾ, ನಾನು ಏನು ಅಪಕಾರ ಮಾಡಿದೆ? ನಿನ್ನ ಆ ಸಾಧುತ್ವವು ಈಗ ಎಲ್ಲಿ?

ದ್ರೌಪದಿ:—(ಎದ್ದು) ಮಹಾರಾಜನೇ, ಇಲ್ಲಿ ಹೀಗಿರುವುದೇಕೆ?

ಯುಧಿಷ್ಠಿರ:—ದ್ರೌಪದಿ, ಬೇರೆ ಏನು? ಆ ಕೀಚಕನನ್ನು ಸಂಹಾರ ಮಾಡಿ, ಬಕ, ಹಿಡಿಂಬ, ಕಿರ್ಮೀರರುಗಳನ್ನು ಕೊಂದ, ಮದಾಂಧನಾದ ಜರಾಸಂಧನ ಸಂಧಿ ಬಂಧಗಳನ್ನು ಛೇದಿಸಿದ ಗದೆಯಿಂದ ಅಲಂಕೃತವಾದ ಭುಜಗಳುಳ್ಳ ನಿನ್ನ ಪ್ರಿಯನೂ, ನನ್ನ ತಮ್ಮನೂ, ಅರ್ಜುನನ ಅಣ್ಣನೂ ಆದ ಭೀಮಸೇನನು ಅಸ್ತಮಯವಾಗಿ ಬಿಟ್ಟನು.

ದ್ರೌಪದಿ:—ಹಾ ನಾಥನೇ! ನನ್ನ ಕೇಶಪಾಶಗಳನ್ನು ನೀನು ಕಟ್ಟಬೇಡವೆ? ನಿನ್ನ ಪ್ರತಿಜ್ಞೆಯನ್ನು ನೀನು ಬಿಡುವುದು ಉಚಿತವಲ್ಲ. ಸ್ವಲ್ಪ ತಾಳು. ನಾನು ಬರುವೆನು. (ಎಂದು ಮೂರ್ಛಿತಳಾಗುವಳು.)

ಯುಧಿಷ್ಠಿರ:—(ಆಕಾಶವನ್ನು ನೋಡುತ್ತಾ) ಮಾತೆಯೇ, ಕುಂತಿಯೇ, ನಿನ್ನ ಪುತ್ರನ ನಡತೆಯನ್ನು ಕೇಳಿದೆಯಾ? ಹೀಗೆ ಅನಾಥನಾಗಿ ಅಳುತ್ತಿರುವ ನನ್ನನ್ನು ಒಂಟಿಯಾಗಿ ಬಿಟ್ಟು ಎಲ್ಲಿಯೋ ಹೊರಟುಹೋದನು. ಜರಾಸಂಧಾಂತಕನೇ, ಆಶ್ಚರ್ಯವಾದ ಗುಣಗಳಿಂದ ಕೂಡಿದ ನಿನಗೆ ಜನಗಳ ದೃಷ್ಟಿ ದೋಷದಿಂದ ಆಯುಸ್ಸು ಕಡಮೆಯಾಗಿ ಹೋಯಿತೇ? ನೀನು ಸಮಸ್ತ ಭೂಮಿಯನ್ನು ನನಗೆ ಕೊಟ್ಟು ರಾಜರುಗಳೆಲ್ಲರೂ ನನಗೆ ಕಪ್ಪ ಕೊಡುವಂತೆ ಮಾಡಿ ನಿನ್ನ ಪರಾಕ್ರಮವನ್ನು ನಾನು ಹೇಳಿದರೆ ನೀನು ನಾಚಿಕೆಪಡುತ್ತಿದ್ದೆಯಲ್ಲಾ! ಬಾಲ್ಯದಲ್ಲಿ ನಿನ್ನನ್ನು ನಾನು ಸದಾ ಬೈದಾಗ್ಯೂ ಕೋಪಗೊಳ್ಳದೆ ಸಂತೋಷವನ್ನೇ ತೋರಿಸುತ್ತಿದ್ದೆಯಲ್ಲಾ! ನನಗೆ ಗೌರವವನ್ನು ಕೊಡುವುದಕ್ಕೋಸ್ಕರ ವಿರಾಟನ ಮನೆಯಲ್ಲಿ ಅಡಿಗೆಯವನಾಗಿದ್ದೆಯಲ್ಲಾ! ಇದೆಲ್ಲವೂ ನಿನ್ನ ಅಲ್ಪಾಯುಸ್ಸಿಗೆ ಕಾರಣಗಳಾಗಿ ಕಂಡುಬಂದವು. ನಮ್ಮ ಭಾಗ್ಯಗಳನ್ನು ಸುಡಬೇಕು. ಪೂಜ್ಯನೇ, ಬಲರಾಮನೇ, ಕೃಷ್ಣನ ಅಣ್ಣನೇ, ಸುಭದ್ರಾ ಸಹೋದರನೇ, ಬಂಧುಜನ ಪ್ರಿಯನನ್ನು ನೀನು ಮನಸ್ಸಿನಲ್ಲಿ ಇಡಲಿಲ್ಲ. ಕ್ಷತ್ರಿಯ ಧರ್ಮವನ್ನು ನೀನು

ಯೋಚಿಸಲಿಲ್ಲ. ನಿನ್ನ ತಮ್ಮನೊಂದಿಗೆ ಅರ್ಜುನನಿಗಿದ್ದ ಸ್ನೇಹವನ್ನೂ ಲೆಕ್ಕಕ್ಕೆ ತರಲಿಲ್ಲ. ನಿನ್ನ ಶಿಷ್ಯರೆಲ್ಲರಲ್ಲಿಯೂ ಸ್ನೇಹವು ನಿನಗೆ ಸಮಾನವಾಗಿರಬೇಕಲ್ಲವೇ? ಹೀಗಿದ್ದಾಗ್ಯೂ ಮಂದಭಾಗ್ಯನಾದ ನನ್ನಲ್ಲಿ ಈ ರೀತಿಯಾಗಿ ವಿಮುಖನಾದೆಯಲ್ಲ? ಇದು ಯಾವ ಮಾರ್ಗವು? (ದ್ರೌಪದಿಯನ್ನು ನೋಡಿ) ಪಾಂಚಾಲಿಯೇ, ಏಳು, ಏಳು. ನಾವಿಬ್ಬರೂ ದುಃಖದಲ್ಲಿ ಒಂದೇ ಅಲ್ಲವೇ? ಮೂರ್ಛೆಯಿಂದ ಏಕೆ ನನ್ನನ್ನು ವಂಚಿಸುವೆ?

ದ್ರೌಪದಿ:—[ಪ್ರಜ್ಞೆಯನ್ನು ಹೊಂದಿ] ನಾಥನೇ, ದುಶ್ಶಾಸನನಿಂದ ಬಿಚ್ಚಿದ ಕೇಶಸಮೂಹಗಳನ್ನು ದುರ್ಯೋಧನನ ರಕ್ತದಿಂದ ನೆನೆದ ಕೈಯಿಂದ ಕಟ್ಟು, ಕಟ್ಟು. ಬುದ್ಧಿಮಂತಿಕೆಯೇ, ನಿನ್ನ ಎದುರಿಗೆ ನನ್ನ ನಾಥನು ಪ್ರತಿಜ್ಞೆ ಮಾಡಿದನಲ್ಲವೇ? ಈಗ ಭೀಮನ ಕೈಯಿಂದ ನನ್ನ ಕೇಶ ಬಂಧನವನ್ನು ಮಾಡಿಕೊಳ್ಳುವಂತೆ ನೀನು ಹೇಳಲಿಲ್ಲವೇ? ಅದ್ದರಿಂದ ಅರಳಿದ ಹೂವುಗಳನ್ನು ತೆಗೆದುಕೊಂಡು ಬಾ. ಹೂವುಗಳಿಲ್ಲದೇ ನನಗೆ ಜಡೆಯನ್ನು ಹೆಣೆಯಿರಿ. ಪುರುಷೋತ್ತಮನ ಮಾತನ್ನು ನಡೆಸಿರಿ. ಅವನು ಸುಳ್ಳು ಹೇಳುವುದಿಲ್ಲ. (ಅತಿ ಸಂತಾಪದಿಂದ) ನಾನು ಏಕೆ ಹೀಗೆ ಹೇಳಿದೆನು? ಆರ್ಯಪುತ್ರನು ಬಹಳ ದೂರ ಹೊರಟು ಹೋದನು. ಅವನನ್ನನುಸರಿಸುವೆನು. ಮಹಾರಾಜನೇ, ಚಿತೆಯನ್ನು ಸಿದ್ಧಪಡಿಸುವಂತೆ ಮಾಡು. ನೀನೂ ಕೂಡ ಕ್ಷತ್ರಿಯಧರ್ಮವನ್ನನುಸರಿಸಿ ನಾಥನ ಪ್ರಾಣಗಳನ್ನು ಕಳೆದ ಶತ್ರುವಿಗೆ ಎದುರಾಗು.

ಯುಧಿಷ್ಠಿರ.—ಪಾಂಚಾಲಿಯು ಹೇಳಿದ್ದು ನ್ಯಾಯವಾಗಿದೆ. ಕಂಚುಕಿಯೇ, ಚಿತೆಯನ್ನು ಸಿದ್ಧಪಡಿಸಿ ನಮಗೆ ಸಾಧನೆಯನ್ನು ನೀಡುವಂತೆ ಮಾಡು. ನನಗೆ ಧನುಸ್ಸನ್ನು ತಂದುಕೊಡು. ಅಥವಾ ಧನುಸ್ಸು ತಾನೆ ಏಕೆ? ಆ ಭೀಮನ ಶರೀರದ ರಕ್ತವು ಸೋರಿ ಬಿದ್ದು ಕೆಂಪಾಗಿರುವ ಗದೆಯನ್ನೇ ತೆಗೆದುಕೊಂಡು ಭೀಮನ ತಮ್ಮನಾದ ಅರ್ಜುನನು ಮಾಡಿದಂತೆ ಮಾಡುವುದೇ ಶ್ರೇಯಸ್ಕರವಾಗಿದೆ. ಬಿಲ್ಲಿನಿಂದೇನು ಪ್ರಯೋಜನ?

ಕಂಚುಕಿ.—ಮಹಾರಾಜನೇ, ನಿನ್ನ ಮನಸ್ಸು ಪ್ರಾಣವನ್ನು ಬಿಡುವುದರಲ್ಲಿ ವಿಮುಖವಾದರೆ ಇಲ್ಲಿಯೇ ಪ್ರಾಣತ್ಯಾಗ ಮಾಡು. ವ್ಯರ್ಥವಾಗಿ ಅಲ್ಲಿ ಏಕೆ ಹೋಗಬೇಕು?

ಕಂಚುಕಿ:—(ಕೋಪದಿಂದ) ಛೀ! ಮೂರ್ಖನೇ, ನಿನ್ನ ಮನಸ್ಸು ಸಾತ್ವಿಕನದಂತಿಲ್ಲ. ರಾಕ್ಷಸನದಾಗಿದೆ.

ಚಾರ್ವಾಕ:—(ಭಯದಿಂದ ತನ್ನಲ್ಲಿ ತಾನು) ನನ್ನನ್ನು ತಿಳಿದುಕೊಂಡುಬಿಟ್ಟನೋ! (ಪ್ರಕಾಶವಾಗಿ) ಅಯ್ಯಾ ಕಂಚುಕಿಯೇ, ನಾನು ಹೇಳಿದ್ದೇನೆಂದರೆ, ಅರ್ಜುನ ದುರ್ಯೋಧನರುಗಳಿಗೆ ಗದೆಯಿಂದಲ್ಲವೇ ಯುದ್ಧವಾದದ್ದು. ಗದೆಯ ವಿಷಯದಲ್ಲಿ ಅವರ ಭುಜಬಲವನ್ನು ಪ್ರತ್ಯಕ್ಷವಾಗಿಯೇ ನೋಡಿದ್ದೇನೆ. ದುಃಖಿತನಾದ ರಾಜನಿಗೆ ಮತ್ತೊಂದು ಅನಿಷ್ಟವು ಶ್ರವಣವಾಗಬಾರದೆಂದು ಹೀಗೆ ಹೇಳಿದೆನು.

ಯುಧಿಷ್ಠಿರ:—(ಕಣ್ಣೀರು ಬಿಡುತ್ತಾ) ಮುನಿಗಳೇ ಸರಿಯಾಗಿ ಹೇಳಿದಿರಿ.

ಕಂಚುಕಿ:—ಮಹಾರಾಜನೇ, ದುಃಖಪಟ್ಟು ದೇವತೆಗಳಿಗೆ ಸಮಾನನಾದ ನೀನೂ ಕೂಡ ಪ್ರಾಕೃತನಂತೆ ಕ್ಷತ್ರಿಯ ಧರ್ಮವನ್ನು ಬಿಡುವುದು ಉಚಿತವೇ?

ಯುಧಿಷ್ಠಿರ:—ಅಯ್ಯ ಜಯಂಧರನೇ, ನಾನು ಕೆಟ್ಟೆನು. ಮಹಾಯುಧದಂತೆ ಉದ್ದವಾದ ಬಾಹುಗಳುಳ್ಳ, ಕುಬೇರನ ಪಟ್ಟಣದಲ್ಲಿಯೂ, ಇಂದ್ರನ ಅಮರಾವತಿಯಲ್ಲಿಯೂ ಪರಾಕ್ರಮವನ್ನು ತೋರಿಸಿದ, ಭೀಮಾರ್ಜುನರು ಭೂಮಿಯಲ್ಲಿ ಬಿದ್ದು ಹೊರಳುತ್ತಿರುವುದನ್ನೂ ಅವರ ಶತ್ರುವು ಕೃತಾರ್ಥನಾಗಿರುವುದನ್ನೂ ಹೇಗೆ ತಾನೇ ನೋಡಿ ಸಹಿಸಲಿ? ಎಲೌ ದ್ರೌಪದಿಯೇ. ನನ್ನ ದುರ್ನಡತೆಯಿಂದ ನೀನಿಂತಹ ದುರವಸ್ಥೆಯನ್ನು ಹೊಂದಿದೆ. ಅಗ್ನಿಯು ಪ್ರಜ್ವಲಿಸುತ್ತಲಿದೆ. ಬಂಧುಗಳನ್ನು ಒಟ್ಟಿಗೆ ನಮಸ್ಕರಿಸೋಣ.

ದ್ರೌಪದಿ:—ಅಯ್ಯನೇ. ಕಾಷ್ಠಗಳೆಲ್ಲವನ್ನೂ ಕೂಡಿಸು. ಏನು! ಯಾರೂ ಇಲ್ಲ! ಮಹಾರಾಜನ ಆಜ್ಞೆಯನ್ನು ನಡೆಸುವವರು ಕಾಣುವದಿಲ್ಲ. ನಾಥನೇ, ಎಲ್ಲರೂ ತಿರಸ್ಕರಿಸುವರು.

ಚಾರ್ವಾಕ:—ಪತಿಯನ್ನನುಸರಿಸಿ ಸಾಯುವುದು ಭರತಕುಲದ ಸ್ತ್ರೀಯರಿಗೆ ಉಚಿತವಾದದ್ದು.

ಯುಧಿಷ್ಠಿರ:—ಮಹರ್ಷಿಗಳೇ, ಪರಿಜನರು ಸ್ವಲ್ಪವೂ ಕೇಳುವುದಿಲ್ಲ. ನೀವಾದರೂ ಇಂಧನವನ್ನು ಒದಗಿಸಿಕೊಡುವುದರಲ್ಲಿ ಸಹಾಯ ಮಾಡಿರಿ.

ಚಾರ್ವಾಕ:—ಇದು ಋಷಿಗಳಿಗೆ ವಿರುದ್ಧವಾದದ್ದು. (ತನ್ನಲ್ಲಿ ತಾನು) ನನ್ನ ಮನೋರಥವು ಪರಿಪೂರ್ಣವಾಯಿತು. ಇವರಿಗೆ ಕಾಣಿಸಿಕೊಳ್ಳದೆ ಸಮೀಪದಲ್ಲಿಯೇ ದೊಡ್ಡ ಹೊಗೆಯ ರಾಶಿಯನ್ನು ಉರಿಸುತ್ತೇನೆ. (ಪ್ರಕಾಶವಾಗಿ) ರಾಜನೇ ನನಗೆ ಇಲ್ಲಿ ಇರುವುದಕ್ಕೆ ಆಗುವುದಿಲ್ಲ (ಎಂದು ಹೊರಟುಹೋಗುವನು)

ಯುಧಿಷ್ಠಿರ:—ಪಾಂಚಾಲಿಯೇ, ಯಾರೂ ನನ್ನ ಮಾತನ್ನು ಕೇಳುವುದಿಲ್ಲ. ನಾನೇ ಕಾಷ್ಠಗಳನ್ನು ಕೂಡಿಸಿ ಚಿತೆಯನ್ನು ಜ್ವಲಿಸುವಂತೆ ಮಾಡುವೆನು.

ದ್ರೌಪದಿ.—ಮಹಾರಾಜನೇ, ಜಾಗ್ರತೆಪಡಿಸು, (ತೆರೆಯಲ್ಲಿ ಕಲಕಲಧ್ವನಿಯಾಗುವುದು.)

ದ್ರೌಪದಿ:—(ಕೇಳಿ ಭಯದಿಂದ) ಬಲದಿಂದ ಕೊಬ್ಬಿದ ದಾನವನೊಬ್ಬನ ಧ್ವನಿಯಂತೆ ಕೇಳಿಬರುತ್ತದೆ. ಇನ್ನೂ ಯಾವುದಾದರೂ ಒಂದು ಅನಿಷ್ಟವನ್ನು ಕೇಳಬೇಕಾಗಬಹುದು. ಆದರಿಂದ ಸಾವಕಾಶಮಾಡಬೇಕಾಗಬಹುದು. ಸಾವಕಾಶಮಾಡಬೇಡ.

ಯುಧಿಷ್ಠಿರ:—ಸಾವಕಾಶವಿಲ್ಲ. (ಎಂದು ನಿಲ್ಲುತ್ತಾ) ಪಾಂಚಾಲಿಯೇ, ಪೂಜ್ಯಳಾದ ಮಾತೆಗೂ ಸಪತ್ನೀಜನಕ್ಕೂ ಏನಾದರೂ ಹೇಳುವುದಿದ್ದರೆ, ಹೇಳಿ ಪರಿಜನರನ್ನು ಕಳುಹಿಸಿಬಿಡು.

ದ್ರೌಪದಿ:—ಮಹಾರಾಜನೇ, ಮಾತೆಗೆ 'ಬಕ ಹಿಡಿಂಬ, ಕಿಮ್ಮೀರ, ಜರಾಸಂಧ ಕೀಚಕರೇ ಮೊದಲಾದವರನ್ನು ಸಂಹರಿಸಿದ ನಿನ್ನ ಮಧ್ಯಮ ಪುತ್ರನು ನನ್ನ ಮೇಲಿನ ಪಕ್ಷಪಾತದಿಂದ ಪರಲೋಕಕ್ಕೆ ಹೋದನು' ಎಂದು ಹೇಳಿ ಕಳುಹಿಸುವೆನು.

ಯುಧಿಷ್ಠಿರ:—ಬುದ್ಧಿಮತಿಯೇ, ನಮ್ಮ ತಾಯಿಗೆ ಅರಗಿನ ಮನೆಯು ಸುಡುತ್ತಿರುವಾಗ ಯಾರ ಭುಜಬಲದಿಂದ ನಿನ್ನ ಮಕ್ಕಳುಗಳೊಂದಿಗೆ ನೀನು ಬದುಕಿದೆಯೋ, ಆ ಬಲಶಾಲಿಯಾದ ನಿನ್ನ ಪ್ರಿಯಪುತ್ರನಿಗೆ ಉಂಟಾದ ದುಃಖವನ್ನು ನಿನಗೆ ನಾನು ಹೇಗೆ ತಿಳುಹಿಸಲಿ. ಆರ್ಯ ಜಯಂಧರನೇ, ನೀನು ಪಾಂಡವ ಕುಲಕ್ಕೆ ಬೃಹಸ್ಪತಿಯಾಗಿರುವೆ. ನಿನಗೆ ಚಿಕ್ಕವನಾಗಿರುವ ಮಾದ್ರೀಪುತ್ರನಾದ ಸಹದೇವನನ್ನು ಕುರಿತು, ಸಕಲ ಕುರುಕುಲಕ್ಕೆ ದಾವಾನ

ಜನಾದ ಯುಧಿಷ್ಠಿರನು ಪ್ರಿಯನಾದ ತಮ್ಮನಿಗಾಗಿ ಪರಲೋಕಕ್ಕೆ ಹೊರಟಿರುವನು. ಸಂತೋಷ ವ್ಯಸನಗಳಲ್ಲಿ ವ್ಯತ್ಯಾಸವನ್ನು ಹೊಂದದೆ ಒಂದೇ ರೂಪವಾದ ಮನಸ್ಸುಳ್ಳ ನಿನ್ನನ್ನು ಆಲಿಂಗನ ಮಾಡಿಕೊಂಡು ಶಿರಸ್ಸಿನಲ್ಲಿ ಅಘ್ರಾಣಮಾಡಿ ಪ್ರಾರ್ಥಿಸುತ್ತಾನೆ. ನೀನು ನನಗಿಂತಲೂ ವಯಸ್ಸಿನಲ್ಲಿ ಚಿಕ್ಕವನಾದಾಗ್ಯೂ, ಶಾಸ್ತ್ರಾವಧಾನದಲ್ಲಿ ಸಮಾನನಾಗಿರುವಿ. ಸಹನೆಯಲ್ಲಿಯೂ, ಬುದ್ಧಿಯಲ್ಲಿಯೂ ದೊಡ್ಡವನಾಗಿರುವಿ. ವೈದುಷ್ಯದಲ್ಲಿ ಗುರುವಾಗಿದ್ದೀಯೆ. ಆದಕಾರಣ ತಲೆಯಮೇಲೆ ಕೈಮುಗಿದುಕೊಂಡು ನಿನ್ನನ್ನು ಪ್ರಾರ್ಥಿಸುತ್ತೇನೆ. ನನ್ನಲ್ಲಿ ಸ್ನೇಹವನ್ನು ನೀನು ವಿರಳಮಾಡು. ತಂದೆಗೆ ತಿಲತರ್ಪಣವನ್ನು ಕೊಡುವಂಥವನಾಗು. ಮತ್ತು ಬಾಲ್ಯದಲ್ಲಿ ಬೆಳೆಸಲ್ಪಟ್ಟವನಾಗಿಯೂ, ಅಭಿಮಾನಿಯಾಗಿಯೂ, ಕಲ್ಲಿನಂತೆ ದೃಢವಾದ ಹೃದಯಸಾರವುಳ್ಳವನಾಗಿಯೂ ಇರುವ ನಕುಲನಿಗೆ 'ವತ್ಸನೇ ನೀನು ನಮ್ಮ ದಾರಿಯನ್ನು ಹಿಡಿಯಬೇಡ. ನಮ್ಮನ್ನು ಮರೆತು ಶಾಸ್ತ್ರದಿಂದ ನಿರ್ಮಲವಾದ ಪ್ರಜ್ಞೆಯಿಂದ ತಮ್ಮನಾದ ಸಹದೇವನೊಂದಿಗೆ ಸೇರಿ ಸತ್ತುಹೋದ ಪಾಂಡುವಿಗೆ ನಿವಾಪೋದಕವನ್ನು ಕೊಡುವುದಕ್ಕೆ ಜ್ಞಾತಿಗಳ ಮನೆಯಲ್ಲಿಯೋ, ಯಾದವರ ಕುಲದಲ್ಲಿಯೋ ಅಥವಾ ಕಾಡಿನಲ್ಲಿಯೋ ವಾಸಮಾಡಿಕೊಂಡು ಶರೀರವನ್ನು ಕಾಪಾಡಿಕೊ' ಎಂದು ತಿಳಿಸು. ಜಯಂಧರನೇ ಹೋಗು. ಜಾಗ್ರತೆಯಲ್ಲಿಯೇ ಚಿತೆಯನ್ನು ಮಾಡಬೇಕು.

ದ್ರೌಪದಿ:—ಬುದ್ಧಿಮತಿಕೆ, ಪ್ರಿಯಸಖಿಯಾದ ಸುಭದ್ರೆಯನ್ನು ಕುರಿತು 'ವತ್ಸೆಯಾದ ಉತ್ತರೆಯು ಗರ್ಭಿಣಿಯಾಗಿ ನಾಲ್ಕು ತಿಂಗಳಾಗಿದೆ. ಕುಲಪ್ರತಿಷ್ಠಾಪಕವಾದ ಆ ಗರ್ಭವನ್ನು ಸಾವಧಾನವಾಗಿ ಸಂರಕ್ಷಿಸು' ಎಂದು ಹೇಳು.

ಯುಧಿಷ್ಠಿರ:—ಕಷ್ಟ! ಕಷ್ಟ! ಕೊಂಬೆಗಳಿಂದ ಆಕಾಶವನ್ನು ಮುಚ್ಚುವಷ್ಟು ವಿಸ್ತಾರವಾಗಿ ಬೆಳೆದಿರುವ ದೊಡ್ಡ ಬುಡದಿಂದ ಕೂಡಿ ಇರುವ ಮಹಾವೃಕ್ಷವು ದೈವಯೋಗದಿಂದ ಸುಟ್ಟುಹೋದ ಮೇಲೆ ಆ ಸ್ಥಳದಲ್ಲಿ ಒಂದು ಮೊಳಕೆ ಹುಟ್ಟಿ ಅದರಿಂದ ನೆರಳು ದೊರಕುವುದೆಂದು ಜನಗಳು ಆಸೆಪಡುವುದು ಸ್ವಭಾವವಾಗಿರುವದು. ದ್ರೌಪದಿಯೇ, ಉದ್ದೇಶವನ್ನು ನೆರವೇರಿಸು. (ಕಂಚುಕಿಯನ್ನು ನೋಡಿ) ಆರ್ಯ ಜಯಂಧರನೇ, ನನ್ನ ಮೇಲೆ ಆಣೆಯಿಟ್ಟರೂ ಒಂದು ಹೆಜ್ಜೆ ಮುಂದೆ ಇಡುವುದಿಲ್ಲವೊ?

ಕಂಚುಕಿ:—ಹಾ ದೈವವೇ! ಪಾಂಡುಪುತ್ರರಾದ ಅಜಾತಶತ್ರು ಭೀಮಾರ್ಜುನ ನಕುಲ ಸಹದೇವರುಗಳಿಗೂ ಕೂಡ ಈ ದಾರುಣವಾದ ಪರಿಣಾಮವೇ? ಭೋಜಕುಲವನ್ನೆಲ್ಲಾ ಪವಿತ್ರಮಾಡಿದ ಕುಂತೀದೇವಿಯೇ, ನಿನ್ನ ಅಣ್ಣನ ಮಗ, ಕೃಷ್ಣನಿಗೆ ಅಣ್ಣ, ಅರ್ಜುನನಿಗೆ ಭಾವಮೈದ, ಕೌರವರನ್ನೆಲ್ಲಾ ನಾಶ ಮಾಡಿದ ಆಚಾರ್ಯ—ಈ ವಿಧವಾದ ಬಲರಾಮನು ಉನ್ಮತ್ತನಾಗಿಯೂ, ಮತ್ತನಾಗಿಯೂ, ತಮ್ಮ ಛಾಯೆಯಿಂದ ಭೂಮಿಯನ್ನು ಶೀತಳವಾಗಿ ಮಾಡುತ್ತಿದ್ದ ನಿನ್ನ ಮಕ್ಕಳುಗಳೆಲ್ಲರನ್ನೂ ನಾಶಮಾಡಿಬಿಟ್ಟನು. (ಎಂದು ಅಳುತ್ತಾ ಹೋಗುವನು.)

ಯುಧಿಷ್ಠಿರ:—ಆರ್ಯ ಜಯಂಧರನೇ.

ಕಂಚುಕಿ:—(ಹಿಂತಿರುಗಿ) ಏನಪ್ಪಣೆ.

ಯುಧಿಷ್ಠಿರ:—ಹೇಳಬೇಕಾದ್ದರಿಂದ ಹೇಳುತ್ತೇನೆ. ನಮ್ಮಗಳಿಗಿಷ್ಟು ಭಾಗ್ಯವಿಲ್ಲ. ಒಂದುವೇಳೆ ವತ್ಸನಾದ ಅರ್ಜುನನು ಜಯಶಾಲಿಯಾದರೆ ನಾನು ಹೇಳಿದೆನೆಂದು ನೀನು ಹೇಳಬೇಕು. ಬಲರಾಮನು ವತ್ಸನಾದ ಭೀಮನ ಮರಣದಲ್ಲಿ ಕಾರಣನೆನಿಸಿದನು, ಆದರೂ ಅವನು ನಿನಗೆ ಸಹಜ ಮಿತ್ರನಾದ ಕೃಷ್ಣನ ಅಣ್ಣನು. ಆದಕಾರಣ ಅವನಮೇಲೆ ಕೋಪಮಾಡಬೇಡ. ನನ್ನಲ್ಲಿ ಪ್ರೀತಿಯನ್ನಿಡಬೇಡ. ಕಾಡಿಗೆ ಹೊರಟುಹೋಗು. ನಿಷ್ಕರುಣರಾದ ಕ್ಷತ್ರಿಯರ ಮಾರ್ಗವನ್ನು ಹಿಡಿಯಬೇಡ.''

ಕಂಚುಕಿ:—ಅಪ್ಪಣೆ (ಎಂದು ಹೋಗುವನು.)

ಯುಧಿಷ್ಠಿರ:—(ಸಂತೋಷದಿಂದ) ಪಾಂಚಾಲಿಯೇ, ಬೆಂಕಿ ಉರಿಯುತ್ತಲಿದೆ. ವ್ಯಸನಾಕ್ರಾಂತರಾದ ನಮ್ಮಂತಿರುವ ಜನಗಳನ್ನು ಜ್ವಾಲೆಗಳೆಂಬ ಹಸ್ತಗಳಿಂದ ಕರೆಯುವಂತಿದೆ. ನನ್ನ ಶರೀರವನ್ನು ಇಂಧನವನ್ನಾಗಿ ಮಾಡುವೆನು.

ದ್ರೌಪದಿ:—ನನ್ನ ಈ ಕೊನೆಯ ಮಾತನ್ನು ಲಾಲಿಸಬೇಕು. ನಾನು ಮುಂದೆ ಪ್ರವೇಶಮಾಡುತ್ತೇನೆ.

ಯುಧಿಷ್ಠಿರ:—ಹಾಗಾದರೆ ಇಬ್ಬರೂ ಒಟ್ಟಿಗೆ ಪ್ರವೇಶಮಾಡೋಣ.

ಚೇಟಿ:—ಹಾ! ಪೂಜ್ಯರಾದ ಲೋಕಪಾಲಕರೇ, ಕಾಪಾಡಿರಿ, ಕಾಪಾಡಿರಿ. ಈ ದೊರೆಯು ಚಂದ್ರವಂಶದ ರಾಜರ್ಷಿಯು. ರಾಜಸೂಯ ಯಾಗದಲ್ಲಿ ಅಗ್ನಿ

ಯು ಷ್ನ ತೃಪ್ತಿಪಡಿಸಿದವನು. ಖಾಂಡವ ವನದಿಂದ ಅಗ್ನಿಗೆ ತೃಪ್ತಿಯನ್ನುಂಟುಮಾಡಿದ ಅರ್ಜುನನ ಹಿರಿಯಣ್ಣನು. ಮಹಾರಾಜ ಯುಧಿಷ್ಠಿರನು. ಈ ದೇವಿಯೂ ಕೂಡ ಪಾಂಚಾಲರಾಜಕುಲದೇವತೆಯಾದ ವೇದಿಮಧ್ಯದಲ್ಲಿ ಹುಟ್ಟಿದ ಯಾಜ್ಞಸೇನಿಯು. ಇವರಿಬ್ಬರೂ ಶರೀರದಲ್ಲಿ ನಿಷ್ಕರುಣರಾಗಿ ಬೆಂಕಿಗೆ ಇಂಧನವಾಗುತ್ತಲಿದಾರೆ. ಆದ್ದರಿಂದ ಕಾಪಾಡಿರಿ. (ಅವರ ಮುಂದೆ ಬಿದ್ದು) ಮಹಾರಾಜನಿಂದಲೂ ದೇವಿಯಿಂದಲೂ ಮಾಡುವ ವ್ಯವಸಾಯುವಿದೇನು?

ಯುಧಿಷ್ಠಿರ:—ಬುದ್ಧಿಮತಿಕೆ, ಪ್ರಿಯನಾದ ತಮ್ಮನನ್ನು ಕಳೆದುಕೊಂಡಾಗ ಏನು ಮಾಡಬೇಕೋ ಅದು. ಏಳು, ಏಳು. ನೀರು ತೆಗೆದುಕೊಂಡು ಬಾ.

ಚೇಟಿ:—ಅಪ್ಪಣೆ. (ಎಂದು ಹೋಗಿ ನೀರು ತುಂಬಿದ ಚಿನ್ನದ ಗಿಂಡಿಯನ್ನು ತರುವಳು.)

ಯುಧಿಷ್ಠಿರ:—ಪಾಂಚಾಲಿಯೇ, ನೀನೂ ಕೂಡ ನಿನ್ನಲ್ಲಿ ಪ್ರೇಮವುಳ್ಳ ಭೀಮನಿಗೂ ಪ್ರಿಯನಾದ ಅರ್ಜುನನಿಗೂ ಉದಕವನ್ನು ಕೊಡು.

ದ್ರೌಪದಿ:—ನೀನೇ ಉದಕವನ್ನು ಕೊಡು. ನಾನು ಅಗ್ನಿಯನ್ನು ಪ್ರವೇಶಿಸುತ್ತೇನೆ.

ಯುಧಿಷ್ಠಿರ:—ಲೋಕಾಚಾರವು ವಿಚಾರತಕ್ಕದ್ದಲ್ಲ. ಬುದ್ಧಿಮತಿಕೆ, ನೀರು ಕೊಡು.

ಚೇಟಿ:—(ನೀರನ್ನು ಬಿಡುವಳು.)

ಯುಧಿಷ್ಠಿರ:—(ಕಾಲು ತೊಳೆದುಕೊಂಡು, ಆಚಮನವನ್ನು ಮಾಡಿ, ಪ್ರಾಚೀನಾವೀತಿಯಾಗಿ) ಈ ಉದಕವು ಗಂಗಾಪುತ್ರನಾದ ನಮ್ಮ ಪಿತಾಮಹನಾದ ಭೀಷ್ಮಾಚಾರ್ಯನಿಗೆ. ಇದು ಪಿತಾಮಹನಾದ ವಿಚಿತ್ರವೀರ್ಯನಿಗೆ, (ಕಣ್ಣೀರಿನಿಂದ) ಅವನಿಗೆ ಇದು ಕಾಲ. ಈ ಉದಕವು ಪೂಜ್ಯನಾದ ಸ್ವರ್ಗಸ್ಥನಾದ ಪ್ರಸಿದ್ಧನಾದ ಪಿತನಾದ ಪಾಂಡುವಿಗೆ. ಎಲೈ ಪಾಂಡುವೇ. ಇನ್ನು ಪುನಃ ಈ ಉದಕವು ನಮ್ಮಿಂದ ನಿನಗೆ ಸಿಕ್ಕುವುದಿಲ್ಲ. ನನ್ನ ತಾಯಿಯೊಂದಿಗೆ ಈ ಉದಕವನ್ನು ಪಾನಮಾಡು. ಈ ಜಲಾಂಜಲಿಯು ಜಲಜದಂತೆ ಕೆಂಪಾದ ಕಣ್ಣುಗಳುಳ್ಳ ಭೀಮನಿಗೆ. ಭೀಮನೇ, ಇದು ನಿನಗೂ ನನಗೂ ಅವಿಭಕ್ತವಾಗಿರಲಿ. (ಒಂದು ಕ್ಷಣ ಸಹಿಸಿ) ನಿನಗೆ ಬಾಯಾರಿಕೆ ಇದ್ದರೂ ಸಹಿ

ಸಿಕೊ. ನಾನೂ ಜಾಗ್ರತೆಯೇ ಬಂದೆನು. ಅಥವಾ ಸುಕ್ಷತ್ರಿಯರ ಗತಿಯನ್ನು ಹೊರಟಿದ ವತ್ಸನನ್ನು ನಾನು ಹೊಂದಿದಾಗ್ಯೂ ಪುಣ್ಯಹೀನನಾದ್ದರಿಂದ ನೋಡುವುದಕ್ಕೂ ನಾನು ಯೋಗ್ಯನಲ್ಲ. ವತ್ಸ ಭೀಮಸೇ, ಮಾತೆಯ ಸ್ತನ್ಯವನ್ನು ಸಹಾ ನಾನು ಕುಡಿದ ಮೇಲೆ ನೀನು ಕುಡಿಯುತ್ತಿದ್ದೆ. ನನ್ನಲ್ಲಿ ಪ್ರೇಮವಿಟ್ಟು ನಾನು ಊಟಮಾಡಿ ಉಳಿದದ್ದನ್ನು ನೀನು ಊಟಮಾಡುತ್ತಿದ್ದೆ. ಯಜ್ಞಗಳಲ್ಲಿ ಸೋಮರಸವನ್ನು ಪಾನಮಾಡುವಾಗಲೂ, ನಾನು ಪಾನಮಾಡಿದ ನಂತರ ಪಾನಮಾಡುತ್ತಿದ್ದೆ. ಈಗ ಮಾತ್ರ ನನಗಿಂತಲೂ ಮೊದಲೇನೇ ನೀನು ಹೇಗೆ ಈ ತರ್ಪಣೋದಕವನ್ನು ಪಾನಮಾಡುವಿ? ಪಾಂಚಾಲಿಯೇ, ನೀನೂ ಜಲಾಂಜಲಿಯನ್ನು ಕೊಡು.

ದ್ರೌಪದಿ:—ಚೇಟಿಯೇ ನೀರು ಕೊಡು.

ಚೇಟಿ:—(ಹಾಗೆಯೇ ಮಾಡುವಳು.)

ದ್ರೌಪದಿ:—ಅಂಜಲಿಯಲ್ಲಿ ನೀರನ್ನು ತುಂಬಿಕೊಂಡು ಮಹಾರಾಜನೇ ಯಾರಿಗೆ ಕೊಡಲಿ.

ಯುಧಿಷ್ಠಿರ:—ದ್ರೌಪದಿಯೇ, ಹಠಾತ್ತಾಗಿ ಸ್ವರ್ಗಕ್ಕೆ ಹೋಗಿ, ಮಾತೆಯನ್ನು ಶೋಕದಲ್ಲಿ ಗಾಂಧಾರಿಗೆ ಸಮಾನಳನ್ನಾಗಿ ಮಾಡಿದ ಭೀಮನಿಗೆ ಕೊಡು.

ದ್ರೌಪದಿ:—ನಾಥನೇ, ಈ ಉದಕವು ಸ್ವರ್ಗಕ್ಕೆ ಹೋದರೂ ಇದು ಪಾದೋದಕವಾಗಲಿ.

ಯುಧಿಷ್ಠಿರ:—ಅರ್ಜುನನ ಅಣ್ಣನಾದ ಭೀಮಸೇನ, ಪ್ರತಿಜ್ಞೆಯನ್ನು ಪೂರ್ತಿಮಾಡದೇನೇ ನೀನು ಸ್ವರ್ಗಕ್ಕೆ ಹೋದದ್ದರಿಂದ ನಿನ್ನ ಪ್ರಿಯೆಯು ಕೇಶಗಳನ್ನು ಬಿಚ್ಚಿಯೇ ಈಗ ಜಲಾಂಜಲಿಯನ್ನು ಕೊಟ್ಟಿರುವಳು.

ದ್ರೌಪದಿ:—ಮಹಾರಾಜನೇ, ಏಳು, ನಿನ್ನ ತಮ್ಮನು ದೂರ ಹೊರಟುಹೋಗಿಬಿಡುತ್ತಾನೆ.

ಯುಧಿಷ್ಠಿರ:—(ಬಲಗಣ್ಣು ಹಾರುವುದನ್ನು ಸೂಚಿಸುತ್ತ) ಪಾಂಚಾಲಿಯೇ, ಈ ಶುಭನಿಮಿತ್ತಗಳು ಭೀಮನನ್ನು ಕಂಡು ನೀನು ಸಂಭಾವಿಸುತ್ತೀಯೆ ಎಂದು ಸೂಚಿಸುತ್ತವೆ. ಆಗಲಿ. ಶೀಘ್ರವಾಗಿಯೇ ಅಗ್ನಿಯನ್ನು ಪ್ರವೇಶಿಸೋಣ.

ದ್ರೌಪದಿ:—ಪೂಜ್ಯನಾದ ಅಗ್ನಿಯು ಪ್ರಜ್ವಲಿಸುತ್ತಿದ್ದಾನೆ.

(ತೆರೆಯಲ್ಲಿ ಕಲಕಲಧ್ವನಿಯಾಗುವುದು.)

ಕಂಚುಕಿ:—(ಸಂಭ್ರಾಂತನಾಗಿ ಪ್ರವೇಶಿಸಿ) ಮಹಾರಾಜನೇ, ಕಾಪಾಡು, ಕಾಪಾಡು. ಇಗೋ! ದುರಾತ್ಮನಾದ ಕೌರವಾಧಮನು ರಕ್ತವನ್ನು ಮೈಯಲ್ಲಿ ಸುರಿಸಿಕೊಂಡು ಕೆಂಪಾದ ವಸ್ತ್ರವುಳ್ಳವನಾಗಿ ಕೆಂಡದಂತೆ ಕಣ್ಣುಳ್ಳವನಾಗಿ ಭಯಂಕರವಾದ ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ಕಾಲದಂಡವನ್ನು ಧರಿಸಿದ ಯಮನಂತೆ ದ್ರೌಪದಿಯನ್ನು ಅಲ್ಲಿ ಇಲ್ಲಿ ಹುಡುಕುತ್ತ ಇತ್ತಕಡೆಯೇ ಬರುತ್ತಿರುವನು.

ಯುಧಿಷ್ಠಿರ:—ನನ್ನ ಸಂದೇಹವು ನಿರ್ಣಯವಾಯಿತು. ಅಯ್ಯೋ! ಗಾಂಡೀವಧಾರಿಯೇ! (ಎಂದು ಮೂರ್ಛಿತನಾಗುವನು.)

ದ್ರೌಪದಿ:—ಹಾ! ಆರ್ಯಪುತ್ರನೇ. ಸ್ವಯಂವರದಲ್ಲಿ ಸ್ವಯಂ ಗ್ರಹಿಸಿದವನೇ, ಅರ್ಜುನನೇ. ನಿನ್ನ ಸಹೋದರನೊಬ್ಬನನ್ನೇ ಅನುಸರಿಸಿದೆಯಾ! ತಾಯಿಯನ್ನೂ, ನನ್ನನ್ನೂ ನೋಡುವುದಿಲ್ಲವೆ!

ಕಂಚುಕಿ:—ಮಹಾರಾಜನೇ, ಸಮಾಧಾನ ಹೊಂದು.

ಯುಧಿಷ್ಠಿರ:—ಹಾ! ವತ್ಸ, ಸವ್ಯಸಾಚಿಯೇ, ಕುಪಿತನಾದ ಈಶ್ವರನ ದೇಹವನ್ನೂ ಕೂಡ ಶೋಷಣ ಮಾಡಿದ ಸಾಹಸಿಯೇ. ನಿವಾತ, ಕವಚರುಗಳನ್ನು ಸಂಹರಿಸಿ ದೇವಲೋಕವನ್ನು ನಿಷ್ಕಂಟಕವನ್ನಾಗಿ ಮಾಡಿದೆ. ಬದರಿಕಾಶ್ರಮದಲ್ಲಿ ನರನೇ ತಾಪಸನಾಗಿದ್ದೆ. ದ್ರೋಣಾಚಾರ್ಯರ ಪ್ರಿಯ ಶಿಷ್ಯನಾಗಿದ್ದೆ. ಮಹಾಸ್ತ್ರಶಿಕ್ಷೆಯಲ್ಲಿ ಭೀಷ್ಮಾಚಾರ್ಯನನ್ನು ಸಂತೋಷಪಡಿಸಿದೆ. ರಾಧೇಯಕುಲವನ್ನು ಹಾಳುಮಾಡಿದೆ. ದುರ್ಯೋಧನನನ್ನು ಗಂಧರ್ವರಿಂದ ಬಿಡಿಸಿದೆ. ನನ್ನ ಮಾತನ್ನು ಯಾವಾಗಲೂ ಕಾಪಾಡುತ್ತಿದ್ದೆಯಲ್ಲ. ಪಾಂಡ್ಯಕುಲಕಮಲರಾಜಹಂಸನೇ ಎಲ್ಲಿ ಹೋದೆ? ನಿನ್ನಲ್ಲಿ ಪ್ರೇಮವುಳ್ಳ ತಾಯಿಯನ್ನು ನಮಸ್ಕರಿಸದೆ, ನನ್ನನ್ನು ಆಲಿಂಗಿಸದೆ, ನನ್ನನ್ನು ಕೇಳದೆ, ಸ್ವಯಂವರದಲ್ಲಿ ವರಿಸಿದ ನಿನಗೆ ಯೋಗ್ಯಳಾದ ದ್ರುಪದಾತ್ಮಜೆಯನ್ನೂ ನೋಡದೆ, ವತ್ಸನೇ, ದೀರ್ಘಪ್ರಯಾಣವನ್ನು ಹೇಗೆ ಮಾಡಿದೆ? (ಎಂದು ಮೂರ್ಛೆ ಹೋಗುವನು.)

ಕಂಚುಕಿ:—ಕಷ್ಟ! ಕಷ್ಟ! ಈ ದುರಾತ್ಮನಾದ ನೀಚ ಕೌರವನು ಧಾರಾಳವಾಗಿ ಇಲ್ಲಿಗೇ ಬರುತ್ತಿರುವನು.

ಯುಧಿಷ್ಠಿರ:—ಸರ್ವಪ್ರಕಾರದಿಂದಲೂ ಈ ಕಾಲಕ್ಕೆ ಇದೇ ಪ್ರತಿಕ್ರಿಯೆಯು. ಬುದ್ಧಿಮತಿಕೆ ಪಾಂಚಾಲಿಯನ್ನು ಚಿತೆಯ ಸಮೀಪಕ್ಕೆ ಕರೆದುಕೊಂಡು ಹೋಗು. ನಾನೂ ಜೊತೆಯಲ್ಲಿಯೇ ಬರುವೆನು.

ಚೇಟಿ:—ಕಾಪಾಡಿ, ಕಾಪಾಡಿ.

ಕಂಚುಕಿ:—(ಚೇಟಿಯನ್ನು ನೋಡಿ) ಎಲೌ ಚೇಟಿಯೇ, ನಮ್ಮಗಳನ್ನು ಕಾಪಾಡುವುದಕ್ಕೆ ನೀನು ದೇವಿಯ ಸಹೋದರನಾದ ಧೃಷ್ಟದ್ಯುಮ್ನನನ್ನಾಗಲೀ, ನಕುಲ-ಸಹದೇವರನ್ನಾಗಲೀ ಯಾರನ್ನು ಕೂಗುವೆ, ಭೀಮಾರ್ಜುನರು ಅಸ್ತಂಗತರಾಗಿ ಮಹಾರಾಜನು ಈ ಅವಸ್ಥೆಯಲ್ಲಿರುವಾಗ ಕಾಪಾಡುವುದರ ಅವಕಾಶವೇ ಇಲ್ಲ. (ತೆರೆಯಲ್ಲಿ) ಎಲೈ ಸಮಂತಪಂಚಕದ ಸುತ್ತಲೂ ಸುತ್ತುವ ರಕ್ತಪಾನದಿಂದ ಮದಿಸಿರುವ ಯಕ್ಷ, ರಾಕ್ಷಸ, ಗೃಧ್ರ, ಬೇತಾಳ, ವಾಯಸ, ಕಂಕ, ಜಂಬುಕಗಳಿರಾ, ವಿರಳರಾದ ಯೋಧರುಗಳಿರಾ, ನನ್ನನ್ನು ನೋಡಿ ಹೆದರಬೇಡಿರಿ. ದ್ರೌಪದಿ ಇರುವ ಸ್ಥಳವನ್ನು ಹೇಳಿರಿ. ಅವಳ ಲಕ್ಷಣವನ್ನು ಹೇಳುತ್ತೇನೆ ಕೇಳಿರಿ. ವಿಲಾಸದಿಂದ ತೊಡೆಯನ್ನು ತಟ್ಟುತ್ತಿದ್ದ ದುರ್ಯೋಧನನ ಮುಂದೆ ವಸ್ತ್ರಾಪಹರಣವನ್ನನುಭವಿಸಿರುವವಳು. ದುಶ್ಶಾಸನನ ಹಸ್ತಕರ್ಷಣದಿಂದ ಬಿಚ್ಚಿದ ಕೇಶವುಳ್ಳವಳು. ಆ ದ್ರೌಪದಿಯು ಈಗ ಎಲ್ಲಿರುವಳು ಹೇಳಿರಿ.

ಕಂಚುಕಿ:—ದೇವಿ, ಯಾಜ್ಞಸೇನಿ, ಅನಾಥನಾದ ನೀನು ಭರತಕುಲಕ್ಕೆ ಕಳಂಕಪ್ರಾಯನಾದ ಇವನಿಂದ ಈಗ ಅವಮಾನವನ್ನು ಹೊಂದುವಿ.

ಯುಧಿಷ್ಠಿರ:—(ಜಾಗ್ರತೆಯಾಗಿ ಎದ್ದು) ಪಾಂಚಾಲಿಯೇ ಹೆದರಬೇಡ. ನನ್ನ ಧನುಸ್ಸನ್ನೂ, ಬತ್ತಳಿಕೆಯನ್ನೂ ತೆಗೆದುಕೊಂಡು ಬಾ. ದುರಾತ್ಮನೇ, ಹಾಳಾದ ದುರ್ಯೋಧನನೇ, ಬಾ! ಗದಾಕೌಶಲದಿಂದುಂಟಾದ ನಿನ್ನ ಭುಜಗರ್ವಸರ್ವಸ್ವವನ್ನೂ ಬಾಣವರ್ಷದಿಂದ ಹೋಗಲಾಡಿಸುವೆನು. ಮತ್ತು ಎಲೈ ಕುಲಾಧಮನೇ, ಜರಾಸಂಧನ ಪ್ರಾಣಾಪಹಾರ ಮಾಡಿದ ಪ್ರಿಯನಾದ ತಮ್ಮನನ್ನೂ, ಈಶ್ವರನೊಂದಿಗೆ ಯುದ್ಧ ಮಾಡಿದ ಚಿಕ್ಕನಾದ ಅರ್ಜುನನನ್ನೂ ಕೂಡ ಕಾಣದೇ ಜೀವಿಸುವುದಕ್ಕೆ ನಾನು ಕೀಳ ಮನಸ್ಸುಳ್ಳ ನಿನ್ನಂತೆ ಶಕ್ತ

ನಲ್ಲ. ಅಪರೆ ಬಾಣವರ್ಷಗಳಿಂದ ನಿನ್ನ ಪ್ರಾಣಗಳನ್ನು ತೆಗೆಯುವುದಕ್ಕೆ ಸಮರ್ಥನಲ್ಲವೆ? (ಅನಂತರದಲ್ಲಿ ಗದಾಪಾಣಿಯಾದ, ರಕ್ತದಿಂದ ಸರ್ವಾಂಗವೂ ನೆನೆದ ಭೀಮಸೇನನು ಪ್ರವೇಶಿಸುವನು.)

ಭೀಮಸೇನ:—ಎಲೈ ಸ್ಯಮಂತಪಂಚಕದಲ್ಲಿ ಸಂಚರಿಸುವ ಸೈನಿಕರುಗಳಿರಾ, ಏಕೆ ಇಷ್ಟು ಗಾಬರಿ ಪಡುತ್ತೀರಿ? ನಾನು ರಾಕ್ಷಸನಲ್ಲ. ನಾನು ಭೂತನಲ್ಲ, ಶತ್ರುರಕ್ತದಿಂದ ನೆನೆದ ಶರೀರವುಳ್ಳ ಕುಪಿತನಾದ ಕ್ಷತ್ರಿಯನಾಗಿದ್ದೇನೆ. ಮಹಾಪ್ರತಿಜ್ಞೆಯೆಂಬ ಸಮುದ್ರವನ್ನು ಪೂರ್ಣವಾಗಿ ದಾಟಿದೇನೆ. ಯುದ್ಧಾಗ್ನಿಯ ಜ್ವಾಲೆಯಿಂದ ದಗ್ಧರಾಗಿ ಉಳಿದುಕೊಂಡಿರುವ ಎಲೈ ಕ್ಷತ್ರಿಯ ವೀರರೇ! ಹೆದರಬೇಡಿರಿ. ಹೆದರಿಕೊಂಡು, ಸತ್ತುಬಿದ್ದಿರುವ ಆನೆಗಳಲ್ಲಿಯೂ ಮತ್ತು ಕುದುರೆಗಳಲ್ಲಿಯೂ ಏತಕ್ಕೆ ಅವಿತುಕೊಳ್ಳುವಿರಿ?

ಕಂಚುಕಿ:—ದೇವಿ, ಪಾಂಡುರಾಜನ ಸೊಸೆಯೇ ಏಳು, ಏಳು. ಈ ಸಮಯದಲ್ಲಿ ಜಾಗ್ರತೆಯಾಗಿ ಚಿತಾಪ್ರವೇಶವೇ ಒಳ್ಳೆಯದು.

ದ್ರೌಪದಿ:—(ಜಾಗ್ರತೆಯಾಗಿ ಎದ್ದು) ಈಗಲೂ ನಾನು ಚಿತೆಯ ಸಮೀಪಕ್ಕೆ ಹೋಗುವುದಿಲ್ಲವೇ? (ಚಿತೆಗೆ ಅಭಿಮುಖವಾಗಿ ನಿಲ್ಲುವಳು.)

ಯುಧಿಷ್ಠಿರ:—ಯಾರಲ್ಲಿ! ನನ್ನ ಧನುಸ್ಸನ್ನೂ, ಬತ್ತಳಿಕೆಯನ್ನೂ ತೆಗೆದುಕೊಂಡು ಬಾ. ಇದು ಏನು! ಪರಿಜನರು ಯಾರೂ ಇಲ್ಲವೇ ಇಲ್ಲ. ಇರಲಿ, ಬಾಹುಯುದ್ಧದಿಂದಲೇ ಬಲವಾಗಿ ಹಿಡಿದು ಬೆಂಕಿಯಲ್ಲಿ ತಳ್ಳುವೆನು. (ಒಂದು ಸೊಂಟವನ್ನು ಕಟ್ಟುವನು.)

ಕಂಚುಕಿ:—ದೇವಿಯೇ, ದುಶ್ಶಾಸನನ ಹಸ್ತಸ್ಪರ್ಶದಿಂದ ದೂಷಿತಗಳಾದ ಈ ಕೇಶಗಳು ಕಣ್ಣಿಗೆ ತೊಂದರೆಯನ್ನುಂಟುಮಾಡುತ್ತವೆ. ಸೇರಿಸಿ ಕಟ್ಟು. ಪ್ರತೀಕಾರದ ಅವಧಿಯು ಈಗ ಮುಗಿಯಿತು. ಚಿತಾ ಸಮೀಪಕ್ಕೆ ಜಾಗ್ರತೆಯಾಗಿ ಹೋಗೋಣ.

ಯುಧಿಷ್ಠಿರ:—ದೇವಿಯೇ, ದುರಾತ್ಮನಾದ ಭೀಮಾರ್ಜುನರ ಶತ್ರುವಾದ ನೀಚ ದುರ್ಯೋಧನನನ್ನು ಸಂಹರಿಸದೆ ಕೇಶಗಳನ್ನು ಕಟ್ಟಕೂಡದು.

ಭೀಮ:—(ಜಾಗ್ರತೆಯಾಗಿ ಪ್ರವೇಶಿಸಿ) ಪಾಂಚಾಲಿಯೇ, ದುಶ್ಶಾಸನನಿಂದ ವಿಕೀರ್ಣವಾದ ಕೇಶಗಳನ್ನು ನಾನು ಬದುಕಿರುವಾಗ ನಿನ್ನ ಕೈಯಿಂದ ಕಟ್ಟ

ಕೂಡದು. ಎಲ್ಲಿ ಹೋಗುವಿ ನಿಲ್ಲು. (ಎಂದು ಕೇಶಗಳನ್ನು ಹಿಡಿದು ಕೊಳ್ಳುವುದಕ್ಕೆ ಹೋಗುವನು.)

ಯುಧಿಷ್ಠಿರ:—(ವೇಗದಿಂದ ಭೀಮನನ್ನು ಗಟ್ಟಿಯಾಗಿ ಹಿಡಿದುಕೊಂಡು) ದುರಾತ್ಮನೇ, ಭೀಮಾರ್ಜುನ ಶತ್ರುವೇ, ನೀಚದುರ್ಯೋಧನನೇ, ಬಾಲ್ಯ ಮೊದಲುಗೊಂಡು ಪ್ರತಿದಿನವೂ ಅಪರಾಧವನ್ನಾಡಿ, ಮದಿಸಿ ಭುಜಗಳ ಕೊಬ್ಬಿನಿಂದ ರಾಜಪುತ್ರರನ್ನು ಜಯಿಸಿದ ನೀನು ಈಗ ನನ್ನ ಭುಜಪಂಜರದ ಮಧ್ಯದಲ್ಲಿ ಸಿಕ್ಕಿದ್ದೀಯೆ. ಪಾಪಿಷ್ಠನೇ, ಜೀವಿಸಿ ಈಗ ಒಂದು ಹೆಜ್ಜೆಯನ್ನೂ ಮುಂದಿಡಲಾರೆ.

ಭೀಮ:—ಇದು ಏನು? ಆರ್ಯನು ದುರ್ಯೋಧನನೆಂದು ಸಂದೇಹಪಟ್ಟು ಕೋಪದಿಂದ ಕಠಿನವಾಗಿ ಆಲಿಂಗಿಸಿಕೊಳ್ಳುವನು. ಆರ್ಯನೇ, ಪ್ರಸನ್ನನಾಗು. ಪ್ರಸನ್ನನಾಗು.

ಕಂಚುಕಿ:—(ಸಮೀಪಕ್ಕೆ ಬಂದು ಚೆನ್ನಾಗಿ ನೋಡಿ ಸಂತೋಷದಿಂದ) ಮಹಾರಾಜನೇ ಮೋಸಹೋಗುವಿ. ಇವನು ಆಯುಷ್ಮಂತನಾದ ಕುಮಾರ ಭೀಮಸೇನನು. ದುರ್ಯೋಧನನ ರಕ್ತದಿಂದ ಶರೀರವೆಲ್ಲವೂ ಕೆಂಪಾಗಿರುವುದರಿಂದ ಚೆನ್ನಾಗಿ ಕಾಣುವುದಿಲ್ಲ. ಇನ್ನೂ ಸಂಶಯವೇಕೆ?

ಚೇಟಿ:—(ದ್ರೌಪದಿಯನ್ನು ತಬ್ಬಿಕೊಂಡು) ದೇವಿಯೇ ಸಮಾಧಾನ ಹೊಂದು. ಕುಮಾರ ಭೀಮಸೇನನು ಪ್ರತಿಜ್ಞೆಯನ್ನು ಪೂರೈಸಿ ವೇಣೀಸಂಹಾರಕ್ಕೋಸ್ಕರ ನಿನ್ನನ್ನು ಹುಡುಕುತ್ತಲಿದ್ದಾನೆ.

ದ್ರೌಪದಿ:—ಸಖಿಯೇ, ಮಂಗಳವಚನಗಳಿಂದ ನನ್ನನ್ನು ಸಮಾಧಾನಪಡಿಸುವೆಯೊ?

ಕಂಚುಕಿ:—ಮಹಾರಾಜನೇ ಮೋಸಹೋಗುವಿ. (ಎಂದು ಪೂರ್ವದಂತೆಯೇ ಹೇಳುವನು.)

ಯುಧಿಷ್ಠಿರ:—(ಸಂತೋಷದಿಂದ) ಆರ್ಯ ಜಯಂಧರನೇ, ನಿಜವಾಗಿ ತಿಳಿದೆಯಾ! ನಿಜವಾಗಿ ಭೀಮನೇ.

ಕಂಚುಕಿ:—ಇವನು ನಿನ್ನ ತಮ್ಮನ ಶತ್ರುವಾದ ನೀಚ ದುರ್ಯೋಧನನಲ್ಲ.

ಭೀಮ:—ಆರ್ಯನೇ, ಅಜಾತಶತ್ರುವೇ, ಕುಂತೀಪುತ್ರನೇ. ಭೀಮಾರ್ಜುನರ ಅಣ್ಣನೆ, ಇನ್ನೂ ನೀಚ ದುರ್ಯೋಧನನು ಹೇಗಿರುವನು? ನಿನ್ನ ಶತ್ರುವಾದ ಪಾಂಡವರನ್ನು ತಿರಸ್ಕರಿಸುತ್ತಿದ್ದ ಆ ದುರಾತ್ಮನ ಶರೀರವು ಭೂಮಿಯಲ್ಲಿ ಬಿದ್ದಿದೆ.

ಅವನ ರಕ್ತವು ಭೀಮನ ಶರೀರಕ್ಕೆ ಗಂಧಲೇಪನವಾಗಿದೆ. ಅವನ ರಾಜ್ಯಲಕ್ಷ್ಮಿಯು ಚತುಸ್ಸಮುದ್ರದ ಮಧ್ಯದಲ್ಲಿರುವ ಭೂಮಿಯೊಂದಿಗೆ ಆರ್ಯನಾದ ನಿನ್ನನ್ನು ಸೇರಿರುವುದು. ಅವನ ಭೃತ್ಯರು, ಮಿತ್ರರುಗಳು, ಭಟರುಗಳು, ಕುರುಕುಲವೆಲ್ಲವೂ ಯುದ್ಧಾಗ್ನಿಯಲ್ಲಿ ಭಸ್ಮವಾಗಿ ಹೋದರು. ರಾಜನೇ, ನಾನು ಹೇಳುವ ಧಾರ್ತರಾಷ್ಟ್ರ ಎಂಬ ಶಬ್ದಮಾತ್ರ ಉಳಿದಿದೆ.

ಯುಧಿಷ್ಠಿರ:—(ಭೀಮನನ್ನು ಬಿಟ್ಟು) ನೋಡಿ, ಕಣ್ಣೀರನ್ನು ಒರಸಿಕೊಳ್ಳುತ್ತಾ.

ಭೀಮ:—ಆರ್ಯನೇ. ನಿನಗೆ ಜಯವಾಗಲಿ. (ಎಂದು ಕಾಲಿಗೆ ಬೀಳುವನು.)

ಯುಧಿಷ್ಠಿರ:—(ಸಂತೋಷದಿಂದ ಎಬ್ಬಿಸಿ ತಬ್ಬಿಕೊಂಡು, ಆನಂದಬಾಷ್ಪವನ್ನು ಸುರಿಸುತ್ತಾ) ಆಹಾ. ವೃಕೋದರನೇ, ಭೀಮಸೇನನೇ, ಕುಂತೀಪುತ್ರನೇ, ಅರ್ಜುನನ ಅಗ್ರಜನೇ, ಪಾಂಡವಕುಲಪ್ರದೀಪನೇ, ನನ್ನ ಆಜ್ಞಾಪಾಲಕನೇ.—

ಭೀಮ:—ಆರ್ಯನೇ ಏನಪ್ಪಣೆ!

ಯುಧಿಷ್ಠಿರ:—ವತ್ಸನೇ, ಕಣ್ಣಿನಲ್ಲಿ ನೀರು ತುಂಬಿಕೊಂಡಿರುವುದರಿಂದ ಚಂದ್ರನಂತೆ ಆಹ್ಲಾದಕರವಾದ ನಿನ್ನ ಮುಖವನ್ನು ಸರಿಯಾಗಿ ನೋಡುವುದಕ್ಕಾಗುವುದಿಲ್ಲ. ನೀನು ಅರ್ಜುನನೊಂದಿಗೆ ಜೀವಿಸಿರುವೆಯಾ ಹೇಳು.

ಭೀಮ:—ಆರ್ಯನೇ, ಸಮಸ್ತ ಶತ್ರುಗಳನ್ನು ಸಂಹರಿಸಿ ನೀನು ರಾಜನಾಗಿರುವಾಗ ಭೀಮನಿಗೂ, ಅರ್ಜುನನಿಗೂ ವಿಪತ್ತಿಲ್ಲವೇನು?

ಯುಧಿಷ್ಠಿರ:—(ಸ್ನೇಹದಿಂದ ಪುನಃ ತಲೆಯನ್ನು ಮೂಸಿಕೊಂಡು) ಆಹಾ, ಶತ್ರುನಿಧನವು ಆಗಿರಲಿ. ಮೊದಲು ಇದನ್ನು ಹೇಳು. ಬಕನನ್ನು ಸಂಹಾರ ಮಾಡಿದ ಭೀಮನು ನೀನೇಯೋ! ನನ್ನ ಪ್ರಿಯ ಸಹೋದರನಾದ ಭೀಮನು ನೀನೇಯೋ ?

ಭೀಮ:—ಆರ್ಯನೇ, ನಾನೇ ಅವನು.

ಯುಧಿಷ್ಠಿರ:—ಜರಾಸಂಧನನ್ನು ಸಂಹರಿಸಿದ ಭೀಮನು ನೀನೋ ?

ಭೀಮ:—ಹೌದು. ಒಂದು ಕ್ಷಣ ನನ್ನನ್ನು ಬಿಡು.

ಯುಧಿಷ್ಠಿರ:—ಇನ್ನೇನು ಉಳಿದಿರುವುದು.

ಭೀಮ:—ಉಳಿದಿರುವುದು ಬಹಳವಾಗಿದೆ. ದುಶ್ಶಾಸನ ದುರ್ಯೋಧನರುಗಳ ರಕ್ತದಲ್ಲಿ ನೆನೆದಿರುವ ಈ ಕೈಯಿಂದ ದುಶ್ಶಾಸನನಿಂದ ಎಳೆಯಲ್ಪಟ್ಟಿದ್ದ ಪಾಂಚಾಲಿಯ ಕೇಶಪಾಶವನ್ನು ಕಟ್ಟುವೆನು.

ಯುಧಿಷ್ಠಿರ:—ಹೋಗು, ದೀನಳಾದ ದ್ರೌಪದಿಯು ವೇಣೀಸಂಹಾರವನ್ನನುಭವಿಸಲಿ.

ಭೀಮ:—(ದ್ರೌಪದಿಯ ಸಮೀಪಕ್ಕೆ ಬಂದು) ಪಾಂಚಾಲರಾಜಪುತ್ರಿಯೇ, ದೈವಾನುಕೂಲ್ಯದಿಂದ ರಿಪುಗಳು ಕ್ಷಯವಾಗಿ ನೀನು ವೃದ್ಧಿಹೊಂದುತ್ತಿರುವಿ.

ದ್ರೌಪದಿ:—ನಾಥನಿಗೆ ಜಯವಾಗಲಿ (ಎಂದು ಅರ್ಧೋಕ್ತಿಯಿಂದ,) ಭಯದಿಂದ ಹಿಂದೆ ಸರಿಯುವಳು.

ಭೀಮ!—ಭೀರುವೆ, ರಾಜಪುತ್ರಿಯೇ, ಈ ವಿಧವಾಗಿರುವ ನನ್ನನ್ನು ನೋಡಿ ಹೆದರಿಕೆಯು ಸಾಕು. ನೋಡು, ರಾಜಸಭೆಯಲ್ಲಿ ಯಾವ ನರಪಶುವು ನಿನ್ನನ್ನು ಎಳೆದನೋ, ಆ ದುಶ್ಶಾಸನನ ಘಟ್ಟಿಯಾಗಿರುವ ರಕ್ತಗಳು ನಾನು ಕುಡಿದು ಉಳಿದುದು ನನ್ನ ಕೈಯಲ್ಲಿವೆ ಮುಟ್ಟಿನೋಡು. ಎಲೌ ಕಾಂತೆಯೇ, ನನ್ನ ಗದೆಯಿಂದ ಪುಡಿಯಾದ ತೊಡೆಗಳುಳ್ಳ ಕುರುರಾಜನ ರಕ್ತವನ್ನು ನಿನ್ನ ಅವಮಾನದಿಂದುಂಟಾದ ಬೆಂಕಿಯನ್ನಾರಿಸಿಕೊಳ್ಳುವುದಕ್ಕೋಸ್ಕರ ಅಭಿಷೇಕ ಮಾಡಿಕೊಂಡಿದ್ದೇನೆ. ಬುದ್ಧಿಮತಿಕೆ, ಈಗ ಆ ಭಾನುಮತಿ ಎಲ್ಲಿರುವಳು? ಪಾಂಡವ ಪತ್ನಿಯನ್ನು ಅವಳು ಹಾಸ್ಯ ಮಾಡುತ್ತಿದ್ದಳಲ್ಲವೆ? ಯಜ್ಞವೇದಿಕೆಯಲ್ಲಿ ಹುಟ್ಟಿದ ಎಲೈ ಯಾಜ್ಞಸೇನಿಯೇ.

ದ್ರೌಪದಿ:—ನಾಥನೇ. ಅಪ್ಪಣೆಯಾಗಬೇಕು.

ಭೀಮ:—ನಾನು ಹಿಂದೆ ಹೇಳಿದ್ದು ಜ್ಞಾಪಕವಿದೆಯೋ! ಗದೆಯಿಂದ ದುರ್ಯೋಧನನ ತೊಡೆಯನ್ನು ಪುಡಿಮಾಡಿ ಅವನ ರಕ್ತದಿಂದ ಕೆಂಪಾದ ಈ ಕೈಯಿಂದ ನಿನ್ನ ಕೇಶವನ್ನು ಕಟ್ಟುತ್ತೇನೆಂದು ಹೇಳಿದ್ದೆನಷ್ಟೆ.

ದ್ರೌಪದಿ:—ನಾಥನೇ, ಚೆನ್ನಾಗಿ ಜ್ಞಾಪಕವಿದೆ. ಅನುಭವಿಸುತ್ತಲೂ ಇದ್ದೇನೆ.

ಭೀಮ:—(ಅವಳ ವೇಣಿಯನ್ನು ಕಟ್ಟುತ್ತಾ) ಧಾರ್ತರಾಷ್ಟ್ರಕುಲ ಕಾಳರಾತ್ರಿಯಾದ, ದುಶ್ಶಾಸನನಿಂದ ಎಳೆಯಲ್ಪಟ್ಟ, ವೇಣಿಯನ್ನು ಈಗ ಕಟ್ಟಿಕೊ.

ದ್ರೌಪದಿ:—ನಾಥನೇ, ಈ ವ್ಯಾಪಾರವು ನನಗೆ ಮರೆತುಹೋಗಿದೆ. ನಿನ್ನ ಅನುಗ್ರಹದಿಂದ ಪುನಃ ಕಲಿಯುತ್ತೇನೆ.

ಚೇಟಿ.—(ವೇಣಿಯನ್ನು ಕಟ್ಟುವಳು.)

(ತೆರೆಯಲ್ಲಿ)·ಹತಶೇಷರಾದ ರಾಜರುಗಳಿಗೆ ಕ್ಷೇಮವಾಗಲಿ. ದ್ರೌಪದಿಯು ಬಿಚ್ಚಿದ ಯಾವ ಕೇಶಪಾಶದಿಂದ ಪಾಂಡವರುಗಳು ಕುಪಿತರಾಗಿ

ಶತ್ರುಗಳನ್ನು ಸಂಹರಿಸಿ. ಶತ್ರುರಾಜರ ಅಂತಃಪುರದ ಸ್ತ್ರೀಯರುಗಳ ಕೇಶಪಾಶಗಳೆಲ್ಲಾ ಹೇಗೆ ಬಿಚ್ಚುವಂತೆ ಮಾಡಿದರೋ ಅಂತಹ ಕುರುಗಳಿಗೆ ಧೂಮಕೇತುಪ್ರಾಯನಾದ, ಕುಪಿತನಾದ ಯಮನಂತಿದ್ದ ಆ ದ್ರೌಪದಿಯ ಕೇಶಪಾಶವು ವೃಕೋದರನಿಂದ ಕಟ್ಟಲ್ಪಟ್ಟಿತು. ಇನ್ನು ಪ್ರಜೆಗಳಿಂದ ಉಂಟಾಗುವ ಸಂಹಾರವು ನಿಲ್ಲಲಿ. ರಾಜಕುಲಕ್ಕೆ ಕ್ಷೇಮವಾಗಲಿ.

ಯುಧಿಷ್ಠಿರ:—ದೇವಿಯೇ, ಆಕಾಶದಲ್ಲಿ ಸಂಚರಿಸುತ್ತಿರುವ ಸಿದ್ಧರು ಈ ವೇಣೀ ಸಂಹಾರವನ್ನು ಶ್ಲಾಘಿಸುತ್ತಲಿದ್ದಾರೆ.

(ಕೃಷ್ಣಾರ್ಜುನರು ಪ್ರವೇಶಿಸುವರು.)

ಕೃಷ್ಣ:—ಶತ್ರುಗಳಿಲ್ಲದವರೂ ಸಂತುಷ್ಟರಾಗಿ, ತಮ್ಮಂದಿರೊಡನೆ ಪ್ರಕಾಶಿಸುವ ಯುಧಿಷ್ಠಿರ ಮಹಾರಾಜನೇ ಜಯಶೀಲನಾಗು.

ಅರ್ಜುನ:—ಆರ್ಯನಿಗೆ ಜಯವಾಗಲಿ.

ಯುಧಿಷ್ಠಿರ:—(ಮುಂದೆ ನೋಡಿ ಸಂತೋಷದಿಂದ) ಇವನು ಭಗವಂತನಾದ ಪುಂಡರೀಕಾಕ್ಷನು. ಇವನು ವತ್ಸನಾದ ಅರ್ಜುನನು. ಭಗವಂತನೇ, ನನಗೆ ಜಯಕ್ಕಿಂತಲೂ ಬೇರೆ ಇನ್ನೇನಿರುವುದು! ನಾರಾಯಣನಾದ ನೀನು ಮಂಗಳವನ್ನು ಹೇಳು. ಸಂಕಲ್ಪಮಾತ್ರದಿಂದ ಮಹದಹಂಕಾರಾದಿ ತತ್ತ್ವಗಳನ್ನು ಸೃಷ್ಟಿಸಿ, ಅವುಗಳ ಸಂರಕ್ಷಣೆಕ್ಕೂ ಉಪಸಂಹಾರಕ್ಕೂ ಕಾರಣನಾಗಿ ಅಜರನಾಗಿಯೂ, ಅಮರನಾಗಿಯೂ, ಅಚಿಂತ್ಯನಾಗಿಯೂ ಇರುವ ನಿನ್ನನ್ನು ಧ್ಯಾನ ಮಾಡಿದ ಮಾತ್ರದಿಂದಲೇ ಸಂಸಾರಿ ಜನರು ದುಃಖಗಳನ್ನು ಹೊಂದುವುದಿಲ್ಲ. ಅಂತಹ ನಿನ್ನನ್ನು ಪ್ರತ್ಯಕ್ಷವಾಗಿ ನೋಡುತ್ತಿರುವ ನನಗೆ ದುಃಖ ನಿವೃತ್ತಿಪೂರ್ವಕವಾಗಿ ಸುಖವಲ್ಲದೆ ಮತ್ತೇನು? (ಆಲಿಂಗನ ಮಾಡಿಕೊಳ್ಳುವನು) ಅರ್ಜುನನೇ ಬಾ, ಆಲಿಂಗನ ಮಾಡಿಕೋ. (ಅರ್ಜುನನು ಆಲಿಂಗಿಸುವನು.)

ಕೃಷ್ಣ:—ಪೂಜ್ಯರಾದ ವ್ಯಾಸ, ವಾಲ್ಮೀಕಿ, ಪರಶುರಾಮ, ಜಾಬಾಲಿ ಮೊದಲಾದ ಮಹರ್ಷಿಗಳು ನಕುಲ, ಸಹದೇವ, ಧೃಷ್ಟದ್ಯುಮ್ನ, ಸಾತ್ಯಕಿ ಮೊದಲಾದ ಸೇನಾಪತಿಗಳೂ, ಯಾದವ, ಮಗಧ, ಮತ್ಸ್ಯ, ಕಳಿಂಗರೇ ಮೊದಲಾದ ರಾಜಕುಮಾರರುಗಳೂ, ತೀರ್ಥೋದಕಗಳನ್ನು ತಮ್ಮ ಹೆಗಲಮೇಲೆ ಹೊ

ತ್ತುಕೊಂಡು ಇನ್ನು ಅಭಿಷೇಕ ಮಂಗಳವನ್ನು ನಿರ್ವಹಿಸುವುದಕ್ಕೆ ಸಿದ್ಧರಾಗಿದ್ದಾರೆ. ನಾನು ಚಾರ್ವಾಕನೆಂಬ ರಾಕ್ಷಸನಿಂದ ನೀನು ಮೋಸಹೋಗಿರುವೆಯೆಂದು ವ್ಯಾಸರಿಂದ ತಿಳಿದು ಅರ್ಜುನನೊಂದಿಗೆ ನಿನ್ನ ಸಮೀಪಕ್ಕೆ ಜಾಗ್ರತೆಯಾಗಿ ಬಂದೆನು.

ಯುಧಿಷ್ಠಿರ:—ದುರಾತ್ಮನಾದ ಚಾರ್ವಾಕನಿಂದ ನಾವು ಮೋಸಹೋದೆವೆ?

ಭೀಮ:—(ಕೋಪದಿಂದ) ದುರ್ಯೋಧನನ ಸ್ನೇಹಿತನಾದ ನೀಚ ರಾಕ್ಷಸನು ಈಗ ಎಲ್ಲಿರುವನು! ಅವನು ಬಹಳ ಚಿತ್ತಭ್ರಾಂತಿಯನ್ನುಂಟುಮಾಡಿದನು.

ಕೃಷ್ಣ:—ಆ ದುರಾತ್ಮನನ್ನು ನಕುಲನು ನಿಗ್ರಹಿಸಿದನು. ಮಹಾರಾಜನೇ, ನಿನ್ನ ಇಷ್ಟವಿನ್ನೇನಿರುವುದು; ಹೇಳು.

ಯುಧಿಷ್ಠಿರ:—ಪುಂಡರೀಕಾಕ್ಷನೇ, ನೀನು ಪ್ರಸನ್ನನಾದರೆ ಯಾವುದನ್ನು ತಾನೆ ಕೊಡುವುದಿಲ್ಲ? ನಾನಾದರೋ ಮನುಷ್ಯಸಾಧಾರಣಕ್ಕೂ ಆಶೆಗೆ ಪಾರವಿಲ್ಲವೆಂಬ ಬುದ್ಧಿಯಿಂದ ಯಾವುದನ್ನೂ ನಾನು ಪ್ರಾರ್ಥಿಸಲಾರೆನು. ನೀನೇ ನೋಡು. ಸಮಸ್ತ ವಿಪ್ರಕುಲವೂ ಸಂತೃಪ್ತವಾಯಿತು. ಪಾಂಡವರೆಲ್ಲರೂ ಅಕ್ಷತರಾಗಿ ನಿಂತರು. ನನ್ನ ಮನೆಯಲ್ಲಿ ಬಿದ್ದ ಪಾಂಚಾಲಿಯ ಅವಮಾನ ಸಮುದ್ರವು ದಾಟಲ್ಪಟ್ಟಿತು. ಪುರುಷೋತ್ತಮನಾದ ನೀನು ಬಹುಪ್ರೇಮದಿಂದ ನನ್ನನ್ನು ಮಾತನಾಡಿಸುತ್ತಲಿದ್ದೀಯೆ. ಪ್ರಸನ್ನನಾದ ನಿನ್ನಿಂದ ಇದಕ್ಕಿಂತಲೂ ಬೇರೆ ಕೇಳಿಕೊಳ್ಳುವುದೇನಿರುವುದು? ಆದರೂ ನೀನು ಸಂತುಷ್ಟನಾಗಿರುವುದರಿಂದ ನಿನ್ನ ಅನುಗ್ರಹದಿಂದ ಹೀಗೆ ಆಗಲಿ. ಮನುಷ್ಯರು ಉದಾರ ಬುದ್ಧಿಯುಳ್ಳವರಾಗಿ ಬಹುಕಾಲ ಬದುಕಲಿ. ಪುರುಷೋತ್ತಮನಾದ ನಿನ್ನಲ್ಲಿ ಅವ್ಯಭಿಚಾರಿಯಾದ ಭಕ್ತಿಯು ಬರಲಿ. ರಾಜರುಗಳು ಜನಗಳಲ್ಲಿ ಪ್ರೀತಿಯುಳ್ಳವರಾಗಿಯೂ, ಜನಗಳಿಗೆ ಸಕಲ ವಿಧಗಳಲ್ಲಿಯೂ ಬಂಧುಗಳಾಗಿಯೂ, ಗುಣಾಗುಣಗಳಲ್ಲಿ ವಿವೇಕವುಳ್ಳವರಾಗಿಯೂ, ಭೂಮಂಡಲಕ್ಕೆ ಅಲಂಕಾರಪ್ರಾಯರಾಗಿಯೂ ಆಗಲಿ. ತಥಾಸ್ತು.

(ಎಲ್ಲರೂ ಹೊರಟು ಹೋಗುವರು.)

ಇತಿ ಷಷ್ಠಾಂಕಃ

ಸಂಪೂರ್ಣಂ.